

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಏಪ್ರಿಲ್ 22 ಶುಕ್ರವಾರ 2022

ಸಂಪುಟ: 43 | ಸಂಚಿಕೆ: 07 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಇಂದಿನಿಂದ ದ್ವಿತೀಯ ಪಿಯುಸಿ ಪರೀಕ್ಷೆ

ಮೈಸೂರು ಜಿಲ್ಲೆಯಲ್ಲಿ 50 ಕೇಂದ್ರಗಳು, 35,141 ವಿದ್ಯಾರ್ಥಿಗಳು ನೋಂದಣಿ

ಮೈಸೂರು,ಏ.21(ಆರ್‌ಕೆ)–ರಾಜ್ಯಾದ್ಯಂತ ನಾಳೆ (ಏ.22)ಯಿಂದ ದ್ವಿತೀಯ ಪಿಯುಸಿ ಪರೀಕ್ಷೆಗಳು ಆರಂಭವಾಗಲಿವೆ. ಮೈಸೂರು ನಗರದ 26 ಸೇರಿದಂತೆ ಜಿಲ್ಲೆಯಾದ್ಯಂತ ಒಟ್ಟು 50 ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, 35,141 ಮಂದಿ ಪರೀಕ್ಷೆಗೆ ನೋಂದಣಿಯಾಗಿದ್ದಾರೆ. ಜಿಲ್ಲಾದ್ಯಂತ ಪರೀಕ್ಷೆಗೆ ಸಕಲ ಸಿದ್ಧತೆ ಮಾಡಲಾಗಿದ್ದು, ಕೇಂದ್ರದ ಸುತ್ತ 200 ಮೀ. ವ್ಯಾಪ್ತಿಯಲ್ಲಿ ಸೆಕ್ಷನ್ 144 ರೀತ್ಯಾ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ●8ನೇ ಪುಟಕ್ಕೆ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಳಿವು–ಉಳಿವು ಪ್ರಧಾನಿ ನಿರ್ಧಾರಕ್ಕೆ



●ಬಿಜೆಪಿ–ಆರ್‌ಎಸ್‌ಎಸ್ ಮುಖಂಡರ ಸಭೆ ತೀರ್ಮಾನ

ಇನ್ನೆರಡು ದಿನದಲ್ಲಿ ಮಹತ್ತರ ನಿರ್ಧಾರ ಸಾಧ್ಯತೆ

ನವದೆಹಲಿ, ಏ.21– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಅಧಿಕಾರದಲ್ಲಿ ಮುಂದುವರೆಸುವುದು ಇಲ್ಲವೇ ಬದಲಾವಣೆ ಮಾಡುವ ನಿರ್ಧಾರ ಪ್ರಧಾನಿ ಮೋದಿಯವರಿಗೆ ಬಿಡಲಾಗಿದೆ. ಅದರಂತೆ ಇನ್ನೆರಡು ದಿನದಲ್ಲಿ ಪ್ರಧಾನಿಯವರಿಂದ ಮಹತ್ತರ ತೀರ್ಮಾನ ಹೊರ ಬೀಳುವ ಸಾಧ್ಯತೆಗಳಿವೆ.

ಗುರುವಾರ ನವದೆಹಲಿಯಲ್ಲಿ ನಡೆದ ಬಿಜೆಪಿ ಹಾಗೂ ಆರ್‌ಎಸ್‌ಎಸ್ ಮುಖಂಡರ ಉನ್ನತ ಮಟ್ಟದ ಸಭೆಯಲ್ಲಿ ಕರ್ನಾಟಕದ ಬಗ್ಗೆ ಸುದೀರ್ಘ ಚರ್ಚೆ ನಡೆಸಿದ ನಂತರ ಈ ನಿರ್ಧಾರಕ್ಕೆ ಬರಲಾಗಿದೆ. ●8ನೇ ಪುಟಕ್ಕೆ

ಆಮ್ ಆದ್ಮಿಗೆ ಅಧಿಕಾರ ನೀಡಿದರೆ ವಿದ್ಯುತ್, ನೀರು, ಆರೋಗ್ಯ, ಶಿಕ್ಷಣ ಉಚಿತ: ಕೇಜ್ರಿವಾಲ್



ಬೆಂಗಳೂರು,ಏ.21(ಕೆಎಂಶಿ)–ಕರ್ನಾಟಕದಲ್ಲಿರುವ ನಲವತ್ತು ಪರ್ಸೆಂಟ್ ಕಮಿಷನ್‌ನ ಸರ್ಕಾರವನ್ನು ಬೇರು ಸಮೇತ ಕಿತ್ತು ಸ್ವಚ್ಛ ಚಾರಿತ್ರ್ಯವುಳ್ಳ ಆಮ್ ಆದ್ಮಿ ಪಕ್ಷವನ್ನು ಕೈಹಿಡಿಯಿರಿ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ರಾಜ್ಯದ ಜನತೆಗೆ ಕರೆ ನೀಡಿದ್ದಾರೆ.

ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ದೆಹಲಿ, ಪಂಜಾಬ್ ಮಾದರಿಯಲ್ಲೇ ಉಚಿತ ವಿದ್ಯುತ್, ನೀರು, ಆರೋಗ್ಯ, ಶಿಕ್ಷಣ ನೀಡುವ ಭರವಸೆಯಿತ್ತಿದ್ದಾರೆ. ನಿಮ್ಮ ಬೆವರಿನ ಹಣವನ್ನು ನಾವು ಪರ್ಸೆಂಟೇಜ್ ಆಗಿ ತೆಗೆದುಕೊಳ್ಳುವುದಿಲ್ಲ. ಅದನ್ನು ನಿಮಗೆ ಹಿಂತಿರುಗಿಸುವುದರಿಂದ ●8ನೇ ಪುಟಕ್ಕೆ













ಮುಡಾ ಕಾರ್ಯಾಚರಣೆ: ವಿಜಯನಗರ 3ನೇ ಹಂತದಲ್ಲಿ 100 ಕೋಟಿ ರೂ. ಮೌಲ್ಯದ ಆಸ್ತಿ ರಕ್ಷಣೆ

ಆಟದ ಮೈದಾನಕ್ಕಾಗಿ ಮೀಸಲಾದ 6-13 ಎಕರೆ ಜಾಗದಲ್ಲಿ ತಲೆ ಎತ್ತಿದ್ದ ಶೆಡ್‌ಗಳ ತೆರವು

ಮೈಸೂರು, ಏ.21(ಆರ್‌ಕೆ)– ಆಟದ ಮೈದಾನಕ್ಕೆಂದು ಮೀಸಲಿರಿಸಿದ್ದ ಜಾಗದಲ್ಲಿ ಅನಧಿಕೃತವಾಗಿ ನಿರ್ಮಿಸಿದ್ದ ಶೆಡ್‌ಗಳನ್ನು ತೆರವುಗೊಳಿಸಿರುವ ಮುಡಾ ಅಧಿಕಾರಿಗಳು ಸುಮಾರು 100 ಕೋಟಿ ರೂ. ಮೌಲ್ಯದ 6–13 ಎಕರೆ ಜಾಗವನ್ನು ವಶಕ್ಕೆ ಪಡೆದಿದ್ದಾರೆ.

ಪ್ರಾಧಿಕಾರದ ಆಯುಕ್ತ ಡಾ.ಡಿ.ಬಿ.ನಟೇಶ್ ನಿರ್ದೇಶನದಂತೆ ಗುರುವಾರ ಮುಂಜಾನೆ 5.30ರಿಂದ ಮಧ್ಯಾಹ್ನ 1.30 ಗಂಟೆವರೆಗೆ ಕಾರ್ಯಾಚರಣೆ ನಡೆಸಿದ ಅಧಿಕಾರಿಗಳು, ಶೆಡ್ ನಿರ್ಮಿಸಿ ಹಸುಗಳನ್ನು ಸಾಕುತ್ತಿದ್ದವರನ್ನು ತೆರವುಗೊಳಿಸಿ ಆಸ್ತಿಯನ್ನು ವಶಕ್ಕೆ ಪಡೆದರು.

ಮೈಸೂರು ತಾಲೂಕು ಕಸಬಾ ಹೋಬಳಿ, ಹಿನಕಲ್ ಗ್ರಾಮದ ಸರ್ವೆ ನಂ.264ರಲ್ಲಿ 6–13 ಎಕರೆ ಜಾಗವನ್ನು ವಿಜಯನಗರ 3ನೇ ಹಂತದ ಬಡಾವಣೆಗಾಗಿ 1984ರಲ್ಲಿ ಅಧಿಸೂಚನೆ ಹೊರಡಿಸಿ ಸ್ವಾಧೀನಪಡಿಸಿಕೊಂಡಿದ್ದು, ಆ ವೇಳೆ 'ಬೀಳು' ಎಂದು ನಮೂದಿಸಲಾಗಿತ್ತು. ಭೂ ಸ್ವಾಧೀನ ಸಂದರ್ಭ ದಾಖಲೆಗಳಂತೆ ಈ ಆಸ್ತಿ ಸರ್ಕಾರಿ ಬೀಳು ಎಂದು ದಾಖಲಾಗಿದ್ದರಿಂದ ಸರ್ಕಾರದ ಹೆಸರಲ್ಲಿ 1986ರಲ್ಲಿ ಬಂದೋಬಸ್ತ್ ಮಾಡಲಾಗಿತ್ತು. ಜಮೀನಿನ ಸಂಬಂಧ ಕೆಲವರು ಸಲ್ಲಿಸಿದ್ದ ದಾಖಲೆಯನ್ನು ಹೈಕೋರ್ಟ್ ತಿರಸ್ಕರಿಸಿ ಅಧಿಸೂಚಿತ ಉದ್ದೇಶಕ್ಕೆ ಆ ಜಾಗವನ್ನು ಬಳಸಬೇಕೆಂದು ತೀರ್ಪು ನೀಡಿತ್ತು.



ಭೂಸ್ವಾಧೀನ ಪ್ರಕ್ರಿಯೆ ಕೈಗೊಂಡು, ವಶಕ್ಕೆ ಪಡೆದು, ಬಡಾವಣೆ ನಿರ್ಮಿಸಿದ್ದಾಗ್ಯೂ ಆರ್‌ಟಿಸಿಯಲ್ಲಿ ಸರ್ಕಾರಿ ಬೀಳು ಎಂದು ನಮೂದಾಗಿದ್ದರಿಂದ ಭೂ ಪರಿಹಾರ ವಿತರಿಸದಿರುವ ಅಂಶವನ್ನು ಗಮನಿಸಿ ಅದರ ಲಾಭ ಪಡೆಯಲು ಕೆಲವರು ಸುಳ್ಳು ದಾಖಲೆ ಸೃಷ್ಟಿಸಿ ಉಪವಿಭಾಗಾಧಿಕಾರಿಗಳಿಗೆ ಮೇಲ್ಮನವಿ ಸಲ್ಲಿಸಿ ಅಕ್ರಮವಾಗಿ ಆದೇಶ ಪಡೆದಿರುವುದು ದಾಖಲೆಗಳಿಂದ ಕಂಡುಬಂದಿತ್ತು ಎಂದು ಆಯುಕ್ತರು ತಿಳಿಸಿದ್ದಾರೆ.

ಕ್ರೀಡಾಂಗಣದ ಉದ್ದೇಶಕ್ಕೆ ಕಾಯ್ದಿರಿಸಿದ್ದ ಈ ಜಾಗದಲ್ಲಿ ಒತ್ತುವರಿ ಮಾಡಿ ಅನಧಿಕೃತವಾಗಿ ಶೆಡ್‌ಗಳನ್ನು ನಿರ್ಮಿಸಿ ಹಸುಗಳನ್ನು ಸಾಕುತ್ತಿದ್ದರಿಂದ ಇಂದು ಅವರನ್ನು ತೆರವುಗೊಳಿಸಿ 100 ಕೋಟಿ ರೂ. ಮೌಲ್ಯದ 6–13 ಎಕರೆ ಪ್ರದೇಶದ ಜಾಗವನ್ನು ವಿಜಯನಗರ 3ನೇ ಹಂತ 'ಇ' ಬ್ಲಾಕ್‌ನಲ್ಲಿ (ಬಸವರಾಜ ಸರ್ಕಲ್ ಬಳಿ) ವಶಕ್ಕೆ ಪಡೆಯಲಾಗಿದೆ ಎಂದು ಆಯುಕ್ತರು ತಿಳಿಸಿದರು. ಎಗ್ಸಿಕ್ಯೂಟಿವ್ ಇಂಜಿನಿಯರ್‌ಗಳಾದ ಸುನಿಲ್, ಮೋಹನ್, ಅಸಿಸ್ಟೆಂಟ್ ಎಗ್ಸಿಕ್ಯೂಟಿವ್ ಇಂಜಿನಿಯರ್‌ಗಳಾದ ಕೆ.ಆರ್.ಮಹೇಶ್, ನಾಗೇಶ್, ಯಾದವಗಿರಿ ರವೀಂದ್ರಕುಮಾರ್, ರಾಘವೇಂದ್ರ ಹಾಗೂ ಇತರರು ತೆರವು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಇಂದು ಚಾಮುಂಡಿಬೆಟ್ಟದಲ್ಲಿ ಶ್ರೀ ಜಯಚಾಮ ರಾಜೇಂದ್ರ ಒಡೆಯರ್ ಪುತ್ಥಳಿ ಅನಾವರಣ



ಮೈಸೂರು,ಏ.21(ಆರ್‌ಕೆ)–ಚಾಮುಂಡಿಬೆಟ್ಟದಲ್ಲಿ ಮೈಸೂರು ಮಹಾರಾಜರಾಗಿದ್ದ ಶ್ರೀ ಜಯಚಾಮ ರಾಜೇಂದ್ರ ಒಡೆಯರ್ ಪುತ್ಥಳಿಯನ್ನು ಮೈಸೂರು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್, ನಾಳೆ (ಏ.22) ಅನಾವರಣ ಮಾಡುವರು.

ಯುವರಾಜ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶ್ರೀಮತಿ ತ್ರಿಷಿಕಾ ಕುಮಾರಿ ಒಡೆಯರ್, ಸಂಸದ ಪ್ರತಾಪ್‌ಸಿಂಹ, ಶಾಸಕ ಜಿ.ಟಿ. ದೇವೇಗೌಡ, ಚಾಮುಂಡಿಬೆಟ್ಟ ಗ್ರಾಪಂ ಅಧ್ಯಕ್ಷ ಭರತ್ ಕಾಳಯ್ಯ, ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಯತಿರಾಜ್ ಸಂಪತ್‌ಕುಮಾರನ್, ಪ್ರಧಾನ ಆಗಮಿಕ ಡಾ.ಎನ್. ಶಶಿಶೇಖರ್ ದೀಕ್ಷಿತ್, ಸಹಾಯಕ ಅಭಿಯಂತರ ರಘು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ಚಾಮುಂಡಿಬೆಟ್ಟದ ಪೊಲೀಸ್ ಉಪಠಾಣೆ ಮತ್ತು ಗ್ರಾಮ ಪಂಚಾಯ್ತಿ ಎದುರು ಇರುವ ಉದ್ಯಾನದಲ್ಲಿ ಸ್ಥಾಪಿಸಿರುವ ಪುತ್ಥಳಿಯನ್ನು ಗ್ರಾಮ ಪಂಚಾಯ್ತಿ ಅಧ್ಯಕ್ಷ ಭರತ್ ಕಾಳಯ್ಯ ಅವರ ಕಾಳಜಿಯಿಂದ ಗ್ರಾಮಸ್ಥರು ಹಾಗೂ ಮಹಾರಾಜರ ಅಭಿಮಾನಿಗಳು 2.30 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿದ್ದು, ವೇದಿಕೆ, ಕಬ್ಬಿಣದ ಗ್ರಿಲ್, ಉದ್ಯಾನ ಅಭಿವೃದ್ಧಿ ಸೇರಿ ಒಟ್ಟು 8 ಲಕ್ಷ ರೂ. ವೆಚ್ಚವಾಗಿದೆ.

3.5 ಅಡಿ ಎತ್ತರ, 3 ಅಡಿ ಸುತ್ತಳತೆಯ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಪುತ್ಥಳಿಯನ್ನು ಶಿಲ್ಪಿ ಸೂರ್ಯಪ್ರಕಾಶ್ ಕೆತ್ತಿದ್ದು, ಆಕರ್ಷಕವಾಗಿ ಕಂಗೊಳಿಸುತ್ತಿದೆ. ಯದುವಂಶಸ್ಥರು ಶ್ರೀ ಚಾಮುಂಡೇಶ್ವರಿ ದೇವಸ್ಥಾನ ಸೇರಿದಂತೆ ಹಲವು ದೇವಾಲಯಗಳನ್ನು ನಿರ್ಮಿಸಿದ್ದಾರೆ. ದೇವಿಕೆರೆ, ನಂದಿ ವಿಗ್ರಹ, ಸಾವಿರ ಮೆಟ್ಟಿಲು, ರಾಜೇಂದ್ರ ವಿಲಾಸ ಅರಮನೆ ಸೇರಿದಂತೆ ಚಾಮುಂಡಿಬೆಟ್ಟದಲ್ಲಿ ಹಲವು ಅಭಿವೃದ್ಧಿ ಕಾರ್ಯ ಮಾಡಿದ್ದಾರೆ.

ರಾಜಮಹಾರಾಜರ ಈ ಮಹತ್ವಾಕಾಂಕ್ಷೆ ಸೇವಾ ಕಾರ್ಯದ ಸ್ಮರಣೆಗಾಗಿ ಸರ್ಕಾರದ ಅನುದಾನ ಬಳಸದೆ ಚಾಮುಂಡಿಬೆಟ್ಟದ ಗ್ರಾಮಸ್ಥರು, ದೇವಸ್ಥಾನದ ನೌಕರರು, ಮಹಾರಾಜರ ಅಭಿಮಾನಿಗಳು ಹಾಗೂ ಇತರೆ ಸ್ಥಳೀಯರ ನೆರವಿನಿಂದ ಪುತ್ಥಳಿ ಸ್ಥಾಪಿಸಲಾಗಿದೆ ಎಂದು ಭರತ್ ಕಾಳಯ್ಯ ತಿಳಿಸಿದರು.

ಮೈಸೂರಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಆರಂಭಕ್ಕೆ ಒತ್ತಾಯಿಸಿ ಪ್ರತಿಭಟನೆ

ಮೈಸೂರು,ಏ.21(ಪಿಎಂ)– ಮೈಸೂರಿನಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಆರಂಭಿಸಲು ಒತ್ತಾಯಿಸಿ ಕರ್ನಾಟಕ ಸೇನಾ ಪಡೆ ವತಿಯಿಂದ ಪ್ರತಿಭಟನೆ ನಡೆಸಲಾಯಿತು.



ಮೈಸೂರು ಡಿಸಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಲಕ್ಷಾಂತರ ವಿದ್ಯಾರ್ಥಿಗಳು ಮೈಸೂರಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ನಮ್ಮ ಮೈಸೂರು ವಿವಿ ಇಡೀ ಪ್ರಪಂಚದಲ್ಲಿಯೇ ಮನ್ನಣೆ ಪಡೆದಿದೆ. ಆದರೆ ಶೈಕ್ಷಣಿಕ ಇತಿಹಾಸ ಹೊಂದಿರುವ ಮೈಸೂರಿನಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಇಲ್ಲದಿರುವುದು ಅತ್ಯಂತ ಬೇಸರದ ಸಂಗತಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳು ಮೈಸೂರಲ್ಲಿದ್ದು, ಇವುಗಳ ದುಬಾರಿ ಶುಲ್ಕವು ಬಡ, ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಹೊರೆಯಾಗಿ ಪರಿಣಮಿಸಿದೆ. ಬೆಂಗಳೂರು ಬಿಟ್ಟರೆ, ಮೈಸೂರು ಅತ್ಯಂತ ವೇಗವಾಗಿ ಬೆಳೆಯುತ್ತಿದೆ. ಅಲ್ಲದೆ, ಇದು ಗುಣಮಟ್ಟದ ಶಿಕ್ಷಣಕ್ಕೆ ಹೆಸರುವಾಸಿಯಾಗಿದೆ. ಆದರೆ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಇಲ್ಲವೆಂಬ ಕೊರತೆ ನೀಗಿಸಲು ಸರ್ಕಾರ ಮುಂದಾಗಬೇಕು. ಈ ನಿಟ್ಟಿನಲ್ಲಿ ಸಿಎಂ ಕೂಡಲೇ ಮೈಸೂರಿನಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಆರಂಭಕ್ಕೆ ಕ್ರಮ ವಹಿಸಬೇಕು ಎಂದು ಒತ್ತಾಯಿಸಿದರು. ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಸಿ.ಜಿ.ಗಂಗಾಧರ್, ಸಂಘಟನೆಯ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್‌ಗೌಡ, ಮುಖಂಡರಾದ ಡಾ.ಶಾಂತರಾಜೇಅರಸ್, ದರ್ಶನ್‌ಗೌಡ, ಬಂಗಾರಪ್ಪ, ರಾಮಣ್ಣ, ಯೋಗೀಶ್ ಉಪ್ಪಾರ, ವಿಜಯೇಂದ್ರ, ಮಧುವನ ಚಂದ್ರು, ಮಹದೇವಸ್ವಾಮಿ, ಬಸವರಾಜು, ರಘು, ಅನಿಲ್, ಮಂಜುನಾಥ, ರಾಮನಾಯಕ್, ಅಂಬಾ ಅರಸ್, ರಾಧಾಕೃಷ್ಣ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಮೈಸೂರು ದಟ್ಟಗಳ್ಳಿಯ ರೆವಿನ್ಯೂ ನಿವೇಶನಗಳ

ಮನೆ ತೆರವು ಕಾರ್ಯಾಚರಣೆ ವಿರುದ್ಧ ಪ್ರತಿಭಟನೆ; ಪುನರ್‌ವಸತಿ, ಹಕ್ಕುಪತ್ರಕ್ಕೆ ನಿವಾಸಿಗಳ ಆಗ್ರಹ

ಮೈಸೂರು,ಏ.21(ಪಿಎಂ)–ಮೈಸೂರಿನ ದಟ್ಟಗಳ್ಳಿಯ ರೆವಿನ್ಯೂ ನಿವೇಶನಗಳಲ್ಲಿದ್ದ ತಮ್ಮ ಮನೆಗಳನ್ನು ತೆರವುಗೊಳಿಸಿದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಕ್ರಮ ಖಂಡಿಸಿ ಇಲ್ಲಿನ ನಿವಾಸಿಗಳು ನಾಗರಿಕ ಹಕ್ಕು ರಕ್ಷಣಾ ಸಮಿತಿ ನೇತೃತ್ವದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಮುಡಾ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಮುಡಾ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಆರ್ಥಿಕವಾಗಿ ಹಿಂದುಳಿದಿರುವ ನಾವು, ಸುಮಾರು 40 ವರ್ಷಗಳಿಂದ ಅದೇ ಜಾಗದಲ್ಲಿ ವಾಸ ಮಾಡುತ್ತಿದ್ದೆವು. ಅಂದಿನ ಭೂ ಮಾಲೀಕರಿಂದ ನಿವೇಶನ ಖರೀದಿಸಿ, ಸಣ್ಣ ಸಣ್ಣ ಸೀಟಿನ ಮನೆಗಳನ್ನು ನಿರ್ಮಿಸಿಕೊಂಡು ವಾಸ ಮಾಡುತ್ತಿದ್ದೆವು. ಆದರೆ ಮುಡಾ ನಮ್ಮ 15 ಮನೆಗಳನ್ನು ನೆಲಸಮ ಮಾಡಿದೆ. ಇನ್ನುಳಿದ ಕೆಲ ಮನೆಗಳನ್ನು ನೆಲಸಮ ಮಾಡಲು ಮುಂದಾಗಿದೆ. ಇದು ಸರಿಯಲ್ಲ ಎಂದು ಕಿಡಿಕಾರಿದರು.



ಮನೆಗಳನ್ನು ನೆಲಸಮಗೊಳಿಸಿದ ನಿವೇಶನಗಳಲ್ಲೇ ಪುನರ್‌ವಸತಿ ಕಲ್ಪಿಸಬೇಕು. ಅಲ್ಲದೆ, ಸದರಿ ನಿವೇಶನಗಳಿಗೆ ಹಕ್ಕುಪತ್ರಗಳನ್ನು ನೀಡಿ, ಸುಲಭ ಕಂತಿನಲ್ಲಿ ಹಣ ಪಾವತಿಸಲು ಅವಕಾಶ ನೀಡಬೇಕು ಎಂದು ಒತ್ತಾಯಿಸಿದರು.

ಸಮಿತಿ ಅಧ್ಯಕ್ಷ ಗೋವಿಂದರಾಜು ಮಾತನಾಡಿ, ನೆಲೆ ಇಲ್ಲದವರಿಗೆ ನೆಲೆ ಕಲ್ಪಿಸುವುದು ಮುಡಾ ಕರ್ತವ್ಯ. ಆದರೆ ಬಡವರ ವಿಚಾರದಲ್ಲಿ ಮುಡಾ ಇದಕ್ಕೆ ತದ್ವಿರುದ್ಧವಾಗಿ ನಡೆದುಕೊಳ್ಳುತ್ತಿದೆ. ಮನೆ ಕಳೆದುಕೊಂಡವರು ಬಡವರು. ಇವರು ಅಂದಿನ ಭೂ ಮಾಲೀಕರಿಂದ ನಿವೇಶನಗಳನ್ನು ಖರೀದಿಸಿರುವುದಾಗಿ ಹೇಳುತ್ತಾರೆ. ಆದರೆ ಮುಡಾ ಸ್ವಾಧೀನಪಡಿಸಿಕೊಂಡಿರುವುದಾಗಿ ಹೇಳುತ್ತಿದೆ. ಇವರನ್ನು ತೆರವುಗೊಳಿಸಿ, ಮತ್ತೊಬ್ಬರಿಗೆ ನಿವೇಶನ ನೀಡುವ ಬದಲು ಇವರಿಗೇ ನೀಡಲಿ. ಹಣ ಪಾವತಿಗೆ ನಿವಾಸಿಗಳು ಸಿದ್ಧವಿದ್ದಾರೆ ಎಂದು ಹೇಳಿದರು. ಸಮಿತಿ ಉಪಾಧ್ಯಕ್ಷೆ ಜಿ.ತಾರಾ, ಕಾರ್ಯದರ್ಶಿ ಶಶಿಕಲಾ, ಸಂಚಾಲಕಿ ಪಾರ್ವತಮ್ಮ ಸೇರಿದಂತೆ ಅಲ್ಲಿನ ನಿವಾಸಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಮೇ ತಿಂಗಳಲ್ಲಿ ಶಾಸಕರು, ಸಚಿವರ ನಿವಾಸ, ಕಚೇರಿ ಎದುರು ಬಿಸಿಯೂಟ ನೌಕರರ ಪ್ರತಿಭಟನೆ

ಮೈಸೂರು,ಏ.21(ಪಿಎಂ)–ನಿವೃತ್ತಿ ವೇತನ ಅಥವಾ ಇಡುಗಂಟು ನೀಡುವವರೆಗೆ ಅಕ್ಷರ ದಾಸೋಹ ಬಿಸಿಯೂಟ ನೌಕರರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಬಾರದು ಎಂಬ ಪ್ರಮುಖ ಬೇಡಿಕೆ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಲು ಸರ್ಕಾರ ಸ್ಪಂದಿಸದ ಹಿನ್ನೆಲೆಯಲ್ಲಿ 224 ಶಾಸಕರು, ಸಚಿವರ ನಿವಾಸ ಮತ್ತು ಕಚೇರಿ ಎದುರು ಆಯಾಯ ಕ್ಷೇತ್ರ ವ್ಯಾಪ್ತಿಯ ಬಿಸಿಯೂಟ ನೌಕರರು ಮೇ ತಿಂಗಳಲ್ಲಿ ಪ್ರತಿಭಟನೆ ನಡೆಸಲಿದ್ದಾರೆ. ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಸಿಐಟಿಯು ರಾಜ್ಯಾಧ್ಯಕ್ಷೆ ಎಸ್. ವರಲಕ್ಷ್ಮಿ, ಕರ್ನಾಟಕ ರಾಜ್ಯ ಅಕ್ಷರ ದಾಸೋಹ ನೌಕರರ ಸಂಘದ (ಸಿಐಟಿಯು) ವತಿಯಿಂದ ಏ.11ರಂದು ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಲಾಯಿತು. ಅಲ್ಲದೆ, ಏ.18ರಂದು ಬೆಂಗಳೂರಿನ ಅಕ್ಷರ ದಾಸೋಹ ಯೋಜನೆಯ ಉಪನಿರ್ದೇಶಕರ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಲಾಯಿತು ಎಂದು ತಿಳಿಸಿದರು.



ನಿವೃತ್ತಿಯ ಯಾವುದೇ ಸೌಲಭ್ಯ ನೀಡದೇ 60 ವರ್ಷ ವಯೋಮಾನದ ನೆಪವೊಡ್ಡಿ ನಿವೃತ್ತಿ ಹೆಸರಿನಲ್ಲಿ ಕರ್ತವ್ಯದಿಂದ ಬಿಡುಗಡೆ ಮಾಡಲಾಗುತ್ತಿದೆ. ರಾಜ್ಯದಲ್ಲಿ ಸುಮಾರು 12 ಸಾವಿರ ನೌಕರರನ್ನು ಹೀಗೆ ಸರ್ಕಾರ ಬಿಡುಗಡೆ ಮಾಡಿದೆ ಎಂದು ಕಿಡಿಕಾರಿದರು. ಅಕ್ಷರ ದಾಸೋಹ ನೌಕರರ ಸಂಘದ ರಾಜ್ಯ ಖಜಾಂಚಿ ಮಹದೇವಮ್ಮ, ಜಿಲ್ಲಾ ಸಮಿತಿ ಗೌರವಾಧ್ಯಕ್ಷೆ ಸುನಂದಾ, ಜಯರಾಂ ಮತ್ತಿತರರು ಗೋಷ್ಠಿಯಲ್ಲಿದ್ದರು.



ದಿ ರೈಲ್ವೆ ಕೋ ಆಪರೇಟಿವ್ ಬ್ಯಾಂಕ್ ವತಿಯಿಂದ ಡಾ.ಅಂಬೇಡ್ಕರ್ ಅವರ 131ನೇ ಜಯಂತಿ ಆಚರಿಸಲಾಯಿತು. ಚಿತ್ರದಲ್ಲಿ ಬ್ಯಾಂಕ್ ಅಧ್ಯಕ್ಷ ಯತಿರಾಜು, ಉಪಾಧ್ಯಕ್ಷ ಅಶೋಕ್‌ಕುಮಾರ್, ನಿರ್ದೇಶಕರಾದ ಡಾ.ಎಂ.ಬಿ.ಮಂಜೇಗೌಡ, ಡಾ.ಕೆ. ವಿಜಯ್‌ಕುಮಾರ್, ರಾಮನಾದನ್, ಶ್ರೀನಿವಾಸ್‌ಮೂರ್ತಿ, ಶಿವಶಂಕರ್, ದೂಕೇಶಪ್ಪ, ಹನುಮಂತ, ಶೀತಲ್, ನಿರ್ಮಲ, ಚಂದ್ರಶೇಖರ, ಚಂದ್ರಶೇಖರ್, ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ನಾರಾಯಣ, ಜನರಲ್ ಮ್ಯಾನೇಜರ್ ಲಕ್ಷ್ಮೀಪ್ರಸಾದ್, ಸಿಬ್ಬಂದಿ, ಸದಸ್ಯರು ಮತ್ತು ಠೇವಣಿದಾರರು ಉಪಸ್ಥಿತರಿದ್ದರು.

ಮುಕ್ತ ವಿವಿಯಲ್ಲಿ ಅಕ್ರಮ ನೇಮಕಾತಿ ಆರೋಪ; ಪ್ರತಿಭಟನೆ



ಮೈಸೂರು,ಏ.21(ಪಿಎಂ)–ಮುಕ್ತ ವಿವಿಯಲ್ಲಿ 150ಕ್ಕೂ ಅಧಿಕ ಹುದ್ದೆಗಳಿಗೆ ಅಕ್ರಮ ನೇಮಕಾತಿ ಮಾಡಲಾಗಿದೆ ಎಂದು ಆರೋಪಿಸಿ ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ಗುರುವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಮುಕ್ತ ಗಂಗೋತ್ರಿಯ ವಿವಿ ಮುಖ್ಯದ್ವಾರದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ವಿವಿ ಕುಲಪತಿಗಳು, ಕುಲಸಚಿವರು ತಾತ್ಕಾಲಿಕ ಉಪನ್ಯಾಸಕರ ಹುದ್ದೆಗಳು ಸೇರಿದಂತೆ ವಿವಿಧ ಹುದ್ದೆಗಳಿಗೆ ನೇಮಕಾತಿ ಮಾಡಿದ್ದಾರೆ.

ಕೇವಲ 1 ಗಂಟೆ ಅವಧಿಯಲ್ಲಿ 25ಕ್ಕೂ ಹೆಚ್ಚು ಅಭ್ಯರ್ಥಿಗಳ ಸಂದರ್ಶನ ಪ್ರಕ್ರಿಯೆ ನಡೆಸಲಾಗಿದೆ. ಸರ್ಕಾರದ ಯಾವುದೇ ಆದೇಶ, ಪತ್ರಿಕಾ ಪ್ರಕಟಣೆ ಹಾಗೂ ಮೀಸಲಾತಿ ಕ್ರಮಗಳನ್ನು ಪಾಲಿಸದೇ ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿ ನೇಮಕಾತಿಗಳನ್ನು ನಡೆಸಲಾಗಿದೆ. ಸಾರ್ವಜನಿಕ ಆಸ್ತಿಯಾದ ವಿವಿಯನ್ನು ಇವರು ತಮ್ಮ ಇಷ್ಟದಂತೆ ಬಳಸಿಕೊಳ್ಳುತ್ತಿದ್ದಾರೆ ಎಂದು ದೂರಿದರು.

ಏ.25ರಂದು ವಿವಿಯ ಘಟಿಕೋತ್ಸವದಲ್ಲಿ ಪಾಲ್ಗೊಳ್ಳಲು ರಾಜ್ಯಪಾಲರು ಆಗಮಿಸುತ್ತಿದ್ದು, ಈ ವೇಳೆ ಪ್ರತಿಭಟನೆ ನಡೆಸಿ ಅಕ್ರಮ ನೇಮಕಾತಿ ಸಂಬಂಧ ಅವರಿಗೆ ದೂರು ಸಲ್ಲಿಸಲಾಗುವುದು ಎಂದು ಎಚ್ಚರಿಸಿದರು. ವೇದಿಕೆ ಜಿಲ್ಲಾಧ್ಯಕ್ಷ ಪ್ರವೀಣ್ ಕುಮಾರ್, ಮುಖಂಡರಾದ ಜಿ.ಲೋಕೇಶ್‌ಕುಮಾರ್, ಶ್ರೀನಿವಾಸ್, ಲಾಲು, ಗಣೇಶ್, ಹೇಮಂತ್‌ಗೌಡ, ರಘು, ಶಿವು, ಪುರುಷೋತ್ತಮ್, ಆನಂದ್, ವಿಜಯ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ನಿಧನ

ಕನಕಮ್ಮ



ಮೈಸೂರು, ಏ.21– ನಗರದ ವಿ.ವಿ.ಮೊಹಲ್ಲಾದ 3ನೇ ಮುಖ್ಯ ರಸ್ತೆ ನಿವಾಸಿ ಕನಕಮ್ಮ (93) ಅವರು ಬುಧವಾರ ವಯೋಸಹಜ ಕಾಯಿಲೆಯಿಂದ ಖಾಸಗಿ ಆಸ್ಪತ್ರೆಯಲ್ಲಿ ನಿಧನ ಹೊಂದಿದ್ದಾರೆ. ಮೃತರು ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ನಾಳೆ (ಶುಕ್ರವಾರ) ಬೆಳಗ್ಗೆ ಗೋಕುಲಂನ ಚಿರಶಾಂತಿಧಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕಾಳಮ್ಮ ದೇವಸ್ಥಾನ ಉದ್ಘಾಟಿಸಿದ ಶಾಸಕ ಜಿ.ಟಿ.ದೇವೇಗೌಡ



ಮೈಸೂರು, ಏ.21– ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಜಯಪುರ ಹೋಬಳಿಯ ಸೋಲಿಗರ ಕಾಲೋನಿಯಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಶ್ರೀ ಕಾಳಮ್ಮನ ದೇವಾಲಯವನ್ನು ಗುರುವಾರ ಕ್ಷೇತ್ರದ ಶಾಸಕರಾದ ಜಿ.ಟಿ. ದೇವೇಗೌಡರು ಉದ್ಘಾಟಿಸಿದರು.

ಈ ವೇಳೆ ಗ್ರಾಮಸ್ಥರು ಶಾಸಕ ಜಿ.ಟಿ.ದೇವೇಗೌಡ ಮತ್ತು ರಾಜ್ಯ ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷರೂ ಆದ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ಅವರನ್ನು ಅದ್ಧೂರಿ ಮೆರವಣಿಗೆಯಲ್ಲಿ ಬೃಹತ್ ಗಾತ್ರದ ಸೇಬಿನ ಹಾರ ಹಾಕಿ ಸ್ವಾಗತ ಕೋರಿದರು. ಈ ಸಂದರ್ಭದಲ್ಲಿ ಏರ್ಪಡಿಸಲಾಗಿದ್ದ ಅನ್ನ ಸಂತರ್ಪಣೆಯಲ್ಲಿ ಗ್ರಾಮಸ್ಥರೊಂದಿಗೆ ಕುಳಿತು ಸಹಪಂಕ್ತಿ ಭೋಜನ ಸವಿದರು. ಜಯಪುರ ಹೋಬಳಿಯ ಮುಖಂಡರು, ಗ್ರಾಮ ಪಂಚಾಯತಿ ಅಧ್ಯಕ್ಷರು, ಸದಸ್ಯರು, ಗ್ರಾಮದ ಮುಖಂಡರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

'ಪತ್ರಕರ್ತರ ಪಯಣ' ಕೃತಿ ಬಿಡುಗಡೆ


ಮೈಸೂರು,ಏ.21(ಆರ್‌ಕೆಬಿ)–ಹಿರಿಯ ಪತ್ರಕರ್ತ ಪಟ್ನಂ ಅನಂತ ಪದ್ಮನಾಭ ಅವರ 'ಪತ್ರಕರ್ತನ ಪಯಣ' ಕೃತಿಯನ್ನು ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಗುರುವಾರ ಮೈಸೂರು ಪತ್ರಕರ್ತರ ಭವನದಲ್ಲಿ ಬಿಡುಗಡೆ ಮಾಡಿದರು.



ಕವಿತಾ ಪ್ರಕಾಶನ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಕೃತಿ ಬಿಡುಗಡೆಗೊಳಿಸಿ ಮಾತನಾಡಿ, ದಶಕದಲ್ಲಿ ಅಂಚೆ ಮೂಲಕ, ಟೆಲಿಗ್ರಾಂ, ಟೆಲಿಪ್ರಿಂಟರ್‌ಗಳ ಮೂಲಕ ಸುದ್ದಿಗಳನ್ನು ತರಿಸಿಕೊಂಡು ಪತ್ರಿಕೆಗಳಲ್ಲಿ ಸುದ್ದಿ ಪ್ರಕಟಿಸುತ್ತಿದ್ದ ಕಾಲವದು. ಇಂದಿನ ರೀತಿ ಮೊಬೈಲ್ ಇರಲಿಲ್ಲ. ಲ್ಯಾಂಡ್‌ಲೈನ್ ದೂರವಾಣಿ ಬೇಕೆಂದರೆ ಸಂಸತ್ ಸದಸ್ಯರ ಶಿಫಾರಸು ಬೇಕಿತ್ತು. ಲ್ಯಾಂಡ್‌ಲೈನ್ ಕೂಡ ಸಿಗದ ಪರಿಸ್ಥಿತಿಯಲ್ಲಿ ಅಂದು ಪತ್ರಿಕೆಯಲ್ಲಿ ಕೆಲಸ ಮಾಡಿದ ಅನಂತ ಅವರು ತಮ್ಮ ಅನುಭವಗಳನ್ನು 'ಪತ್ರಕರ್ತನ ಪಯಣ' ಕೃತಿಯಲ್ಲಿ ದಾಖಲಿಸಿದ್ದಾರೆ ಎಂದರು.

ಪತ್ರಕರ್ತರಾದವರಿಗೆ ಪ್ರಚಲಿತ ವಿದ್ಯಮಾನಗಳ ತಿಳುವಳಿಕೆ ಇರಬೇಕಾಗುತ್ತದೆ. ಪತ್ರಿಕೆಗೆ ಸುದ್ದಿ ನೀಡುವ ಮುನ್ನ ಪೂರ್ವ ಸಿದ್ಧತೆ ಇರಬೇಕಾಗುತ್ತದೆ. ದಿನದ 24 ಗಂಟೆಯೂ ಇರುವ ಟಿವಿಗಳ ನಡುವೆ ಇಂದು ಪತ್ರಿಕೆಗಳು ವಿಶ್ವಾಸಾರ್ಹತೆ ಕಳೆದುಕೊಂಡಿಲ್ಲ. ಅದೇ ರೀತಿ ಪತ್ರಿಕೆಗಳನ್ನು ಉಳಿಸಿ ಬೆಳೆಸಿಕೊಂಡು ಹೋಗುವ ಜವಾಬ್ದಾರಿ ಪತ್ರಕರ್ತರ ಮೇಲಿದೆ. ಅಂತಹ ಮಾಹಿತಿಗಳನ್ನು ಒಳಗೊಂಡ ಕೃತಿ ಇಂದಿನ ನವಪೀಳಿಗೆಗೆ ಸಹಾಯಕವಾಗಲಿದೆ ಎಂದರು. ಪತ್ರಕರ್ತ, ಕೃತಿಕಾರ ಪಟ್ನಂ ಅನಂತ ಪದ್ಮನಾಭ, ಶರಣ ಸಾಹಿತ್ಯ ಪರಿಷತ್ತಿನ ಶಿವಕುಮಾರಸ್ವಾಮಿ, ಕವಿತಾ ಪ್ರಕಾಶನದ ಗಣೇಶ ಅಮೀನಗಡ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

22.04.2022 ಶುಕ್ರವಾರ, ಮಳೆ ನಕ್ಷತ್ರ: ಅಶ್ವಿನಿ 14.04.2022 ರಿಂದ 26.04.2022

ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ

ತಿಥಿ: ಷಷ್ಠೀ, ನಕ್ಷತ್ರ: ಪೂಷಾ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಸ್ಥಾನದ ಸ್ಥಳೀಯ ನೌಕರರು ಹಾಗೂ ಚಾಮುಂಡಿಬೆಟ್ಟ ಗ್ರಾಮಸ್ಥರು:** ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರ ಪ್ರತಿಮೆ ಅನಾವರಣ, ಉದ್ಘಾಟನೆ: ರಾಜಮಾತೆ ಪ್ರಮೋದಾದೇವಿ ಒಡೆಯರ್, ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ತ್ರಿಷಿಕಾಕುಮಾರಿ ಒಡೆಯರ್, ಮುಖ್ಯ ಅತಿಥಿಗಳು: ಶಾಸಕ ಜಿ.ಟಿ.ದೇವೇಗೌಡ, ಸಂಸದ ಪ್ರತಾಪ್ ಸಿಂಹ, ಪ್ರಧಾನ ಆಗಮಿಕ ಡಾ. ಎನ್. ಶಶಿಶೇಖರ್ ದೀಕ್ಷಿತ್, ಚಾಮುಂಡಿಬೆಟ್ಟ ಗ್ರಾಪಂ ಅಧ್ಯಕ್ಷ ಭರತ್ ಕಾಳಯ್ಯ, ಕಾರ್ಯನಿರ್ವಾಹಕ ಅಧಿಕಾರಿ ಯತಿರಾಜ್ ಸಂಪತ್‌ಕುಮಾರ್, ಸಹಾಯಕ ಅಭಿಯಂತರ ರಘು, ಸ್ಥಳ:ಚಾಮುಂಡಿಬೆಟ್ಟ, ಬೆಳಗ್ಗೆ 9.30ಕ್ಕೆ.

■ **ಭಾರತ ವಿದ್ಯಾರ್ಥಿ ಫೆಡರೇಷನ್ :** ಮಹಾನ್ ಮಾನವತಾವಾದಿ ದಿನಾಚರಣೆ, ಉದ್ಘಾಟನೆ : ಸಾಹಿತಿ ಪ್ರೊ. ಕೆ.ಎಸ್. ಭಗವಾನ್, ಮುಖ್ಯ ಅತಿಥಿಗಳು : ಪ್ರಾಧ್ಯಾಪಕ ಡಾ. ಸೀನಾನಾಯಕ್, ರಂಗಕರ್ಮಿ ಕೆ.ಆರ್. ಗೋಪಾಲಕೃಷ್ಣ, ಅಧ್ಯಕ್ಷತೆ : ಭಾರತ ವಿದ್ಯಾರ್ಥಿ ಫೆಡರೇಷನ್ ಜಿಲ್ಲಾ ಸಂಚಾಲಕ ಟಿ.ಎಸ್. ವಿಜಯ್‌ಕುಮಾರ್, ಸ್ಥಳ: ಬುದ್ಧ ವಿಹಾರ, ಅಶೋಕ ವೃತ್ತ, ಬೆಳಗ್ಗೆ 11ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಡಾ.ಎಸ್.ರಾಧಾಕೃಷ್ಣನ್ ತತ್ತ್ವಶಾಸ್ತ್ರ ಮತ್ತು ಭಾರತೀಯ ಸಂಸ್ಕೃತಿ ಕೇಂದ್ರ:** ಶ್ರೀ ವ್ಯಾಸ–ವಾಲ್ಮೀಕಿ ಅಧ್ಯಯನ ಪೀಠದ ಉದ್ಘಾಟನೆ, ಉದ್ಘಾಟನೆ: ಶ್ರೀ ಕುಂದೂರು ಮಠದ ಡಾ. ಶರತ್ ಚಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು: ಡಾ.ಹೆಚ್.ಎಲ್.ಚಂದ್ರಶೇಖರ, ಅಧ್ಯಕ್ಷತೆ: ಮೈಸೂರು ವಿವಿ ಕುಲಪತಿ ಪ್ರೊ.ಹೇಮಂತಕುಮಾರ್, ಸ್ಥಳ: ಡಾ.ಎಸ್.ರಾಧಾಕೃಷ್ಣನ್ ಭವನ, ಸರಸ್ವತಿಪುರಂ, ಬೆಳಗ್ಗೆ 11ಕ್ಕೆ

■ **ಶ್ರೀ ಕೃಷ್ಣ ಮಿತ್ರ ಮಂಡಳಿ, ಶ್ರೀ ಕೃಷ್ಣ ಟ್ರಸ್ಟ್ :** ಶ್ರೀ ಕೃಷ್ಣ ಮಿತ್ರ ಮಂಡಳಿಯ 46ನೇ ವಾರ್ಷಿಕೋತ್ಸವ, ಸಾನ್ನಿಧ್ಯ: ಶ್ರೀ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದಂಗಳವರು, ಸನ್ಮಾನ: ಸಾಹಿತಿ ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಚಲನಚಿತ್ರ ನಟ ಎನ್.ಬಾಲಸುಬ್ರಹ್ಮಣ್ಯ, ಸ್ಥಳ: ಶ್ರೀ ಕೃಷ್ಣ ಸಭಾ ಭವನ, ಶ್ರೀ ಕೃಷ್ಣಧಾಮ, ಸಂಜೆ 5ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಅಮೃತ ಸ್ವಾತಂತ್ರ್ಯ ಮಾಲಿಕೆ 'ಆಧಾರ ಶಿಲೆ' ಮೈಸೂರು ಸುತ್ತಲಿನ ಪ್ರಾಗಿತಿಹಾಸ ತಾಣಗಳ ಪರಿಚಯ – ಡಾ.ಎಸ್.ಜಿ. ರಾಮದಾಸ ರೆಡ್ಡಿ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ– ಎಂ.ಎ.ಶೋಭಾ, ವ್ಯಾಖ್ಯಾನ– ಲತಾ ಮೈಸೂರು, 7.15 ದುಡಿಮೆಯ ಹಿರಿಮೆ–ಪ್ರಾಯೋಜಿತ ಕಾರ್ಯಕ್ರಮ, 9.00 ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, ಭಾಗವಹಿಸುವ ತಜ್ಞರು –ಡಾ.ಲೋಕೇಶ್ ಹೆಚ್.ಎಂ., 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ 'ಸ್ವಾತಂತ್ರ್ಯ ಚಳವಳಿಯ ಪಯಣ–ಆಕಾಶವಾಣಿಯೊಂದಿಗೆ', 10.00 ಎಂ.ಎಸ್. ಆನಂದ್ – ನಾಗಸ್ವರವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ, 12.45 ಕಾದಂಬರಿ ವಿಹಾರ, ಪ್ರಸ್ತುತಿ– ಉಮೇಶ್ ಎಸ್.ಎಸ್., 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ– ಜಿ.ಕೆ. ರವೀಂದ್ರಕುಮಾರ್, 3.00 ಎಂ.ಎಸ್. ಚಂದ್ರಶೇಖರನ್– ವಯೋಲಿನ್, 4.00 ಮಹಿಳಾರಂಗ –ಸಖೀ ಸಂವಾದ, ಪ್ರಸ್ತುತಿ– ಎಂ.ಎಸ್. ಭಾರತಿ, 6.50 ಕೃಷಿರಂಗ– ಕಿಸಾನ್ ವಾಣಿ, ವಾಣಿಜ್ಯ ಬೆಳೆಗಳ ಅಭಿವೃದ್ಧಿ ಹಾಗೂ ಆರ್ಥಿಕತೆ ಕುರಿತು ಕುಳ್ಳೇಗೌಡ ಅವರೊಡನೆ ಸಂದರ್ಶನ, 9.00 ಸಂಧ್ಯಾರಾಗ, 10.30 ಸವಿನೆನಪು

■ **ಗಾನಭಾರತೀ :** ಶ್ರೀ ವೀಣಾ ಬಾಲಚಂದರ್ ಸಂಸ್ಮರಣಾ ಸಂಗೀತ ಕಾರ್ಯಕ್ರಮ, ವಿದುಷಿ ಮೈಸೂರು ಎಸ್. ರಾಜಲಕ್ಷ್ಮಿ ಅವರಿಂದ ವೀಣಾವಾದನ, ವಿದ್ವಾನ್ ಬಿ.ಆರ್. ಶ್ರೀನಿವಾಸ್ –ಮೃದಂಗ, ವಿದ್ವಾನ್ ಶರತ್ ಕೌಶಿಕ್ –ಘಟಂ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.

■ **ಶ್ರೀ ರಾಮಾಭ್ಯುದಯ ಸಭಾ ಪಬ್ಲಿಕ್ ಚಾರಿಟಬಲ್ ಟ್ರಸ್ಟ್ :** ಶ್ರೀರಾಮ ಪಟ್ಟಾಭಿಷೇಕ, ಹನುಮಂತೋತ್ಸವ, ಸಂಜೆ 6.30 ಗಂಟೆಗೆ ರಾಜಬೀದಿಗಳಲ್ಲಿ ಮೆರವಣಿಗೆ, ವಿದ್ವಾನ್ ಪಾರ್ಥಸಾರಥಿ ಅವರಿಂದ ನಾದಸ್ವರ ವಾದನ, ರಾತ್ರಿ 8 ಗಂಟೆಗೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಆಲಮ್ಮನವರ ಛತ್ರ, ಕುಂಚಿಟಿಗರ ಸಂಘ.

ಅಳಗಂಚಿ, ನಂಜನಗೂಡು ತಾಲೂಕು

■ **ಜೆಎಸ್‌ಎಸ್ ಡಿಇಡಿ ಕಾಲೇಜು ಸುತ್ತೂರು:** ರಾಷ್ಟ್ರೀಯ ಸೇವಾ ಯೋಜನೆ ವಿಶೇಷ ವಾರ್ಷಿಕ ಶಿಬಿರದ ಸಮಾರೋಪ ಸಮಾರಂಭ, ಅಧ್ಯಕ್ಷತೆ : ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎನ್. ರಾಜು, ಅತಿಥಿಗಳು : ಗ್ರಾಪಂ ಅಧ್ಯಕ್ಷೆ ಆರ್. ರೋಹಿಣಿ, ಹಾಲು ಉತ್ಪಾದಕರ ಸಹಕಾರ ಸಂಘದ ಕಾರ್ಯದರ್ಶಿ ಕೃಷ್ಣಯ್ಯ, ಸಮಾರೋಪ ಭಾಷಣ : ಜೆಎಸ್‌ಎಸ್ ಮಹಿಳಾ ಪದವಿ ಕಾಲೇಜು ಇತಿಹಾಸ ವಿಭಾಗದ ಮುಖ್ಯಸ್ಥ ಡಾ. ಎನ್. ಮಹದೇವಸ್ವಾಮಿ, ಸ್ಥಳ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣ ಅಳಗಂಚಿ, ಬೆಳಗ್ಗೆ 11ಕ್ಕೆ

ದೊಡ್ಡಹುಂಡಿ, ಮೈಸೂರು ತಾಲೂಕು

■ **ವಾತ್ಸಲ್ಯ ಶಿಕ್ಷಣ ಮಹಾವಿದ್ಯಾಲಯ :** ಸಮುದಾಯ ಜೀವನ ಶಿಬಿರ, ಬೆಳಗ್ಗೆ 6.15 ರಿಂದ ಧ್ವಜಾರೋಹಣ ಮತ್ತು ಸಾಮೂಹಿಕ ಪ್ರಾರ್ಥನೆ, ಬೆಳಗ್ಗೆ 6.30 ರಿಂದ ಮುಸುಕಿನ ಮಬ್ಬಿನಲಿ ಯೋಗ, ನಿವೃತ್ತ ಮುಖ್ಯೋಪಾಧ್ಯಾಯ ಪ್ರಭಾಕರಮೂರ್ತಿ ಅವರಿಂದ ಶಿಕ್ಷಣದಲ್ಲಿ ಭಾಷಾ ಸಂವಹನ ಮತ್ತು ಅಭಿವ್ಯಕ್ತತೆ ಕುರಿತು ಉಪನ್ಯಾಸ, ಸ್ಥಳ: ಮೊರಾರ್ಜಿ ದೇಸಾಯಿ ವಸತಿ ಶಾಲೆ.

ದಸರಾ ವೇಳೆಗೆ ಮೈಸೂರು–ಬೆಂಗಳೂರು ದಶಪಥ ಹೆದ್ದಾರಿ ಸಂಚಾರಕ್ಕೆ ಮುಕ್ತ

● ಸಂಸದ ಪ್ರತಾಪ್ ಸಿಂಹ ವಿವರಣೆ ● 32 ಕಿ.ಮೀ. ಬೈಪಾಸ್ ರಸ್ತೆ; 1200 ಕೋಟಿ ಅಧಿಕ ವೆಚ್ಚ ● 118 ಕಿ.ಮೀ. ಹೆದ್ದಾರಿ; 75 ನಿಮಿಷಕ್ಕೆ ಕ್ರಮಿಸುವ ಸಾಧ್ಯತೆ



ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಸಂಸದ ಪ್ರತಾಪ್ ಸಿಂಹ ಮಾತನಾಡಿದರು. ಈ ವೇಳೆ ಬಿಜೆಪಿ ನಗರ ಅಧ್ಯಕ್ಷ ಟಿ.ಎಸ್.ಶ್ರೀವತ್ಸ, ಪ್ರಧಾನ ಕಾರ್ಯದರ್ಶಿಗಳಾದ ಹೆಚ್.ಜಿ.ಗಿರಿಧರ್, ಸೋಮ ಸುಂದರ್, ವಾಣೀಶ್ ಕುಮಾರ್ ಉಪಸ್ಥಿತರಿದ್ದರು.

ಮೈಸೂರು, ಏ.21(ಎಂಟಿವೈ)– ಬೆಂಗಳೂರು–ಮೈಸೂರು ದಶಪಥ ರಾಷ್ಟ್ರೀಯ ಹೆದ್ದಾರಿ ಯೋಜನೆಯು ನಿಗದಿತ ಕಾಲಮಿತಿಯೊಳಗೆ ಪೂರ್ಣಗೊಳ್ಳಲಿದ್ದು, ಮೊದಲ ಹಂತದಲ್ಲಿ ಬೆಂಗಳೂರಿ(ನೈಸ್ ರಸ್ತೆ ಜಂಕ್ಷನ್)ನಿಂದ ನಿಡಘಟ್ಟದವರೆಗೆ ಜೂನ್ ಅಂತ್ಯಕ್ಕೆ ಸಂಚಾರಕ್ಕೆ ಮುಕ್ತವಾಗಲಿದೆ. ಎರಡನೇ ಹಂತದಲ್ಲಿ ನಿಡಘಟ್ಟದಿಂದ ಮೈಸೂರು ರಿಂಗ್ ರಸ್ತೆ ಜಂಕ್ಷನ್‌ವರೆಗೆ ದಸರಾ ವೇಳೆಗೆ ಉದ್ಘಾಟನೆಗೊಳ್ಳಲಿದೆ ಎಂದು ಸಂಸದ ಪ್ರತಾಪ್ ಸಿಂಹ ತಿಳಿಸಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎರಡು ಮಹಾನಗರಗಳ ನಡುವೆ ಪ್ರಯಾಣದ ಅವಧಿ ಗಣನೀಯವಾಗಿ ಕಡಿತಗೊಳಿಸುವ ನಿಟ್ಟಿನಲ್ಲಿ ದಶಪಥ ರಸ್ತೆ ಸಹಕಾರಿಯಾಗಲಿದೆ. ಈ ಹಿಂದೆ ಪ್ರಕಟಿಸಿದ್ದಂತೆ ನಿಗದಿತ ಕಾಲಮಿತಿಯೊಳಗೆ ಸಂಚಾರಕ್ಕೆ ಮುಕ್ತಗೊಳಿಸಲಾಗುತ್ತದೆ. ಎರಡು ಹಂತದಲ್ಲಿ 118 ಕಿ.ಮೀ. ರಸ್ತೆ ನಿರ್ಮಿಸಲಾಗುತ್ತಿದ್ದು, ಕೇವಲ 75 ನಿಮಿಷದಲ್ಲಿ ಒಂದೆಡೆಯಿಂದ ಮತ್ತೊಂದೆಡೆಗೆ ಕ್ರಮಿಸಬಹುದಾಗಿದೆ. ಕೆಂಗೇರಿ(ನೈಸ್‌ರಸ್ತೆ ಜಂಕ್ಷನ್)ಯಿಂದ ನಿಡಘಟ್ಟವರೆಗೆ ಮೊದಲ ಹಂತದ ಕಾಮಗಾರಿ ಹಾಗೂ ನಿಡಘಟ್ಟದಿಂದ ಮೈಸೂರಿನ ಮಣಿಪಾಲ್ ಆಸ್ಪತ್ರೆ ಜಂಕ್ಷನ್‌ವರೆಗೆ ಕಾಮಗಾರಿ ಭರದಿಂದ ಸಾಗುತ್ತಿದೆ.

ಈ ದಶಪಥ ರಸ್ತೆಯಲ್ಲಿ ಶ್ರೀರಂಗಪಟ್ಟಣ, ಮಂಡ್ಯ, ಮದ್ದೂರು, ರಾಮನಗರ, ಬಿಡದಿ ಸೇರಿದಂತೆ ವಿವಿಧೆಡೆ ಒಟ್ಟು 32 ಕಿ.ಮಿ ಬೈಪಾಸ್ ರಸ್ತೆ ನಿರ್ಮಿಸಲಾಗಿದೆ. ಹಾಗಾಗಿಯೇ ದಶಪಥ ರಸ್ತೆಯ 118 ಕಿ.ಮೀ. ದೂರವನ್ನು 75 ನಿಮಿಷದಲ್ಲಿ ಕ್ರಮಿಸಲು ಸಾಧ್ಯವಾಗಲಿದೆ ಎಂದು ಅಭಿಪ್ರಾಯಪಟ್ಟರು.

ಹೆಚ್ಚುವರಿ 1200 ಕೋಟಿ. ರೂ ವಿನಿಯೋಗ: ಮೈಸೂರು–ಬೆಂಗಳೂರು ನಡುವಿನ ದಶಪಥ ರಸ್ತೆಗೆ ಈ ಮೊದಲು 8.300 ಕೋಟಿ ಯೋಜನಾ ವೆಚ್ಚ ನಿಗದಿಯಾಗಿತ್ತು. ಆದರೆ ಇದೀಗ ಇನ್ನು 9 ಕಾಮಗಾರಿಗಳನ್ನು ಹೆಚ್ಚುವರಿಯಾಗಿ ಕೈಗೊಳ್ಳಲಾಗಿದ್ದು, ಅದಕ್ಕಾಗಿ ಭೂಸ್ವಾಧೀನಪಡಿಸಿಕೊಂಡು ಕಾಮಗಾರಿ ನಡೆಸುವುದಕ್ಕಾಗಿ 1200 ಕೋಟಿ ರೂ.ಗಳನ್ನು ಹೆಚ್ಚುವರಿ ವಿನಿಯೋಗಿಸಲಾಗುತ್ತಿದೆ. ಇದರಿಂದ ಈ ಯೋಜನೆಯ ಪೂರ್ಣ ವೆಚ್ಚ 9.500 ಕೋಟಿ ರೂ. ಆಗಿದ್ದು, ದೇಶದಲ್ಲಿಯೇ ಬೃಹತ್ ಯೋಜನೆಯಾಗಿದೆ ಎಂದರು.

ಹೆಲಿಪ್ಯಾಡ್ ನಿರ್ಮಾಣ: ದಶಪಥ ರಸ್ತೆಯಲ್ಲಿ ಏನಾದರೂ ದುರ್ಘಟನೆ ಸಂಭವಿಸಿ, ಟ್ರಾಫಿಕ್ ಜಾಮ್ ಆದರೆ ಅಥವಾ ಇನ್ನಿತರೆ ತುರ್ತು ಸಂದರ್ಭದಲ್ಲಿ ಏರ್ ಲಿಫ್ಟ್ ಮಾಡಬೇಕಾದ ಅನಿವಾರ್ಯತೆ ಹಿನ್ನೆಲೆಯಲ್ಲಿ ಮಾರ್ಗ ಮಧ್ಯೆ ಹೆಲಿಪ್ಯಾಡ್ ನಿರ್ಮಿಸಲಾಗುತ್ತಿದೆ. ಅಲ್ಲದೆ ರಸ್ತೆಯ ಎರಡೂ ಮಾರ್ಗದಲ್ಲೂ ತಲಾ ಎರಡು ರೆಸ್ಟ್ ಏರಿಯಾ ನಿರ್ಮಿಸಲಾಗುತ್ತಿದ್ದು, ಅದರಲ್ಲಿ ಹೋಟೆಲ್, ಶೌಚಾಲಯ, ವಿಶ್ರಾಂತಿ ತಾಣ, ಕುಡಿಯುವ ನೀರಿನ ಸೌಲಭ್ಯ, ಪೆಟ್ರೋಲ್, ಡೀಸೆಲ್, ಗ್ಯಾಸ್ ಬಂಕ್, ಬ್ಯಾಟರಿ ಚಾಲಿತ ವಾಹನಗಳ ಚಾರ್ಜಿಂಗ್ ಪಾಯಿಂಟ್, ಕರಕುಶಲ ವಸ್ತುಗಳ ಮಾರಾಟ, ತಿಂಡಿ ತಿನಿಸುಗಳ ಮಳಿಗೆಗಳನ್ನು ನಿರ್ಮಿಸಲಾಗುತ್ತದೆ. ಪಾಂಡವಪುರ ರಸ್ತೆಗೆ ಸಂಪರ್ಕ ಕಲ್ಪಿಸಲು 700 ಮೀಟರ್ ಸಂಪರ್ಕ ರಸ್ತೆ, ನೈಸ್ ರಸ್ತೆಗೆ ಸಂಪರ್ಕ ರಸ್ತೆ, ಮಣಿಪಾಲ್ ಆಸ್ಪತ್ರೆ ರಸ್ತೆ ಬಳಿ ಫ್ಲೈಓವರ್, ರಸ್ತೆ ವಿಭಜಕಕ್ಕೆ ಯಾವುದಾದರೂ ವಾಹನ ಡಿಕ್ಕಿಯಾದರೆ ಪಕ್ಕದ ಟ್ರ್ಯಾಕ್‌ಗೆ ಹಾರುವ ಸಾಧ್ಯತೆ ಇರುವುದರಿಂದ ಅದನ್ನು ತಡೆಗಟ್ಟಲು ಮೆಟಲ್ ಬೀಮ್ ಕ್ರಾಶ್ ಬ್ಯಾರಿಯರ್, 16 ಪ್ರಮುಖ ಸ್ಥಳಗಳಲ್ಲಿ ಎಂಟ್ರಿ ಪಾಯಿಂಟ್, 96 ಕಡೆ ಬಸ್‌ಬೇ ಜೊತೆ ತಂಗುದಾಣ, 18 ಸ್ಥಳಗಳಲ್ಲಿ ಪಾದಚಾರಿಗಳು ರಸ್ತೆ ದಾಟಲು ಫುಟ್ ಓವರ್ ಬ್ರಿಡ್ಜ್ ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ವಿವರಿಸಿದರು.

4 ಸಾವಿರ ಕೋಟಿ ವೆಚ್ಚ: ಮೈಸೂರು–ಕುಶಾಲನಗರ ಎನ್‌ಎಚ್‌ಗೆ 4 ಸಾವಿರ ಕೋಟಿ ಆಗಲಿದೆ. ಪಶ್ಚಿಮವಾಹಿನಿಯಿಂದ ಪಿರಿಯಾಪಟ್ಟಣ, ಪಿರಿಯಾಪಟ್ಟಣ ಗುಡ್ಡೆ–ಹೊಸೂರು, ಗುಡ್ಡೆಹೊಸೂರಿನಿಂದ ಕುಶಾಲನಗರ ತನಕ 120 ಕಿ.ಮೀ ತನಕ ಹೆದ್ದಾರಿ ನಿರ್ಮಾಣ ಮಾಡಲಾಗುತ್ತಿದೆ. ಇದಕ್ಕೆ ಟೆಂಡರ್ ಪ್ರಕ್ರಿಯೆ ನಡೆಸಿ ಶೀಘ್ರದಲ್ಲೇ ಕಾಮಗಾರಿ ಆರಂಭವಾಗಲಿದೆ ಎಂದು ತಿಳಿಸಿದರು.

ಗ್ಯಾಸ್ ಪೈಪ್‌ಲೈನ್ ವಿವಾದ ಅಂತ್ಯ: ಗ್ಯಾಸ್ ಪೈಪ್‌ಲೈನ್ ಅಳವಡಿಕೆ ವಿಚಾರದಲ್ಲಿ ಈ ಹಿಂದೆ ಆಕ್ಷೇಪ ವ್ಯಕ್ತಪಡಿಸಿದ್ದ ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ ಅವರಿಗೆ ಇದರ ಅನಿವಾರ್ಯತೆ ಬಗ್ಗೆ ಮನವರಿಕೆ ಮಾಡಿಕೊಡಲಾಗಿದೆ. ಇದರೊಂದಿಗೆ ಎನ್.ಆರ್.ಕ್ಷೇತ್ರದ ಶಾಸಕ ತನ್ವೀರ್ ಸೇಠ್, ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರ ಸಹಕಾರವನ್ನೂ ಕೋರಲಾಗಿದ್ದು, ಮೈಸೂರಲ್ಲಿ 500 ಕಿ.ಮಿ ಗ್ಯಾಸ್‌ಪೈಪ್‌ಲೈನ್ ಅಳವಡಿಕೆ ಕಾಮಗಾರಿ ನಡೆಸಲಾಗುತ್ತಿದೆ. ಪ್ರಸ್ತುತ ರಿಂಗ್ ರಸ್ತೆಯಲ್ಲಿ ಪೈಪ್‌ಲೈನ್ ಅಳವಡಿಕೆ ಕಾಮಗಾರಿ ಪ್ರಗತಿಯಲ್ಲಿದೆ. ಪಾಲಿಕೆ ಕೌನ್ಸಿಲ್ ಸಭೆಯಲ್ಲಿ ಅನುಮತಿ ಪಡೆದು ಪಾಲಿಕೆ ವ್ಯಾಪ್ತಿಯಲ್ಲೂ ಕಾಮಗಾರಿ ಆರಂಭಿಸಲಾಗುತ್ತದೆ. ವಾಸ್ತವ ಸ್ಥಿತಿ ಎಲ್ಲರಿಗೂ ಅರ್ಥವಾಗಿದೆ. ರಸ್ತೆಯಲ್ಲಿ ಹಳ್ಳ ತೆಗೆದ 24 ಗಂಟೆ ಒಳಗೆ ಕಾಮಗಾರಿ ಮುಗಿಸಲಾಗುವುದು. ಈ ಯೋಜನೆಯನ್ನು ನಂಜನಗೂಡು, ಹುಣಸೂರು, ಪಿರಿಯಾಪಟ್ಟಣ, ಕೊಡಗು ಜಿಲ್ಲೆಗೆ ವಿಸ್ತರಿಸಲಾಗುವುದು. ಈಗಾಗಲೇ ನಂಜನಗೂಡಿನ ಕೈಗಾರಿಕಾ ಪ್ರದೇಶದಲ್ಲಿ ಗ್ಯಾಸ್ ಪೈಪ್‌ಲೈನ್ ಅಳವಡಿಕೆ ಕಾರ್ಯ ನಡೆಯುತ್ತಿದೆ ಎಂದರು. ಗ್ಯಾಸ್ ಸಂಪರ್ಕ ಪಡೆಯಲು ಚಾಮರಾಜ ಕ್ಷೇತ್ರದಲ್ಲಿ ಗ್ರಾಹಕರ ನೋಂದಣಿ ಶುರುವಾಗಿದೆ. 15 ಸಾವಿರ ಜನರು ನೋಂದಾಯಿಸಿದ್ದಾರೆ. ಪೈಪ್‌ಲೈನ್ ಅಳವಡಿಕೆಗೆ ಪಾಲಿಕೆಯಿಂದ ಒಪ್ಪಿಗೆ ಪಡೆಯಲಾಗುವುದು ಎಂದರು.

ಗ್ರೇಟರ್ ಮೈಸೂರು: ಮೈಸೂರು ಬೃಹತ್ ಮಹಾನಗರ ಪಾಲಿಕೆ ಮಾಡುವುದರ ಹಿಂದೆಯೇ ಮೊನೋ ಮತ್ತು ಮೆಟ್ರೋ ರೈಲು ಬರಬೇಕು ಎನ್ನುವ ಉದ್ದೇಶವಿದೆ. ಜನಸಂಖ್ಯೆ ಪ್ರಮಾಣ ಹೆಚ್ಚಿರಬೇಕು. ಸ್ಯಾಟಲೈಟ್ ರೈಲ್ವೆ ನಿರ್ಮಾಣ ಆಗಲಿದೆ. ಫೆರಿಫೆರಲ್ ರಿಂಗ್‌ರೋಡ್, ಮೆಟ್ರೋ ರೈಲು ಯೋಜನೆ ಬರಬೇಕು. 20 ವರ್ಷಗಳ ಹಿಂದಕ್ಕೆ ಹೋಲಿಸಿದರೆ ಪುಣೆ ಮತ್ತು ಮೈಸೂರು ಸಮಾನ ಖ್ಯಾತಿಯನ್ನು ಹೊಂದಿತ್ತು. ಮುಂಬೈ ಮತ್ತು ಪುಣೆ ನಡುವೆ ನಿರ್ಮಿಸಿದ ಹೆದ್ದಾರಿ ಪುಣೆಯ ದಿಕ್ಕನ್ನೇ ಬದಲಿಸಿತು. ಹಾಗೆಯೇ ದಶಪಥ ರಸ್ತೆಯೂ ಮೈಸೂರಿನ ಅಭಿವೃದ್ಧಿ ಶರವೇಗದಲ್ಲಿ ಸಾಗಲು ಕಾರಣವಾಗಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ನಗರ ಬಿಜೆಪಿ ಅಧ್ಯಕ್ಷ ಟಿ.ಎಸ್.ಶ್ರೀವತ್ಸ, ಪ್ರಧಾನ ಕಾರ್ಯದರ್ಶಿಗಳಾದ ಹೆಚ್.ಜಿ.ಗಿರಿಧರ್, ವಿ.ಸೋಮಸುಂದರ್, ವಾಣೀಶ್ ಕುಮಾರ್ ಉಪಸ್ಥಿತರಿದ್ದರು.

ದೇವರಾಜ ಮಾರುಕಟ್ಟೆ, ಲ್ಯಾನ್ಸ್‌ಡೌನ್ ಕಟ್ಟಡ ಸಂಬಂಧ ಮೈಸೂರು ರಾಜಮನೆತನದ ಮಾತಿಗೆ ಮನ್ನಣೆ

ಮೈಸೂರು: ನಾವು ಮೈಸೂರು ಮಹಾರಾಜರ ಋಣದಲ್ಲಿದ್ದೇವೆ. ಹಾಗಾಗಿ ಅವರ ಮಾತಿಗೆ ಮನ್ನಣೆ ನೀಡುತ್ತೇವೆ. ದೇವರಾಜ ಮಾರುಕಟ್ಟೆ ಹಾಗೂ ಲ್ಯಾನ್ಸ್‌ಡೌನ್ ಕಟ್ಟಡದ ವಿಚಾರದಲ್ಲಿ ರಾಜಮನೆತನದ ಅಭಿಪ್ರಾಯಕ್ಕೆ ಮನ್ನಣೆ ನೀಡಲಾಗುವುದು ಎಂದು ಸಂಸದ ಪ್ರತಾಪ ಸಿಂಹ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇವರಾಜ ಮಾರುಕಟ್ಟೆ ಕಟ್ಟಡ ಬಹಳ ಶಿಥಿಲವಾಗಿದೆ. ರಾಜಮನೆತನದ ಪ್ರಮೋದಾದೇವಿ ಒಡೆಯರ್, ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಭೇಟಿ ಮಾಡಿ ವಾಸ್ತವ ಸ್ಥಿತಿಯ ಮನವರಿಕೆ ಮಾಡಿಕೊಡಲಾಗುತ್ತದೆ. ಮೈಸೂರು ಸಂಸ್ಥಾನಕ್ಕೆ ಮಹಾರಾಜರ ಕೊಡುಗೆ ಅಪಾರವಿದೆ. ಅವರು ಮಾಡಿದ ಅಭಿವೃದ್ಧಿ ಕಾರ್ಯಗಳಿಂದ ಮೈಸೂರು ಪ್ರಖ್ಯಾತಿ ಹೊಂದಿದೆ. ರಾಜಮನೆತನದವರ ಅಭಿಪ್ರಾಯವನ್ನು ಗಂಭೀರವಾಗಿ ಪರಿಗಣಿಸುತ್ತೇವೆ. ಅವರ ಸಲಹೆಗಳನ್ನು ಕೇಳಲಾಗುವುದು. ಅವರು ಒಪ್ಪಿಗೆ ಸೂಚಿಸುವ ಸಂದರ್ಭ ಬರಬಹುದು ಎಂದರು.

ದೇವರಾಜ ಮಾರುಕಟ್ಟೆ ವಿಚಾರದಲ್ಲಿ ಏಕಪಕ್ಷೀಯ ಕೆಲಸ ಮಾಡಲ್ಲ. ಅವರು ಹೇಳುವ ವಿಚಾರಗಳನ್ನು ಆಲಿಸಲು ಜಿಲ್ಲಾ ಉಸ್ತುವಾರಿ ಸಚಿವರ ಸಮ್ಮುಖದಲ್ಲಿ ಭೇಟಿ ಮಾಡಿ ಸಮಾಲೋಚನೆ ಮಾಡುತ್ತೇವೆ ಎಂದರು.

ಮೈಸೂರು ವಿಮಾನ ನಿಲ್ದಾಣಕ್ಕೆ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್, ರೈಲು ನಿಲ್ದಾಣಕ್ಕೆ ಚಾಮರಾಜ ಒಡೆಯರ್ ಹೆಸರನ್ನು ನಾಮಕರಣ ಮಾಡಲು ತೀರ್ಮಾನ ಮಾಡಲಾಗಿದೆ. ಖಾಸಗಿಯಾಗಿ ವಿಮಾನ ನಿಲ್ದಾಣ, ರೈಲು ನಿಲ್ದಾಣ ಸ್ಥಾಪಿಸಿಕೊಂಡಿದ್ದರ ನೆನಪಿಗಾಗಿ ಅವರ ಹೆಸರನ್ನು ಇಡಲಾಗುವುದು ಎಂದು ಸ್ಪಷ್ಟಪಡಿಸಿದರು.

ದೇಶಕ್ಕೆ ಒಬ್ಬರೇ ಪ್ರಧಾನಿ ಮೋದಿ ಇರುವುದು. ದಶಪಥ ರಸ್ತೆ ವಿಚಾರದಲ್ಲಿ ಬಹಿರಂಗ ಚರ್ಚೆಗೆ ಆಹ್ವಾನಿಸಿರುವ ಸಿದ್ದರಾಮಯ್ಯ ಮೊದಲು ನಮ್ಮೊಂದಿಗೆ ಬಹಿರಂಗ ಚರ್ಚೆಗೆ ಬರಲಿ. ಆಮೇಲೆ ಮೋದಿ ಜತೆ ಮಾತನಾಡಲಿ ಎಂದರು. ಉದ್ಯಮಿ ಅಂಬಾನಿ, ಅದಾನಿ ಆದಾಯದ ಬಗ್ಗೆ ಮಾತನಾಡುವ ಸಿದ್ದರಾಮಯ್ಯ ಮೊದಲು ಮತ್ತು ಈಗ ಹೇಗೆ ಇದ್ದಾರೆ. ಕೆ.ಜೆ.ಜಾರ್ಜ್, ಎಂ.ಬಿ.ಪಾಟೀಲ್, ಡಿ.ಕೆ.ಶಿವಕುಮಾರ್ ಯಾವ ಗದ್ದೆಯಲ್ಲಿ ಜೋಳ, ಆಲೂಗೆಡ್ಡೆ ಬೆಳೆದು ಆದಾಯ ಗಳಿಸಿದ್ದಾರೆ. 40 ವರ್ಷದ ಹಿಂದೆ ಕೆ.ಜೆ.ಜಾರ್ಜ್, ಡಿ.ಕೆ.ಶಿವಕುಮಾರ್ ಹೇಗಿದ್ದರು ಎಂಬುದು ಗೊತ್ತಿಲ್ಲವೇ ಎಂದು ಪ್ರಶ್ನಿಸಿದರು.

ಕಲ್ಲು ತೂರುವ ಮನಸ್ಥಿತಿ ಬಿಡದಿದ್ದರೆ ಬುಲ್ಡೋಜರ್ ಕಾರ್ಯಾಚರಣೆ

ಮೈಸೂರು: ಹಿಂದೂಗಳು ಆಚರಿಸುವ ಶ್ರೀರಾಮ ನವಮಿ, ಹನುಮ ಜಯಂತಿ ಹಾಗೂ ಗಣೇಶನ ಮೆರವಣಿಗೆಯಲ್ಲಿ ಕಲ್ಲು ತೂರುವ ಮನಸ್ಥಿತಿ, ಧೋರಣೆಯನ್ನು ಇನ್ನಾದರು ಬಿಡದಿದ್ದರೆ ತಕ್ಕಶಾಸ್ತಿ ಎದುರಿಸಬೇಕಾಗುತ್ತದೆ ಎಂದು ಸಂಸದ ಪ್ರತಾಪ ಸಿಂಹ ಎಚ್ಚರಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗಾಗಲೇ ಉತ್ತರಪ್ರದೇಶ ಹಾಗೂ ಮಹಾರಾಷ್ಟ್ರ ಸರ್ಕಾರಗಳು ಕಲ್ಲು ತೂರಿದವರ ಮನೆ ಮುಂದೆ ಬುಲ್ಡೋಜರ್ ಕಾರ್ಯಾಚರಣೆ ಆರಂಭಿಸಿವೆ. ಕರ್ನಾಟಕದಲ್ಲೂ ಕಲ್ಲು ತೂರಾಟ, ಗಲಭೆ ಮುಂದುವರೆಸಿದರೆ ಇನ್ನು ಮುಂದೆ ಬುಲ್ಡೋಜರ್ ಸದ್ದು ಮಾಡುತ್ತವೆ. ಕಲ್ಲು ತೂರುವ ಮನಸ್ಥಿತಿ ನಿಲ್ಲಬೇಕು. ಇನ್ನು ಮುಂದೆ ಕ್ರಿಯೆಗೆ ತಕ್ಕ ಪ್ರತಿಕ್ರಿಯೆ ಕೊಡಲು ನಾವು ತಯಾರಾಗಿದ್ದೇವೆ. ಕೆಲವು ಪುಂಡರಿಂದಾಗಿ ಇಡೀ ಸಮುದಾಯವನ್ನೇ ದೂಷಿಸುವುದು ಸರಿಯಲ್ಲ ಎಂದು ಕೆಲವರು ಹೇಳುತ್ತಾರೆ. ಆದರೆ ಕಲ್ಲು ತೂರಾಟ ನಡೆಸಿದ ಸಮುದಾಯದಲ್ಲಿರುವ ಪ್ರಜ್ಞಾವಂತರು, ರೋಲ್ ಮಾಡೆಲ್‌ಗಳು ಎಂದಾದರೂ ಕಲ್ಲು ತೂರದಂತೆ ಸಲಹೆ ನೀಡಿದ್ದಾರೆಯೇ. ಕಲ್ಲು ತೂರಾಟ ನಡೆಸಿದ್ದವರಿಗೆ ವಾಗ್ದಂಡನೆ ಕೂಡ ವಿಧಿಸಲ್ಲ. ಇದರಿಂದ ಇಡೀ ಸಮುದಾಯ ಒಂದೇ ಎಂಬ ಸಂದೇಶ ಹೋಗುತ್ತದೆ. ಇನ್ನಾದರೂ ಪ್ರಜ್ಞಾವಂತರು ಕಲ್ಲು ತೂರಿದವರ ವಿರುದ್ಧ ಮಾತನಾಡಬೇಕು ಎಂದು ಸಲಹೆ ನೀಡಿದರು.

ಹುಬ್ಬಳ್ಳಿ ಗಲಭೆ ವಿಚಾರದಲ್ಲಿ ಪೊಲೀಸರಿಬ್ಬರನ್ನು ಹತ್ಯೆ ಮಾಡಲು ಸ್ಕೆಚ್ ಹಾಕಲಾಗಿತ್ತು ಎನ್ನುವ ವಿಚಾರ ಹೊರಬಂದಿದೆ. ಕರ್ನಾಟಕ ಎತ್ತ ಸಾಗುತ್ತಿದೆ ಎನ್ನುವುದಕ್ಕಿಂತ ಮುಸಲ್ಮಾನರು ಯಾವ ಕಡೆಗೆ ಸಾಗುತ್ತಿದ್ದಾರೆಂದು ಯೋಚಿಸಬೇಕು. ಅಲ್ಲಾ ಬಿಟ್ಟರೆ ಬೇರೆ ಯಾವುದೇ ದೇವರಿಲ್ಲವೆಂದು ದಿನಕ್ಕೆ ಐದು ಬಾರಿ ಕೂಗುವಾಗ ಮೈಕ್‌ಗೆ ನಾವ್ಯಾರು ಕಲ್ಲು ಹೊಡೆದಿಲ್ಲ. ಉರುಸ್ ಮೆರವಣಿಗೆ ವೇಳೆ ಕಲ್ಲು ತೂರಿಲ್ಲ. ಅದೇ ರಾಮ, ಆಂಜನೇಯ, ಗಣೇಶನ ಮೆರವಣಿಗೆ ವೇಳೆ ಕಲ್ಲು ತೂರುತ್ತಾರೆ. ಕಲ್ಲು ಹೊಡೆಯುವ ಮನಸ್ಥಿತಿಯನ್ನು ಅವರು ಬಿಡಬೇಕು ಎಂದರು.

ಆಕ್ಷನ್‌ಗೆ ರಿಯಾಕ್ಷನ್ ಅನಿವಾರ್ಯ. ಸಮಾಜಘಾತುಕ ಶಕ್ತಿಗಳನ್ನು ಮಟ್ಟಹಾಕಬೇಕಿದೆ. ಯುಪಿಯಲ್ಲಿ ಆರಂಭವಾದ ಬುಲ್ಡೋಜರ್ ಕಾರ್ಯಾಚರಣೆ ಮಧ್ಯಪ್ರದೇಶ, ಹೊಸದಿಲ್ಲಿಯಲ್ಲಿ ನಡೆದಿದೆ. ಮುಂದೆ ಕರ್ನಾಟಕಕ್ಕೂ ಕಾಲಿಡಲಿದೆ. ಕಲ್ಲು ತೂರುವವರಿಗೆ ಬುಲ್ಡೋಜರ್ ನೆಲಸಮ ಮಾಡುವುದು ಅನಿವಾರ್ಯ. ಯುಎಪಿಎ ಕಾಯ್ದೆಯಡಿ ಮೊಕದ್ದಮೆ ಹೂಡಲು ಸಿದ್ಧತೆಗಳನ್ನು ನಡೆಸಲಾಗಿದೆ. ಸರ್ಕಾರ ಈ ವಿಚಾರದಲ್ಲಿ ನಿರ್ದಾಕ್ಷಿಣ್ಯ ಕ್ರಮಗಳನ್ನು ಕೈಗೊಳ್ಳುವುದು ಅನಿವಾರ್ಯವಿದೆ ಎಂದು ಹೇಳಿದರು.

4ನೇ ಅಲೆ ಬಂದರೂ ಎದುರಿಸಲು ನಾವ್ ರೆಡಿ

● ಮಾಸ್ಕ್ ಧರಿಸುವುದು, ಸಾಮಾಜಿಕ ಅಂತರ ಈಗಲೂ ಕಡ್ಡಾಯ
● ಮೈಸೂರು ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಸ್ಪಷ್ಟನೆ



ಮೈಸೂರು,ಏ.21(ಆರ್‌ಕೆ)–ಒಂದು ವೇಳೆ ಕೋವಿಡ್ 4ನೇ ಅಲೆ ಬಂದರೂ ಎದುರಿಸಲು ಮೈಸೂರು ಜಿಲ್ಲಾಡಳಿತ ಸರ್ವ ರೀತಿಯಲ್ಲಿ ಸಜ್ಜಾಗಿದೆ ಎಂದು ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್ ತಿಳಿಸಿದ್ದಾರೆ.

ದೆಹಲಿಯಲ್ಲಿ ಕೋವಿಡ್ ಸೋಂಕು ಪತ್ತೆಯಾಗುತ್ತಿರುವ ಹಿನ್ನೆಲೆಯಲ್ಲಿ ರಾಜ್ಯದಲ್ಲೂ ನಾಲ್ಕನೇ ಅಲೆ ಅಪ್ಪಳಿಸಬಹುದೆಂದು ಹೇಳುತ್ತಿರುವ ಕುರಿತಂತೆ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿರುವ ಜಿಲ್ಲಾಧಿಕಾರಿಗಳು, ಕೋವಿಡ್–19 ಪರಿಸ್ಥಿತಿ ಎದುರಿಸಲು ನಾವು 3ನೇ ಅಲೆಯಲ್ಲೇ ಸಂಪೂರ್ಣವಾಗಿ ಸಜ್ಜಾಗಿದ್ದೆವು. ಮಂಡಕಳ್ಳಿಯ ಮುಕ್ತ ವಿಶ್ವವಿದ್ಯಾನಿಲಯದ ಭವನ, ಕೆಆರ್‌ಎಸ್ ರಸ್ತೆಯ ಇಎಸ್‌ಐ ಆಸ್ಪತ್ರೆಗಳಲ್ಲಿ ಯಾವಾಗ ಬೇಕಾದರೂ ಸೋಂಕಿತರನ್ನು ಸೇರಿಸಿ ಚಿಕಿತ್ಸೆ ನೀಡಬಹುದಾಗಿದೆ ಎಂದರು.

ಆಸ್ಪತ್ರೆಗಳಲ್ಲಿ ಹಾಸಿಗೆ, ಆಕ್ಸಿಜನ್ ವ್ಯವಸ್ಥೆ, ಔಷಧಿ, ಪರೀಕ್ಷಾ ಉಪಕರಣಗಳು, ಆಕ್ಸಿಜನ್ ಪ್ಲಾಂಟ್‌ಗಳು, ಐಸಿಯು ಬೆಡ್, ವೆಂಟಿಲೇಟರ್ ಸಿದ್ಧವಾಗಿವೆ. 3ನೇ ಅಲೆವರೆಗೂ ಕೋವಿಡ್ ನಿಯಂತ್ರಣದಲ್ಲಿ ಅನುಭವವಾಗಿರುವುದರಿಂದ ನಾಲ್ಕನೇ ಅಲೆ ಎದುರಿಸುವುದು ಕಷ್ಟವೇನಲ್ಲ ಎಂದು ತಿಳಿಸಿದರು.

ಕೋವಿಡ್ ಪರೀಕ್ಷೆ, ಲಸಿಕೆ, ವೈದ್ಯಕೀಯ ಉಪಕರಣಗಳು, ವೈದ್ಯರು, ಸ್ಟಾಫ್ ನರ್ಸ್, ವೈದ್ಯಕೇತರ ಸಿಬ್ಬಂದಿಯನ್ನು ಕೋವಿಡ್ ಕರ್ತವ್ಯಕ್ಕೆ ನಿಯೋಜಿಸುವುದು ಈಗ ಮತ್ತಷ್ಟು ಸುಲಭ ಎಂದರು.

ಕೋವಿಡ್ ಪ್ರಕರಣಗಳು ಕಡಿಮೆಯಾಗಿರಬಹುದಾದರೂ, ಕೇಂದ್ರ ಸರ್ಕಾರದ ಕೆಲ ಮಾರ್ಗಸೂಚಿಗಳು ಈಗಲೂ ಜಾರಿಯಲ್ಲಿವೆ. ಮಾಸ್ಕ್ ಧರಿಸುವುದು, ಸ್ಯಾನಿಟೈಸರ್ ಬಳಕೆ, ಸಾಮಾಜಿಕ ಅಂತರ ಕಾಪಾಡುವುದು, ಕಡ್ಡಾಯವಾಗಿ ಕೋವಿಡ್ ಟೆಸ್ಟ್ ಮಾಡಿಸಿಕೊಳ್ಳುವುದು, ಲಸಿಕೆ ಪಡೆಯಬೇಕೆಂಬ ನಿಯಮಗಳನ್ನು ತೆರವುಗೊಳಿಸಿಲ್ಲ ಎಂದು ಡಾ. ಬಗಾದಿ ಗೌತಮ್ ತಿಳಿಸಿದರು.

ಆದರೆ ಕೋವಿಡ್ ಪಾಸಿಟಿವ್ ಕೇಸ್‌ಗಳ ಸಂಖ್ಯೆ ತೀವ್ರ ಗತಿಯಲ್ಲಿ ಕಡಿಮೆಯಾಗಿರುವುದರಿಂದ ಮಾಸ್ಕ್ ಧರಿಸುವುದು, ಸಾಮಾಜಿಕ ಅಂತರ ಕಾಪಾಡುವುದನ್ನು ಜನರು ಮರೆತಂತಿದೆ. ನಮ್ಮ ಆರೋಗ್ಯ ಕಾಪಾಡಿಕೊಂಡು ಇತರರನ್ನೂ ಕೊರೊನಾ ಸೋಂಕಿನಿಂದ ರಕ್ಷಿಸುವುದು ಅತೀ ಮುಖ್ಯವಾಗಿರುವುದರಿಂದ ಕೋವಿಡ್ ಮಾರ್ಗಸೂಚಿಗಳನ್ನು ತಪ್ಪದೇ ಪಾಲಿಸುವಂತೆಯೂ ಸಲಹೆ ನೀಡಿದ್ದಾರೆ.

ಪಾಸಿಟಿವ್ ಪ್ರಕರಣಗಳು ಪತ್ತೆಯಾಗದೇ, ಮಾರ್ಗಸೂಚಿಗಳನ್ನು ಅನುಸರಿಸಬೇಕೆಂದು ಪದೇ ಪದೇ ಒತ್ತಾಯಪೂರ್ವಕವಾಗಿ ಹೇಳುತ್ತಿದ್ದರೆ ಅನವಶ್ಯಕವಾಗಿ ಜನರು ಗಾಬರಿಯಾಗಿ ಆತಂಕಪಡುತ್ತಾರೆಂಬ ಕಾರಣಕ್ಕೆ ನಿಯಮಗಳನ್ನು ಜಾರಿ ಮಾಡುತ್ತಿಲ್ಲ. ಆದರೆ ಮಾರ್ಗಸೂಚಿಗಳು ಪ್ರಸ್ತುತ ಜಾರಿಯಲ್ಲಿವೆ ಎಂದರು.

ಈಗಾಗಲೇ ಅಧಿಕಾರಿಗಳು, ವೈದ್ಯರು, ಸಿಬ್ಬಂದಿಗಳಿಗೆ ಕೋವಿಡ್ ಪರಿಸ್ಥಿತಿ ಎದುರಿಸಲು ಆಸ್ಪತ್ರೆಗಳಲ್ಲಿ ಸಿದ್ಧತೆ ಮಾಡಿಕೊಳ್ಳಬೇಕು. 3ನೇ ಅಲೆಯಲ್ಲಿ ಉಂಟಾದ ಸಮಸ್ಯೆ ಮತ್ತೆ ಮರುಕಳಿಸದಂತೆ ತಯಾರಿ ಮಾಡಿಕೊಳ್ಳುವಂತೆ ಸೂಚಿಸಲಾಗಿದೆ. ಯಾವ ಸಂದರ್ಭದಲ್ಲಾದರೂ ಬರಲಿ, 4ನೇ ಅಲೆ ಎದುರಿಸಲು ಸಜ್ಜಾಗಿರುವಂತೆ ನಿರ್ದೇಶನ ನೀಡಲಾಗಿದೆ ಎಂದರು. ಕೋವಿಡ್ ಕೇರ್ ಸೆಂಟರ್ ಜಿಲ್ಲಾ ಕೋವಿಡ್ ಆಸ್ಪತ್ರೆಯಲ್ಲಿ ಸರ್ವ ಸೌಲಭ್ಯ ಸಿದ್ಧವಿರುವುದರಿಂದ ಸೋಂಕಿತರಿಗೆ ಚಿಕಿತ್ಸೆ ನೀಡಲು ಯಾವ ಸಂದರ್ಭದಲ್ಲಾದರೂ ಜಿಲ್ಲಾಡಳಿತ ಸಜ್ಜುಗೊಂಡಿದೆ ಎಂದು ಡಾ.ಬಗಾದಿ ಗೌತಮ್ ನುಡಿದರು.

ಪಿಎಸ್‌ಐ ನೇಮಕಾತಿ ಪರೀಕ್ಷೆಯಲ್ಲಿ ಅಕ್ರಮ: ಕಾಂಗ್ರೆಸ್ ಶಾಸಕನ ಗನ್‌ಮ್ಯಾನ್ ಬಂಧನ

ಬೆಂಗಳೂರು: 545 ಪೊಲೀಸ್ ಸಬ್‌ಇನ್ಸ್‌ಪೆಕ್ಟರ್‌ಗಳ ನೇಮಕಾತಿ ಪರೀಕ್ಷೆಯಲ್ಲಿ ನಡೆದಿರುವ ಅಕ್ರಮಗಳ ಕುರಿತು ತನಿಖೆ ನಡೆಸುತ್ತಿರುವ ಅಪರಾಧ ತನಿಖಾ ವಿಭಾಗದ ಪೊಲೀಸರು ಮಹತ್ವದ ಬೆಳವಣಿಗೆಯೊಂದರಲ್ಲಿ ಕಾಂಗ್ರೆಸ್ ಶಾಸಕರೊಬ್ಬರ ಗನ್‌ಮ್ಯಾನ್‌ನನ್ನು ಬಂಧಿಸಿದ್ದಾರೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಮಾಹಿತಿ ನೀಡಿದ್ದಾರೆ.

ಸಿಐಡಿ ಪೊಲೀಸರು ಪ್ರಕರಣದ ತನಿಖೆಯನ್ನು ಚುರುಕುಗೊಳಿಸಿದ್ದು, ಅಕ್ರಮದಲ್ಲಿ ಭಾಗವಹಿಸಿದ್ದ ಎಲ್ಲಾ ತಪ್ಪಿತಸ್ಥರನ್ನು ಬಂಧಿಸಿ, ಕಾನೂನಿನ ಕ್ರಮಕ್ಕೆ ಒಳಪಡಿಸಲಾಗುವುದು ಎಂದು ಹೇಳಿದ್ದಾರೆ. ಪ್ರಾಮಾಣಿಕವಾಗಿ ಪರೀಕ್ಷೆ ಬರೆದರೂ ಹುದ್ದೆಯಿಂದ ವಂಚಿತರಾದ ಅಭ್ಯರ್ಥಿಗಳಿಗೆ ನ್ಯಾಯ ಒದಗಿಸಲು ಸಿಐಡಿ ತನಿಖೆಗೆ ಆದೇಶಿಸಲಾಗಿದೆ. ತನಿಖೆಯು ನಿಷ್ಪಕ್ಷಪಾತವಾಗಿ ನಡೆಯುತ್ತಿದೆ ಎಂದರು.

ಹುಣಸೂರು ಬಳಿಯ ಅಪಘಾತದಲ್ಲಿ ಸತ್ತವರ ಸಂಖ್ಯೆ 7ಕ್ಕೆ

ಹುಣಸೂರು,ಏ.21(ಕೆಕೆ)–ಹುಣಸೂರು ಬಳಿ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಸಾವನ್ನಪ್ಪಿದವರ ಸಂಖ್ಯೆ ಏಳಕ್ಕೇರಿದೆ.

ಬುಧವಾರ ಮಧ್ಯಾಹ್ನ ಬೊಲೆರೊ ವಾಹನ ಹುಣಸೂರು ಬಳಿಯ ಅರಸು ಕಲ್ಲಹಳ್ಳಿ ಬಳಿ ಮರಕ್ಕೆ ಡಿಕ್ಕಿ ಹೊಡೆದ ಪರಿಣಾಮ ಆರು ಮಂದಿ ಸಾವನ್ನಪ್ಪಿ ಮೂವರು ಗಾಯಗೊಂಡಿದ್ದರು. ಮೈಸೂರಿನ ಕೆ.ಆರ್.ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಪಾಲಿಬೆಟ್ಟದ ನಿವಾಸಿ ಫಿಲಿಪ್ (65) ಅವರು ಚಿಕಿತ್ಸೆ ಫಲಕಾರಿಯಾಗದೆ ಗುರುವಾರ ಮುಂಜಾನೆ ಸಾವನ್ನಪ್ಪಿದರು ಎಂದು ಪೊಲೀಸರು ತಿಳಿಸಿದ್ದಾರೆ.

ತೀವ್ರವಾಗಿ ಗಾಯಗೊಂಡಿರುವ ಕೀರ್ತನಾ ಮತ್ತು ಏಂಜೆಲ್ ಅವರುಗಳು ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಚೇತರಿಸಿಕೊಳ್ಳುತ್ತಿದ್ದಾರೆ. ಘಟನೆ ಕುರಿತು ಹುಣಸೂರು ಗ್ರಾಮಾಂತರ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ತನಿಖೆ ನಡೆಸುತ್ತಿದ್ದಾರೆ.

ಅಪಘಾತದಲ್ಲಿ ಸಾವನ್ನಪ್ಪಿದ ಐದು ಮಂದಿಯ ಅಂತ್ಯಕ್ರಿಯೆಯನ್ನು ಪಾಲಿಬೆಟ್ಟದಲ್ಲಿ ಹಿಂದೂ ಸಂಪ್ರದಾಯದಂತೆ ಸಾಮೂಹಿಕವಾಗಿ ನೆರವೇರಿಸಲಾಯಿತು. ಫಿಲಿಪ್ ಅವರ ಅಂತ್ಯಕ್ರಿಯೆ ಕ್ರಿಶ್ಚಿಯನ್ ಸಂಪ್ರದಾಯದಂತೆ ಮಾಡಲಾಯಿತು ಎನ್ನಲಾಗಿದೆ. ಮತ್ತೊಬ್ಬ ಮೃತರ ಪುತ್ರ ವಿದೇಶದಲ್ಲಿದ್ದು, ಅವರು ಶುಕ್ರವಾರ ಪಾಲಿಬೆಟ್ಟಕ್ಕೆ ಆಗಮಿಸಿದ ನಂತರ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಮೂಲಗಳು ತಿಳಿಸಿವೆ.

ದೇವೇಗೌಡರಿಗೆ ವಯಸ್ಸಾಗಿರಬಹುದು, ಆದರೆ ತಲೆ ಮಾತ್ರ 30 ವರ್ಷದ ಹುಡುಗನಂತೆ



ಹಾಸನ, ಏ.21– ಬಿಜೆಪಿ, ಕಾಂಗ್ರೆಸ್ ಎಷ್ಟೇ ಕುಣಿದಾಡಿದ್ರೂ ಮುಂದೆ ಜೆಡಿಎಸ್ ಅಧಿಕಾರ ಮಾಡುತ್ತೆ ಎಂದು ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ ಹೇಳಿದರು. ಹಾಸನದಲ್ಲಿ ನಡೆದ ಜನತಾ ಜಲಧಾರೆ ಸಮಾವೇಶದಲ್ಲಿ ಮಾತನಾಡಿದ ಅವರು, ನಿಖಿಲ್, ಸೂರಜ್ ಜೆಡಿಎಸ್ ಸ್ವತ್ತಲ್ಲ, ರಾಜ್ಯದ ಸ್ವತ್ತು. ಹಳೇ ಭೂಕೈಲಾಸವನ್ನು ಹೊಸ ಪ್ರಿಂಟ್ ಹಾಕಿಕೊಂಡು ಹೊರಟಿದ್ದೇವೆ. ಹಾಸನ ಜಿಲ್ಲೆಯ ಬಗ್ಗೆ ನಾನು 1967 ರಿಂದ ನೋಡಿದ್ದೇನೆ. ಹಾಸನ ಜಿಲ್ಲೆ ರಾಜ್ಯಕ್ಕೆ ಹೋರಾಟ ಮಾಡುವ ಗಂಡಸರನ್ನು ಹುಟ್ಟಿಸಿರುವ ಜಿಲ್ಲೆ. ಬಿಜೆಪಿ, ಕಾಂಗ್ರೆಸ್ ಎಷ್ಟೇ ಕುಣಿದಾಡಿದ್ರೂ ಮುಂದೆ ಜೆಡಿಎಸ್ ಅಧಿಕಾರ ಮಾಡುತ್ತೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಇದೇ ವೇಳೆ ಮಾತನಾಡಿದ ಅವರು, ವಾಜಪೇಯಿ ಒಳ್ಳೆಯವರು. ಆರ್‌ಎಸ್‌ಎಸ್‌ನಲ್ಲೂ ಒಳ್ಳೆಯವರಿದ್ದಾರೆ. ನಾನೂ ಕೂಡ ಕೆಲ ಬಿಜೆಪಿ ಅವರ ಜೊತೆ ಒಡನಾಟ ಇಟ್ಕೊಂಡಿದ್ದೆ. ಅಂದಿನ ಬಿಜೆಪಿ ನಾಯಕರ ಗುಣ ಇಂದು ಇದ್ಯಾ. ಕೆ.ಎಸ್.ಈಶ್ವರಪ್ಪ ಮನೆಯಲ್ಲಿ ದುಡ್ಡು ಎಣಿಸಲು ಮಷಿನ್ ಅನ್ನೇ ಇಟ್ಟುಕೊಂಡಿದ್ದಾರೆ. 40% ತೆಗೆದುಕೊಂಡು ಸಂತೋಷ್ ಸಾವಿಗೆ ಕಾರಣರಾದರು. ಅವನ ಮನೆಗೆ ಹಿಂದೂ ಮುಖಂಡ ಮುತಾಲಿಕ್ ಹೋಗಿದ್ದಾರೆ. ಮಾಜಿ ಪ್ರಧಾನಿ ದೇವೇಗೌಡರಿಗೆ ವಯಸ್ಸಾಗಿರಬಹುದು. ಆದರೆ ತಲೆ ಮಾತ್ರ 30 ವರ್ಷದ ಹುಡುಗನಂತೆ ಯೋಚಿಸುತ್ತೆ ಎಂದು ಪ್ರಶಂಸಿಸಿದರು.

ಮಾಧ್ಯಮ ಸ್ನೇಹಿತರೆ, ನೀವು ಬಳ್ಳಿ ನಾವು ಕಾಯಿ. ನಮ್ಮನ್ನು ರಕ್ಷಣೆ ಮಾಡಿ. ದೇಶದಲ್ಲಿ ಎಲ್ಲ ವಸ್ತುಗಳ ಬೆಲೆ ಏರಿಕೆಯಾಗಿದೆ. ಮಾಜಿ ಸಿಎಂ ಸಿದ್ದರಾಮಯ್ಯ ಬಿಜೆಪಿಯ ಬಿ ಟೀಂ ಎಂದಿದ್ದಾರೆ. ನಿಮ್ಮನ್ನು ಬಾದಾಮಿಗೆ ಕರೆದುಕೊಂಡು ಹೋಗಿದ್ಯಾರು. ಮೈಸೂರಲ್ಲಿ 300 ಓಟಿಂದ ಗೆಲ್ಲಿಸಿದ್ಯಾರು. ಹಾಸನದಲ್ಲಿ ಕಾಂಗ್ರೆಸ್‌ನವರು ಬಿಜೆಪಿಗೆ ವೋಟು ಹಾಕಿದ್ದಕ್ಕೆ ಗೆದ್ದರು. ಈಗ ಹೇಳಿ ಬಿ ಟೀಂ ಯಾರು? ಮಾಜಿ ಸಿಎಂ ಕುಮಾರಸ್ವಾಮಿಗೆ ಪ್ರಶ್ನೆ ಮಾಡಿದ ಹಾಗೆ ನನಗೆ ಮಾಡಬೇಡಿ ಎಂದು ತಿರುಗೇಟು ಕೊಟ್ಟರು. ನಾನು ಚರಿತ್ರೆ ಬರೆದವನು. ಎಲ್ಲವನ್ನೂ ಬಿಚ್ಚಿಡುತ್ತೇನೆ. ನಾನು ಕೇವಲ ಮುಸ್ಲಿಂರ ನಾಯಕನಲ್ಲ. ನಾನು ಈ ರಾಜ್ಯದ ಜನರ ದಾಸ. ನಾನು ಜೋಳಿಗೆ ಹಾಕಿಕೊಂಡು ಹೊರಟಿದ್ದೇನೆ. ನಾವು ಭಿಕ್ಷೆ ಕೇಳುತ್ತಿದ್ದೇವೆ, ಜನ ನಮಗೆ ಭಿಕ್ಷೆ ನೀಡುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಶಿವಲಿಂಗೇಗೌಡ, ರಾಮಸ್ವಾಮಿ ಬಂದಿಲ್ಲ ಎಂದು ಕೇಳಿದ್ರು. ಆದರೆ ಅವರು ಬಂದಿಲ್ಲ, ಆದ್ರೆ ಎಲ್ಲಿ ಹೋಗ್ತಾರೆ ನೋಡೋಣ. ಹಳೇ ಮೈಸೂರು ಭಾಗಕ್ಕೆ ಈಗಾಗಲೇ ಬೇಲಿ ಹಾಕಿದ್ದೇವೆ. ಮುಂದೆ ತೋರಿಸುತ್ತೇವೆ, ಸಾಬ್ರು ಚಿತ್ರ ಹೇಗೆ ತೋರಿಸ್ತಾರೆ ನೋಡಿವ್ರಂತೆ ಎಂದು ಮಾತನಾಡಿದರು.

ಪ್ರೊ.ನಂಜುಂಡಸ್ವಾಮಿ ನನ್ನ ರಾಜಕೀಯ ಗುರು



ಬೆಂಗಳೂರು: ನಾನು ಪ್ರೊ.ನಂಜುಂಡಸ್ವಾಮಿ ಅವರ ಪ್ರಭಾವದಿಂದ ರಾಜಕಾರಣಕ್ಕೆ ಬಂದೆ. ನನಗೆ ಅವರೇ ರಾಜಕೀಯ ಗುರುಗಳು ಎಂದು ವಿಪಕ್ಷ ನಾಯಕ ಸಿದ್ದರಾಮಯ್ಯ ಹೇಳಿದ್ದಾರೆ.

ನಗರದ ಗಾಂಧಿ ಭವನದಲ್ಲಿ ಬಾರುಕೋಲು ಪುಸ್ತಕ ಬಿಡುಗಡೆಗೊಳಿಸಿ ಮಾತನಾಡುತ್ತ, ಪ್ರೊ. ನಂಜುಂಡಸ್ವಾಮಿ ಪರಿಚಯ ಆದ ಬಳಿಕ ನಮಗೆ ರಾಜಕೀಯ ನಂಟು ಬೆಳೆಯಿತು. ರಾಜಕೀಯದಲ್ಲಿ ನಾನು ಬೆಳವಣಿಗೆ ಕಾಣಲು ನಂಜುಂಡಸ್ವಾಮಿ ಕಾರಣ. ಅಪ್ಪಟ ಸಮಾಜವಾದಿಯಾಗಿದ್ದ ಅವರ ಒಡನಾಟದಿಂದ ರಾಜಕೀಯದ ಬಗ್ಗೆ ಅರಿತೆ ಎಂದರು. 1983ರಲ್ಲಿ ಚುನಾವಣೆಗೆ ನಿಲ್ಲಬೇಕು ಎಂದು ಒತ್ತಾಯ ಮಾಡಿದ್ವಿ ಇಲ್ಲ ಚುನಾವಣೆಗೆ ನಿಲ್ಲಬಾರದು ಎಂದು ಹೇಳಿದ್ರು. ನಾವು ಮುಂದೂವರೆದಿದ್ದಕ್ಕೆ ನಮ್ಮನ್ನ ರೈತ ಸಂಘದಿಂದ ಉಚ್ಚಾಟನೆ ಮಾಡಿದ್ದರು. ಅಲ್ಲದೇ ಅವರು ಬೇರೆಯವರ ಅಭಿಪ್ರಾಯಕ್ಕೆ ಮನ್ನಣೆ ಕೊಡ್ತಿರಲಿಲ್ಲ. ನಮ್ಮ ಜೊತೆ ಪ್ರಪಂಚದ ರಾಜಕೀಯದ ಬಗ್ಗೆ ಮಾತನಾಡುತ್ತಿದ್ದರು ಎಂದು ಹಳೇ ರಾಜಕೀಯದ ದಿನಗಳನ್ನು ಮೆಲುಕು ಹಾಕಿದರು.

ನಕ್ಕರೆ ಅದೇ ಸ್ವರ್ಗ

ರೋಗಿ : "ನಿಜ ಹೇಳಿ ಡಾಕ್ಟ್ರೆ, ನಾನು ಬದುಕುತ್ತೇನಾ...?"
ಡಾಕ್ಟರ್ : "ನೂರಕ್ಕೆ ನೂರರಷ್ಟು ಬದುಕುತ್ತೀರಿ. ಏಕೆಂದರೆ, ಈ ಆಪರೇಷನ್ ಮಾಡಿಸಿಕೊಂಡವರಲ್ಲಿ ಹತ್ತರಲ್ಲಿ ಒಂಬತ್ತು ಜನ ಸಾಯುತ್ತಾರೆ. ಮತ್ತೆ ನಾನು ಆಪರೇಷನ್ ಮಾಡಿದ ಒಂಬತ್ತು ಜನರು ಈಗಾಗಲೇ ಸತ್ತಿದ್ದಾರೆ. ನೀವು ಹತ್ತನೆಯವರು.''

ಮೈಸೂರು ಮಿತ್ರ

ಶುಕ್ರವಾರ, 22 ಏಪ್ರಿಲ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ M.A.

ಅಮೃತವಾಹಿನಿ


ಒಬ್ಬನು ಎಲ್ಲಾ ವಿಷಯಗಳ ಮೇಲೆ ಮಾತನಾಡುವ ಹವ್ಯಾಸಕ್ಕೆ ಬಿದ್ದರೆ ಕೊನೆಗೆ ಅವನ ಮಾತುಗಳಿಗೆ ಅರ್ಥವೇ ಇಲ್ಲವಾಗುತ್ತದೆ. –ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಊರನ್ನೇ ಬಿಟ್ಟವನಿಗೆ ನೀರಿನ ಹಂಗೇನು

ನಿಮ್ಮ ಪತ್ರಗಳು

ಹಣವೂ ವ್ಯರ್ಥ; ಪ್ರಾಣಕ್ಕೂ ಕಂಟಕ



ಮಾನ್ಯರೆ,

ಮೈಸೂರು ನಗರದ ಪಾರಂಪರಿಕ ಕಟ್ಟಡಗಳೆಂದೇ ಬಿಂಬಿಸಲಾಗುತ್ತಿರುವ ದೇವರಾಜ ಮಾರುಕಟ್ಟೆ ಹಾಗೂ ಲ್ಯಾನ್ಸ್‌ಡೌನ್ ಕಟ್ಟಡಗಳ ಪುನಶ್ಚೇತನಗೊಳಿಸಿ, ಅವುಗಳನ್ನು ಸಂರಕ್ಷಿಸಬೇಕು ಎಂದು ಮೈಸೂರು ರಾಜವಂಶದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ನೇತೃತ್ವದಲ್ಲಿ ಪಾರಂಪರಿಕ ಸಂರಕ್ಷಕರೆಂದು ಹೇಳಿಕೊಳ್ಳುವವರು ಹಾಗೂ ಈ ಎರಡೂ ಕಟ್ಟಡಗಳ ಫಲಾನುಭವಿಗಳು ಪ್ರತಿಭಟನೆ ನಡೆಸಿದ್ದು, ಮಾಧ್ಯಮಗಳಲ್ಲಿ ವರದಿ ಆಗಿದೆ.

ನಮ್ಮ ಪ್ರಶ್ನೆ ಇಷ್ಟೆ, ಈ ಕಟ್ಟಡಗಳ ಪುನಶ್ಚೇತನಗೊಳಿಸಿ, ಅವುಗಳನ್ನು ಸ್ಮಾರಕಗಳನ್ನಾಗಿ ಮಾಡುವುದಾದರೆ ನಮ್ಮ ಅಭ್ಯಂತರವಿಲ್ಲ. ಆದರೆ ಅವುಗಳನ್ನು ಜನಬಳಕೆಗೆ ಮತ್ತೆ ಮುಕ್ತ ಮಾಡುವುದಾದರೆ ಒಂದು ವೇಳೆ ಏನಾದರೂ ಮತ್ತೆ ದುರಂತ ಸಂಭವಿಸಿದರೆ ಸಾರ್ವಜನಿಕರ ಪ್ರಾಣಕ್ಕೆ ಸಂಬಂಧಿಸಿದ ಅಧಿಕಾರಿ ವರ್ಗ ಖಾತರಿ ನೀಡಬೇಕು. ಮಾರುಕಟ್ಟೆಗೆ ಬರುವ ಜನರ ಪ್ರಾಣಕ್ಕೆ ಖಾತರಿ ಬೇಕು. ಹಾಗೆಯೇ ಒಂದಲ್ಲ ಒಂದು ಕೆಲಸ ಕಾರ್ಯಕ್ಕೆ ಲ್ಯಾನ್ಸ್‌ಡೌನ್ ಕಟ್ಟಡಕ್ಕೆ ಬರುವಂತಹ ಜನರ ಸುರಕ್ಷತೆಯೂ ಮುಖ್ಯವಾಗುತ್ತದೆ. ಹಾಗಾಗಿ ಅವರ ಪ್ರಾಣಕ್ಕೂ ರಕ್ಷಣೆ, ಅವರ ಕುಟುಂಬಕ್ಕೆ ಭದ್ರತೆ ನೀಡುವುದು ಅವಶ್ಯವಾಗಿದೆ. ಈಗಾಗಲೇ ಈ ಕಟ್ಟಡಗಳು ಸಂಪೂರ್ಣ ಶಿಥಿಲಗೊಂಡಿದ್ದು, ಒಂದೆಡೆ ರಿಪೇರಿ ನಡೆದರೆ ಮತ್ತೊಂದೆಡೆ ಕುಸಿಯುವ ಹಂತದಲ್ಲಿವೆ. ಇಂತಹ ಕಟ್ಟಡಗಳನ್ನು ಉಳಿಸಿಕೊಳ್ಳುವ ಸಾಹಸಕ್ಕೆ ಮತ್ತೆ ಕೈಹಾಕುವುದು ಯಾವ ಕಾರಣಕ್ಕೆ ಎಂಬುದು ಅರ್ಥವಾಗದ ಪ್ರಶ್ನೆಯೇ ಆಗಿದೆ.

– ನಾಗೇಂದ್ರ, ವಿದ್ಯಾರಣ್ಯಪುರಂ, ಮೈಸೂರು.

ಹೆಚ್ಚುತ್ತಿರುವ ಸೈಬರ್ ವಂಚನೆ

ಮಾನ್ಯರೇ,

ಇತ್ತೀಚೆಗೆ ದೇಶದಲ್ಲಿ ಹಾಗೂ ನಮ್ಮ ರಾಜ್ಯದಲ್ಲೂ ಸೈಬರ್ ವಂಚನೆಗಳು ಹೆಚ್ಚುತ್ತಿವೆ. ಕೆಲವು ಕಿಡಿಗೇಡಿಗಳು ಸಾಮಾಜಿಕ ಜಾಲತಾಣಗಳ ಮೂಲಕ ಸ್ನೇಹದ ಹೆಸರಿನಲ್ಲಿ ಯುವಕ ಯುವತಿಯರಿಗೆ ಬಲೆ ಬೀಸಿ, ಅವರ ಖಾಸಗಿ ಮಾಹಿತಿ ಮತ್ತು ಚಿತ್ರಗಳನ್ನು ಚಾಣಾಕ್ಷತನದಿಂದ ಪಡೆದುಕೊಂಡು ಆನಂತರ ಅವರಿಗೆ ಮಾನಹಾನಿ ಮಾಡುವುದಾಗಿ ಬೆದರಿಸಿ ಅವರಿಂದ ಹಣ ವಸೂಲಿಗೆ ಮುಂದಾಗುತ್ತಿದ್ದಾರೆ. ಇದರಿಂದ ನೊಂದ ಎಷ್ಟೋ ಯುವಜನತೆ ತಮ್ಮ ಹಣ ಹಾಗೂ ಪ್ರಾಣವನ್ನು ಕಳೆದುಕೊಂಡ ಉದಾಹರಣೆಗಳಿವೆ. ಯುವಜನರಲ್ಲಿ ಇನ್ನಾದರೂ ಈ ಕುರಿತು ಅರಿವು ಮೂಡಬೇಕು. ಇಂತಹ ಘಟನೆಗಳು ನಡೆದಾಗ ಸೈಬರ್ ಕ್ರೈಮ್ ಪೊಲೀಸರಿಗೆ ದೂರು ನೀಡಬೇಕು. ಸೈಬರ್ ಕ್ರೈಮ್ ಪೊಲೀಸರು ಇಂತಹ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿ ಸೈಬರ್ ವಂಚಕರನ್ನು ಪತ್ತೆ ಹಚ್ಚಿ ಶಿಕ್ಷೆಗೆ ಗುರಿಪಡಿಸಿದರೆ ಮಾತ್ರ ಇಂತಹ ವಂಚನೆ ಪ್ರಕರಣಗಳು ತಡೆಯಲು ಸಾಧ್ಯ

–ವಿಕ್ರಮ ಅಯ್ಯಂಗಾರ್, ಅಧ್ಯಕ್ಷರು, ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ಮೈಸೂರು

ಜವಾಬ್ದಾರಿ ವಹಿಸಿ, ಕೊರೊನಾ ನಿಯಂತ್ರಿಸಿ

ಮಾನ್ಯರೆ,

ದೇಶದಲ್ಲಿ ವಕ್ಕರಿಸಿದ ಮಹಾಮಾರಿ ಕೊರೊನಾ ಸೋಂಕು ಆರ್ಥಿಕವಾಗಿ ದೇಶವನ್ನೇ ಅಲುಗಾಡಿಸಿ ಸಂಕಷ್ಟಕ್ಕೀಡು ಮಾಡಿತು. ಸೋಂಕಿನಿಂದಾಗಿ ಬದುಕಿ ಬಾಳಬೇಕಾಗಿದ್ದ ಸಾಕಷ್ಟು ಸ್ನೇಹಿತರು, ಬಂಧು ಬಳಗವನ್ನು ಕಳೆದುಕೊಳ್ಳುವಂತಾಯಿತು. ಈ ಸೋಂಕಿನ ಭಯದಿಂದಾಗಿ ವಿದ್ಯಾರ್ಥಿಗಳು ಶಾಲಾ–ಕಾಲೇಜು ತರಗತಿಗಳಿಂದ ವಂಚಿತರಾದರು. ಹೇಗೋ ಸೋಂಕಿನಿಂದ ಮುಕ್ತರಾಗುತ್ತಿದ್ದೇವೆ ಎಂದು ನಿಟ್ಟುಸಿರು ಬಿಡುತ್ತಿರುವ ಹೊತ್ತಿನಲ್ಲೇ ಮತ್ತೆ ದೇಶದಲ್ಲಿ ಮಹಾಮಾರಿ ಕೊರೊನಾ ವೈರಸ್ ಆರ್ಭಟ ಕಡಿಮೆಯಾಗಿಲ್ಲ.

ಪ್ರತಿನಿತ್ಯ ಸೋಂಕಿತರ ಸಂಖ್ಯೆ ಏರಿಕೆಯಾಗುತ್ತಲೇ ಇದ್ದು, ಮಾಸ್ಕ್ ಧರಿಸದೇ ಹೊರಗೆ ಓಡಾಡುವುದು ಅತ್ಯಂತ ಅಪಾಯಕಾರಿಯಾಗಿದೆ. ಹಾಗೆಂದು ಕೊರೊನಾ ಸೋಂಕಿಗೆ ಹೆದರಿ ದಿನನಿತ್ಯದ ಚಟುವಟಿಕೆಗಳನ್ನು ನಡೆಸದೆ ಸುಮ್ಮನೆ ಕೂರುವುದೂ ಕೂಡ ಅಪಾಯಕಾರಿಯೇ ಆಗಿದ್ದು, ಅಗತ್ಯ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವುದು ಅತ್ಯಗತ್ಯವಾಗಿದೆ. ಕೊರೊನಾ ಹರಡದಂತೆ ನಮ್ಮನ್ನು ನಾವು ಕಾಪಾಡಿಕೊಳ್ಳಲು ಸರ್ಕಾರದ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವ ಮೂಲಕ ರೋಗ ತಡೆಗಟ್ಟಲು ಮುಂದಾಗೋಣ.

–ಚಂದ್ರಕಾಂತ್.ಆರ್ ಮಹಾರಾಜ ಕಾಲೇಜು, ಮೈಸೂರು

ಕೆಲವರಿಂದಷ್ಟೇ ಸಮಾಜದಲ್ಲಿ ಅಶಾಂತಿ


ಮಾನ್ಯರೆ,

ಇತ್ತೀಚಿನ ದಿನಗಳಲ್ಲಿ ಪ್ರತಿನಿತ್ಯ ಕ್ಷುಲ್ಲಕ ವಿಚಾರಗಳಿಗೆ ಒಂದಲ್ಲ ಒಂದು ವಿವಾದ ಸೃಷ್ಟಿಯಾಗುತ್ತಿದೆ. ಇದರ ಮೂಲ ಹುಡುಕಿದರೆ ಕೆಲವು ವ್ಯಕ್ತಿಗಳು ಇಲ್ಲವೇ ಒಂದು ಸಂಘಟನೆ. ಅದರ ಹೊರತಾಗಿ ಜನರಲ್ಲ, ಜನ ಸಮೂಹವಲ್ಲ, ಜನಸಾಮಾನ್ಯರು ಅಲ್ಲ. ಎಲ್ಲರೂ ನೆಮ್ಮದಿ ಜೀವನ ಬಯಸುವವರೇ ಆಗಿದ್ದಾರೆ. ಆದರೆ ಕೆಲವರ ಕುಚೋದ್ಯ, ಚಿತಾವಣೆಯಿಂದ ಸಮಾಜದಲ್ಲಿ ವೈಷಮ್ಯ, ಕಲಹ, ವಿವಾದಗಳು ಉಂಟಾಗುತ್ತಿದೆ. ಅದಕ್ಕೆ 'ರಾಜಕೀಯ' ತುಪ್ಪ ಸುರಿದು ಕೆಲವರು ಸ್ವಾರ್ಥ ಸಾಧನೆಗೆ ಮುಂದಾಗುತ್ತಿದ್ದಾರೆ.

ಹಾಗಾಗಿ ಜನ ಎಚ್ಚೆತ್ತು, ರಾಜಕಾರಣಿಗಳಿಂದ ಅಂತರ ಕಾಯ್ದುಕೊಂಡು, ನಾಗರಿಕ ಸಮಸ್ಯೆಗಷ್ಟೇ ಅವರನ್ನು ಅವಲಂಬಿಸಿ, ಅವರ ಅನುಸರಿಸಿದರೆ ಸಾಕು. ಎಲ್ಲಾ ವಿಚಾರದಲ್ಲೂ ಅವರನ್ನು ಅನುಸರಿಸುವುದು ತಪ್ಪು. ಹಾಗೆ ನಾವು ಅವರ ಅನುಯಾಯಿಗಳಾದರೆ ಅವರ ಸ್ವಾರ್ಥ ಸಾಧನೆಗೆ ನಾವು ಬಲಿಪಶುವಾಗಬೇಕಾಗುತ್ತದೆ. ಈ ವಿಷಯವನ್ನು ಎಲ್ಲಾ ಜಾತಿ, ಜನಾಂಗ, ಧರ್ಮದ ಜನರು ಅರ್ಥ ಮಾಡಿಕೊಂಡರೆ ಸಾಕು.

– ರಮೇಶ್, ಗೋಕುಲಂ, ಮೈಸೂರು.

ಇಂದು ವಿಶ್ವ ಭೂಮಿ ದಿನ



ಭೂಮಿ ಕೇವಲ "ನಮ್ಮ ಭೂಮಿ" ಅಷ್ಟೇ ಅಲ್ಲ, ನಮಗಿಂತಲೂ ಹಿಂದೆ ಕೋಟ್ಯಾಂತರ ವರ್ಷಗಳಷ್ಟು ಕಾಲ ಜೀವಿಸಿದ ಎಲ್ಲಾ ಜೀವರಾಶಿಗಳಿಗೂ ಈ ಭೂಮಿ ಸೇರಿದ್ದು, ಮುಂದೆಯೂ ಕೋಟ್ಯಾಂತರ ವರ್ಷಗಳ ಕಾಲ ಸಕಲ ಜೀವರಾಶಿಯೂ, ಹಾಗೆಯೇ ನಮ್ಮ ಮಾನವ ಪೀಳಿಗೆಯೂ ಇಲ್ಲಿ ನೆಮ್ಮದಿಯಾಗಿ ವಾಸಿಸಬೇಕು. ಈ ಭೂಮಿ ಎಲ್ಲರಿಗೂ ಸೇರಿದ್ದು, ಬರೀ ಮನುಷ್ಯನ ವಾಸಸ್ಥಳವಲ್ಲ, ಜೀವರಾಶಿಯಾದಿ, ಕ್ರಿಮಿ ಕೀಟಗಳಿಗೂ ಹಕ್ಕಿದೆ. ಭೂಮಿ ಇರುವುದು ಬಗೆಯಲು ಮತ್ತು ಕಟ್ಟಡಗಳ ನಿರ್ಮಾಣಕ್ಕೆ ಎಂಬ ತೀರ್ಮಾನದೊಂದಿಗೆ ಮಾನವ ಭೂಮಿಯ ಮೇಲೆ ನಡೆಸಿದ ದೌರ್ಜನ್ಯದಿಂದ ನಾವಿಂದು ಅನುಭವಿಸುತ್ತಿರುವ ಅವಘಡಗಳೇ ಸಾಕ್ಷಿ. ಭೂಮಿಯ ಮೇಲಿನ ಮತ್ತು ಅವಳ ಗರ್ಭದಲ್ಲಿರುವ ಪ್ರತಿ ವಸ್ತುವೂ ಪ್ರಕೃತಿಯ ಸಮತೋಲನ ಮಾತ್ರವಲ್ಲ ಜೀವ ಸಂಕುಲದ ಆರೋಗ್ಯಕ್ಕೂ ಪೂರಕವಾಗಿದೆ. ಕೇವಲ 150 ವರ್ಷಗಳಿಂದಾದ ವೈದ್ಯಕೀಯ ಕ್ರಾಂತಿ, ಕೃಷಿ ಕ್ರಾಂತಿ, ಸಂಪರ್ಕ ಕ್ರಾಂತಿ, ಡಿಜಿಟಲ್ ಕ್ರಾಂತಿ ಹೀಗೆ ಹತ್ತು ಹಲವಾರು ಮನುಷ್ಯನ ಆಧುನಿಕ ಕ್ರಾಂತಿಗಳಿಂದ ಭೂಮಿಯ ಎಲ್ಲಾ ಸೂತ್ರಗಳು ಶಿಥಿಲವಾದವು. ಈ ಭೂಮಿಯಲ್ಲಿ ಯಾವುದೋ ಒಂದು ಜೀವಿ ತಾನೇ ಅತಿಮುಖ್ಯ ಎಂದುಕೊಂಡು ತೀರಾ ಅತಿರೇಕದಿಂದ ವರ್ತಿಸಿದರೆ ಅಂಥ ಜೀವಿಯನ್ನು ನಿಯಂತ್ರಿಸಲು ನಾನಾ ಸೂತ್ರಗಳು ಈ ಭೂಮಿಯ ಒಡಲಲ್ಲಿದೆ ಎಂಬುದಕ್ಕೆ ನಾನಾ ನಿದರ್ಶನಗಳಿಂದ ನಾವಾಗಲೇ ಅನುಭವಿಸಿಯಾಗಿದೆ. ನಾವು ನಮ್ಮ ಉಸಿರಾಟಕ್ಕೆ ಈ ಭೂಮಿಯನ್ನು ನಂಬಿರುವಾಗ ಮತ್ತೆ ಅವಳ ಕೊರಳು ಹಿಂಡಿದರೆ, ಭೂಮಿಯೇ ತಿರುಗಿ ಬಿದ್ದರೆ ನಮ್ಮೆಲ್ಲರ ಉಸಿರೂ ನಿಲ್ಲುತ್ತದೆ. ಕಣ್ಣಿಗೆ ಕಾಣದ ಯಕಶ್ಚಿತ್ ಕೊರೊನಾ ವೈರಸ್ಸಿನಂತಹ ಹಲವಾರು ವೈರಾಣುಗಳು ಮನುಷ್ಯರಿಗೂ, ದೇಗುಲಗಳಿಗೂ ಕೆಲಸ ಕಾರ್ಯಗಳಿಗೂ ದಿಗ್ಬಂಧನ ಹಾಕಿ ಮನೆಯಲ್ಲಿಯೇ ಕೂರಿಸಿದ್ದನ್ನು ನಾವೆಂದೂ ಮರೆಯುವಂತಿಲ್ಲ! ಶ್ವಾಸಕೋಶಕ್ಕೆ ಯಂತ್ರಗಳ ಮೂಲಕ ಆಮ್ಲಜನಕ ತುಂಬಿ ಕೊರೊನಾ ಕಾಲದಲ್ಲಿ ಜೀವ ಉಳಿಸಿಕೊಂಡ ಹುಲುಮಾನವರು ನಾವು, ಈಗ ಇದೇ ಭೂಮಿಗೇ ಕೃತಕ ಶ್ವಾಸಕೋಶಗಳನ್ನು ಜೋಡಿಸುವ ಹೊಸ ಯುಗಕ್ಕೆ ಪಾದಾರ್ಪಣೆ ಮಾಡಬೇಕಾದೀತು ಜೋಕೆ!

"Invest In Our Planet" "ಭೂಮಿಯಲ್ಲಿ ವಿನಿಯೋಗಿಸೋಣ"

ಈ ಬಾರಿಯ ವಿಶ್ವ ಭೂಮಿ ದಿನದ ಘೋಷಣೆ !

ನಾವಿಂದು ಪ್ರಕೃತಿಗೆ ಪೂರಕವಾದ ಅಭಿವೃದ್ಧಿಗೆ ಒತ್ತು ನೀಡಲೇಬೇಕಾದ ಅವಶ್ಯಕತೆಯಿದೆ. ಪರಿಸರ ಸ್ನೇಹಿ, ಸಮೃದ್ಧಿ, ಸುಸ್ಥಿರ ಅಭಿವೃದ್ಧಿ, ರಾಜಕೀಯ ನೀತಿಗಳು, ಕೈಗಾರೀಕರಣ, ಔದ್ಯಮೀಕರಣ ಮುಂತಾದವುಗಳ ಬಗ್ಗೆ ಚಿಂತನೆ, ಹೊಸ ಆವಿಷ್ಕಾರಗಳ ಬಗ್ಗೆ ಚಿಂತನೆ, ಹೊಸ ಆವಿಷ್ಕಾರಗಳನ್ನು ಮಾಡಲೇಬೇಕಾದ ಕಾಲಘಟ್ಟದಲ್ಲಿ ನಾವಿಂದು ನಿಂತಿದ್ದೇವೆ. ಮುಂದಿನ ನಮ್ಮ ಮಾನವ ಪೀಳಿಗೆಗಾಗಿ ಬ್ರಹ್ಮಾಂಡದ ಉಳಿವಿಗಾಗಿ ಸಕಲ ಜಲ ಜೀವ ಕೀಟ ಜೀವ ಸಂಕುಲಕ್ಕಾಗಿ, ಪ್ರತಿಯೊಂದು ಸಸ್ಯ, ಮರಗಿಡಗಳ ಪ್ರಬೇಧಗಳ ಉಳಿವಿಗಾಗಿ ಸುಸ್ಥಿರ ಪೃಥ್ವಿಗಾಗಿ ವರ್ಷಕ್ಕೊಮ್ಮೆ ವಿವಿಧ ಕಾರ್ಯಕ್ರಮಗಳ ಆಚರಿಸುವ ಬದಲು, ವೈಯಕ್ತಿಕ ಮಟ್ಟದಲ್ಲಿ ನಾವೆಲ್ಲರೂ ರೂಢಿಸಿಕೊಳ್ಳಬಹುದಾದ ಸಣ್ಣಪುಟ್ಟ ಬದಲಾವಣೆಗಳು ಮುಖ್ಯ ಅಲ್ಲವೇ? "pollution & waste" ಮುಂತಾದ ತ್ಯಾಜ್ಯಗಳ ಪರಿಸರ ಸ್ನೇಹಿ ಬಳಕೆಯ ಅಳಿವು ಈ ಭೂಮಿಯ ಮಾಲಿನ್ಯಕ್ಕೆ ಕಾರಣವಾದ ಅಸಂಪ್ರದಾಯಿಕ ಕೃಷಿ ಪದ್ಧತಿಯ ದುಷ್ಪರಿಣಾಮಗಳು ಜನರನ್ನು ಕಾಡುತ್ತಿರುವ ಹೊಸ ಹೊಸ ''Auto Immune'' ರೋಗಗಳು, ಕ್ಯಾನ್ಸರ್ ನಂತಹ ತೊಂದರೆಗಳು, ಎಲ್ಲದರ ಬಗ್ಗೆಯೂ ಮತ್ತೆ ಮತ್ತೆ ಆತ್ಮಾವಲೋಕನ ಮಾಡಿಕೊಳ್ಳಲೇ ಬೇಕಾದ ಸಮಯ ಇದಾಗಿದೆ !

ಪ್ರಕೃತಿ, ಪುರುಷ, ಭೂಮಿ ತಾಯಿಯೇ ದೇವರು ಎಂಬ ಸೂಕ್ಷ್ಮತೆಯ ಅರಿವಿದ್ದ ಸನಾತನ ಧರ್ಮದ ಭಾರತೀಯರು ಪ್ರಕೃತಿಯ ಆರಾಧನೆ ನಮ್ಮ ಸಸ್ಯ, ಜಲ, ಜೀವ ಸಂಕುಲವನ್ನೇ ನಮ್ಮ ಇಷ್ಟ ದೇವತೆಯರ ಪ್ರತೀಕದಂತೆಯೇ ಅವರ ವಾಹನಗಳಂತೆಯೇ ಪ್ರತಿ ಸಸ್ಯವೂ ಒಂದೊಂದು ಔಷಧಿಯೇ "ವನಸ್ಪತಯೇ ನಮಃ" ಎಂದು ಪೂಜಿಸುತ್ತಾ ಈ ಪ್ರಕೃತಿಯ ಋತುಮಾನಗಳ ಬದಲಾವಣೆಗಳಿಗೆ ಅನುಸಾರವಾಗಿ ಹಬ್ಬ ಹರಿದಿನಗಳನ್ನು ಆಚರಿಸುತ್ತಾ, ನಮ್ಮ ಈ ವಿಶಿಷ್ಟ ಪರಂಪರೆಯ ಮೂಲಕವೇ ಸಮತೋಲನ ಕಾಯ್ದುಕೊಳ್ಳುತ್ತಿದ್ದ, ಅಗಸ್ತ್ಯರೇ ಮುಂತಾದ ಸಪ್ತ ಋಷಿಗಳ, ದೇವದೇವತೆಯರ ಪರಂಪರೆಯುಳ್ಳ ಭಾರತೀಯರು ಮತ್ತೆ ಆತ್ಮಾವಲೋಕನ ಮಾಡಿಕೊಳ್ಳಲೇ ಬೇಕಾದ ಈ "ಭೂಮಿ ತಾಯಿಯ ಋಣ"ದ ಬಗ್ಗೆ ಚಿಂತಿಸಲೇ ಬೇಕಾದ ಸಮಯವಲ್ಲವೇ?



ಡಾ. ಸುಧಾ. ಎಂ.ಎನ್.
ಮೈಸೂರು. PH: 9448071933
e-mail: drsudhamn@yahoo.com

ಗುರುತೇಜ್ ಬಹದ್ದೂರ್‌ಗೆ ಕೆಂಪು ಕೋಟೆಯಲ್ಲಿ ಪ್ರಧಾನಿ ಮೋದಿ ನಮನ

ಧರ್ಮದ ಹೆಸರಲ್ಲಿ ದಬ್ಬಾಳಿಕೆ ನಡೆಸಿದರೂ ನಮ್ಮ ನಂಬಿಕೆ ನಾಶಪಡಿಸಲಾಗದು

ನವದೆಹಲಿ, ಏ.21–'ಧರ್ಮದ ಹೆಸರಿನಲ್ಲಿ ಯಾರೇ ದಬ್ಬಾಳಿಕೆ ನಡೆಸಿದರೂ ನಮ್ಮ ನಂಬಿಕೆಯನ್ನು ನಾಶ ಮಾಡಲಾಗಲಿಲ್ಲ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಇಂದಿಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಕೆಂಪುಕೋಟೆಯಲ್ಲಿ ಗುರುತೇಜ್ ಬಹದ್ದೂರ್ ಜನ್ಮ ದಿನಾಚರಣೆ ಅಂಗವಾಗಿ ಏರ್ಪಡಿಸಲಾಗಿದ್ದ ಸಮಾರಂಭದಲ್ಲಿ ನಾಣ್ಯ ಮತ್ತು ಅಂಚೆ ಚೀಟಿಯನ್ನು ಬಿಡುಗಡೆ ಮಾಡಿ ಅವರು ಮಾತನಾಡುತ್ತಿದ್ದರು.

ಸಮುದಾಯಗಳ ನಡುವೆ ಶಾಂತಿ ಕಾಪಾಡುವ ವಿಚಾರ ಕುರಿತು ಮಾತನಾಡಿದ ಮೋದಿ, ಧರ್ಮದ ಹೆಸರಿನಲ್ಲಿ ದಬ್ಬಾಳಿಕೆ ನಡೆಸುತ್ತಿದ್ದ ಕಾಲವೊಂದಿತ್ತು ಎಂದು ಔರಂಗಜೇಬನನ್ನು ಉಲ್ಲೇಖಿಸಿದರು. ಔರಂಗಜೇಬ್ ಹಲವರನ್ನು ಕೊಂದಿರಬಹುದು. ಆದರೆ ನಮ್ಮ ನಂಬಿಕೆಯನ್ನು ನಾಶಪಡಿಸಲು ಆಗಲಿಲ್ಲ ಎಂದರು.

ಕೆಂಪುಕೋಟೆಯು ಹಲವು ವೈವಿಧ್ಯತೆಗಳಿಗೆ ಸಾಕ್ಷಿಯಾಗಿದೆ. ಈ ದೇಶದ ಸ್ವಾತಂತ್ರ್ಯಕ್ಕಾಗಿ ಅನೇಕ ಮಹನೀಯರು ಪ್ರಾಣ ತ್ಯಾಗ ಮಾಡಿದ್ದಾರೆ. ಅದರಂತೆ ದೇಶ ಕಟ್ಟಲು ಗುರುತೇಜ್ ಬಹದ್ದೂರ್ ತಮ್ಮ ಪ್ರಾಣ



ವನ್ನು ಮುಡುಪಾಗಿಟ್ಟಿದ್ದರು ಎಂದ ಅವರು, ದೇಶವು ಇಂದು ಗುರುಗಳ ಆದರ್ಶಗಳೊಂದಿಗೆ ಮುನ್ನಡೆಯುತ್ತಿದೆ. ಭಾರತ ಭೂಮಿ 'ಶ್ರೇಷ್ಠ ಪರಂಪರೆ ಮತ್ತು ಸಂಪ್ರದಾಯದ ನಾಡು' ಎಂದರು. ದೇಶವು ಗುರುತೇಜ್ ಬಹದ್ದೂರ್ ಅವರ ಹುತಾತ್ಮತೆಯನ್ನು ಕಂಡಿದೆ ಇಂದು ಗುರುಗಳ ಸ್ಮರಣೆ ಮಾಡುವ ಅವಕಾಶವನ್ನು ಪಡೆದುಕೊಂಡಿದೆ ಎಂದು ಗುರುತೇಜ್ ಅವರ ಗುಣಗಾನ ಮಾಡಿದರಲ್ಲದೆ, ಈ ಕಾರ್ಯಕ್ರಮದಲ್ಲಿ ಭಾಗಿಯಾಗಿರುವುದು ನನ್ನ ಸೌಭಾಗ್ಯ ಎಂದರು.

ಸೂರ್ಯಾಸ್ತದ ನಂತರ ಇದುವರೆಗೂ ಯಾವ ಪ್ರಧಾನಿಯೂ ಕೆಂಪುಕೋಟೆಯ ಮೇಲೆ ಭಾಷಣ ಮಾಡಿರಲಿಲ್ಲ. ಆದರೆ ನರೇಂದ್ರ ಮೋದಿಯವರು ಸೂರ್ಯಾಸ್ತದ ನಂತರ ಭಾಷಣ ಮಾಡಿದ ಮೊಟ್ಟ ಮೊದಲ ಪ್ರಧಾನಿ ಎನಿಸಿದರು.

ಸಂಸದ ಪ್ರತಾಪ್ ಸಿಂಹ, ಶಾಸಕ ನಾಗೇಂದ್ರರಿಂದ ಶುದ್ಧ ಕುಡಿಯುವ ನೀರಿನ ಘಟಕ ಉದ್ಘಾಟನೆ; ವಿವಿಧ ಕಾಮಗಾರಿಗೆ ಚಾಲನೆ



ಮೈಸೂರು, ಏ.21(ಎಸ್‌ಬಿಡಿ)– ಮೈಸೂರಿನ ಚಾಮರಾಜ ಕ್ಷೇತ್ರದಲ್ಲಿ ಸಂಸದ ಪ್ರತಾಪ್ ಸಿಂಹ ಹಾಗೂ ಶಾಸಕ ಎಲ್. ನಾಗೇಂದ್ರ ಗುರುವಾರ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಿದರು.

ಸಂಸದರ ಅನುದಾನ ಹಾಗೂ ಇಂಡಿಯನ್ ಆಯಿಲ್ ಕಾರ್ಪೋರೇಷನ್ ಸಂಸ್ಥೆಯ ಸಿಎಸ್‌ಆರ್ ನಿಧಿಯಿಂದ ಕೈಗೊಳ್ಳಲಾಗಿರುವ ವಿವಿಧ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಿದರಲ್ಲದೆ, ಹಲವು ನಿರ್ಮಾಣಗಳನ್ನು ಉದ್ಘಾಟಿಸಿದರು. ಕಾರ್ಪೊರೇಟರ್‌ಗಳಾದ ಪಾಲಿಕೆ ಪ್ರಮೀಳಾ ಭರತ್, ಪ್ರೇಮ ಶಂಕರೇಗೌಡ, ಎಂ.ಯು.ಸುಬ್ಬಯ್ಯ, ರಂಗಸ್ವಾಮಿ ಸೇರಿದಂತೆ ಅನೇಕ ಮುಖಂಡರು, ಅಧಿಕಾರಿಗಳು, ಗುತ್ತಿಗೆದಾರರು ಉಪಸ್ಥಿತರಿದ್ದರು.

ಕಾಮಗಾರಿ ವಿವರ: ನಗರದ 2ನೇ ವಾರ್ಡ್ ಮಂಚೇಗೌಡನ ಕೊಪ್ಪಲು, ಕಟ್ಟೆ ಹೊಸೂರು ಬಳಿ 10 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ಶುದ್ಧ ಕುಡಿಯುವ ನೀರಿನ ಘಟಕ ಉದ್ಘಾಟಿಸಲಾಯಿತು. 20ನೇ ವಾರ್ಡ್ ವಿಜಯನಗರ 2ನೇ ಹಂತ ಕಾಲಭೈರವೇಶ್ವರ ದೇವಸ್ಥಾನದ ಬಳಿಯ ಉದ್ಯಾನದಲ್ಲಿ 6.50 ಲಕ್ಷ ರೂ. ಅನುದಾನದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಹಾಗೂ ನಗರ ಪಾಲಿಕೆ 14ನೇ ಹಣಕಾಸು ಅನುದಾನ 5 ರೂ. ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಲಾಯಿತು.

23ನೇ ವಾರ್ಡ್ ವ್ಯಾಪ್ತಿಯ ಮಹಾರಾಣಿ ಸರ್ಕಾರಿ ಪದವಿ ಪೂರ್ವ ಕಾಲೇಜು ಮುಂಭಾಗ ಹಾಗೂ 25ನೇ ವಾರ್ಡ್‌ನ ಸಯ್ಯಾಜಿ ರಾವ್ ರಸ್ತೆಯಲ್ಲಿ ತಲಾ 6.50 ಲಕ್ಷ ರೂ.ಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕ, ಇಡಿ ಆಸ್ಪತ್ರೆ ಹಿಂಭಾಗದ ಪುತ್ಥಳಿ ಪಾರ್ಕ್ ಲಯನ್ಸ್ ಭವನ ರಸ್ತೆ (ಫೌಂಟೈನ್ ರಸ್ತೆ) 1ನೇ ಕ್ರಾಸ್‌ನಲ್ಲಿ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಯಿತು.

ಇಂದು ತಳೂರಲ್ಲಿ 'ರೈತರೊಂದಿಗೆ ಒಂದು ದಿನ'

ರೈತರಲ್ಲಿ ಆತ್ಮವಿಶ್ವಾಸ ಮೂಡಿಸುವ ಉದ್ದೇಶ: ಕೃಷಿ ಸಚಿವ ಬಿ.ಸಿ.ಪಾಟೀಲ್

ಮೈಸೂರು, ಏ.21(ಎಂಕೆ)– ಕೃಷಿ ಕ್ಷೇತ್ರದಲ್ಲಿ ಕರ್ನಾಟಕ ರಾಜ್ಯವನ್ನು 'ಲೈಟ್ ಹೌಸ್ ಪಾರ್ಟ್ನರ್' ಎಂದು ಕೇಂದ್ರ ಸರ್ಕಾರ ಗುರ್ತಿಸಿದ್ದು, ಇತರೆ ರಾಜ್ಯಗಳಿಗೆ ದಾರಿದೀಪವಾಗಿದೆ. ಕೃಷಿ ಇಲಾಖೆ ದೇಶಕ್ಕೆ ಅನ್ನ ನೀಡುವ ರೈತರಿಗೆ ಆತ್ಮವಿಶ್ವಾಸ ತುಂಬುವ ಕೆಲಸ ಮಾಡುತ್ತಿದೆ ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ್ ಹೇಳಿದರು.

ನಾಳೆ(ಏ.22)ರಂದು ಮೈಸೂರು ತಾಲೂಕಿನ ತಳೂರು ಗ್ರಾಮದಲ್ಲಿ ಏರ್ಪಡಿಸಿರುವ 'ರೈತರೊಂದಿಗೆ ಒಂದು ದಿನ' ಕಾರ್ಯಕ್ರಮದಲ್ಲಿ ಭಾಗವಹಿಸಲು ಗುರುವಾರ ಮೈಸೂರಿಗೆ ಆಗಮಿಸಿರುವ ಸಚಿವರು 'ಮೈಸೂರು ಮಿತ್ರ'ನೊಂದಿಗೆ ಕೃಷಿ ಕ್ಷೇತ್ರದಲ್ಲಾಗಿರುವ ಬದಲಾವಣೆ, ಹಮ್ಮಿಕೊಂಡಿರುವ ಕಾರ್ಯಕ್ರಮಗಳ ಕುರಿತು ಮಾಹಿತಿ ಹಂಚಿಕೊಂಡಿದ್ದಾರೆ.

ರೈತರ ಹೊಲಕ್ಕೆ ಸರ್ಕಾರವನ್ನು ತೆಗೆದುಕೊಂಡು ಹೋಗುವ ನಿಟ್ಟಿನಲ್ಲಿ ಏರ್ಪಡಿಸಿರುವ 'ರೈತರೊಂದಿಗೆ ಒಂದು ದಿನ' ಕಾರ್ಯಕ್ರಮಕ್ಕೆ ರೈತರಿಂದ ಅಪಾರ ಸ್ಪಂದನೆ ದೊರೆತಿದೆ. 2020ರ ನ.14ರಿಂದ ಪ್ರಾರಂಭಗೊಂಡು ಇಲ್ಲಿಯವರೆಗೆ 14 ಜಿಲ್ಲೆಗಳಲ್ಲಿ ಯಶಸ್ವಿ ಕಾರ್ಯಕ್ರಮ ನಡೆದಿದ್ದು, 15ನೇ ಕಾರ್ಯಕ್ರಮ ಮೈಸೂರು ಜಿಲ್ಲೆಯಲ್ಲಿ ನಡೆಯುತ್ತಿದೆ. ಒಂದು ದಿನ ರೈತರೊಂದಿಗಿದ್ದು, ಅವರ ಸಮಸ್ಯೆಗಳನ್ನು ಆಲಿಸುವುದು, ಯಾವ ರೀತಿಯ ಬೇಸಾಯ ಮಾಡುತ್ತಿದ್ದಾರೆ ಎಂಬುದನ್ನು ಅರಿತು ಅವರಿಗೆ ಪ್ರೋತ್ಸಾಹ ನೀಡುವುದಾಗಿದೆ ಮಂತ್ರಿಯೊಬ್ಬರು ರೈತರ ಜೊತೆಗಿದ್ದರೆ ಸರ್ಕಾರವೇ ನಮ್ಮೊಂದಿಗಿದೆ ಎಂಬ ಖುಷಿ, ಆತ್ಮವಿಶ್ವಾಸ ಅವರಲ್ಲಿ ಮೂಡುತ್ತದೆ. ಜೊತೆಗೆ ಯುವಕರನ್ನು ಕೃಷಿಯತ್ತ ಸೆಳೆಯಲು, ಕೃಷಿಯಲ್ಲಿ ತಂತ್ರಜ್ಞಾನ ಅಳವಡಿಕೆ ಮೂಲಕ ರೈತರ ಆದಾಯ ದ್ವಿಗುಣಗೊಳಿಸಿ ಅವರನ್ನು ಶಕ್ತಿಯುತರನ್ನಾಗಿ ಮಾಡುವುದಾಗಿದೆ ಎಂದು ತಿಳಿಸಿದರು.

ಲೈಟ್ ಹೌಸ್ ಪಾರ್ಟ್ನರ್: ಕೃಷಿ ಕ್ಷೇತ್ರದಲ್ಲಿ ರಾಜ್ಯವನ್ನು 'ಲೈಟ್ ಹೌಸ್ ಪಾರ್ಟ್ನರ್' ಎಂದು ಕೇಂದ್ರ ಸರ್ಕಾರ ಗುರ್ತಿಸಿದೆ. ಇತರೆ ರಾಜ್ಯಗಳಿಗೆ ಕರ್ನಾಟಕ ಮಾದರಿಯಾಗಿದೆ. ರಾಜ್ಯವು ಆಧಾರ್ ಜೋಡಣೆ ನಂ.1, ಬೆಳೆ ಸಮೀಕ್ಷೆಯಲ್ಲಿ ಟ್ರೇಡ್ ಸೆಂಟರ್ ಎಂದು ಗುರ್ತಿಸಿಕೊಂಡಿದೆ. ವಿಶ್ವವಿದ್ಯಾನಿಲಗಳಲ್ಲಿದ್ದ ಕೃಷಿ ಮೀಸಲಾತಿ (ರೈತರ ಮಕ್ಕಳಿಗೆ ಸೀಟು ಹಂಚಿಕೆ)ಯನ್ನು ಶೇ.40ರಿಂದ ಶೇ.50ಕ್ಕೆ ಹೆಚ್ಚಿಸಿದ್ದೇವೆ. ದೇಶದಲ್ಲೇ ಮೊದಲ ಬಾರಿಗೆ 'ರೈತ ವಿದ್ಯಾನಿಧಿ' ಯೋಜನೆ ಸ್ಥಾಪಿಸಿದ್ದು, 7 ಲಕ್ಷ ವಿದ್ಯಾರ್ಥಿಗಳು ನೋಂದಾವಣಿ ಮಾಡಿಕೊಂಡಿದ್ದಾರೆ. ಅದಕ್ಕಾಗಿ 165 ಕೋಟಿ ರೂ., ಬಿಡುಗಡೆ ಮಾಡಲಾಗಿದೆ ಎಂದರು.

ರೈತರಿಗೆ ಸಬ್ಸಿಡಿ ದರದಲ್ಲಿ ಡೀಸೆಲ್ ವಿತರಣೆ, ಕೃಷಿಕರನ್ನು ಉದ್ಯಮಿಗಳನ್ನಾಗಿ ರೂಪಿಸಲು ಯೋಜನೆ ರೂಪಿಸಿದ್ದು, ಎಫ್‌ಪಿಓ(ಫಾರ್ಮರ್ ಪ್ರೊಡ್ಯೂಸಿಂಗ್ ಆರ್ಗನೈಸ್)ಗಳಿಗೆ ಕೇಂದ್ರದಿಂದ ಶೇ.35 ರಷ್ಟು ಹಾಗೂ ರಾಜ್ಯದಿಂದ ಶೇ.15 ರಷ್ಟು ಸೇರಿ ಶೇ.50ರಷ್ಟು ಸಬ್ಸಿಡಿ ನೀಡಲಾಗುತ್ತಿದೆ. ಸ್ವಾತಂತ್ರ್ಯೋತ್ಸವ ಅಮೃತ ಮಹೋತ್ಸವದ ಅಂಗವಾಗಿ 75 ಹೆಚ್ಚುವರಿ ರೈತ ಉತ್ಪಾದಕ ಸಂಸ್ಥೆಗಳನ್ನು ಪ್ರಾರಂಭಿಸಿದ್ದೇವೆ.


ಫಾರ್ಮ್ ಬ್ಯಾಂಕಿಂಗ್ ಪ್ರಾರಂಭಿಸಿದ್ದು, ರೈತ ಸಂಪರ್ಕ ಕೇಂದ್ರದಲ್ಲಿ ಕೃಷಿಯಿಂದ 20 ಜನರ ಸಂಘ–ಸಂಸ್ಥೆಗಳಿಗೆ ಒಂದು ಟ್ರ್ಯಾಕ್ಟರ್ ಮತ್ತು ಇನ್ನಿತರೆ ಉಪಕರಣಗಳನ್ನು ನೀಡಲಾಗುವುದು. ಅದರಲ್ಲಿ ಸಂಘ–ಸಂಸ್ಥೆ 20 ಲಕ್ಷ ಹಾಕಿದರೆ ಇಲಾಖೆಯಿಂದ 8 ಲಕ್ಷ ರೂ. ಉಚಿತವಾಗಿ ನೀಡಲಾಗುವುದು. ಎಲ್ಲರೂ ಕೂಡ ಟ್ರ್ಯಾಕ್ಟರ್ ಕೊಂಡು ಕೊಳ್ಳಲು ಸಾಧ್ಯವಾಗುವುದಿಲ್ಲ. ಆದ್ದರಿಂದ 20 ಮಂದಿಗೆ ಒಂದು ಟ್ರ್ಯಾಕ್ಟರ್ ನೀಡಿದರೆ ಅನುಕೂಲವಾಗುತ್ತದೆ. ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯಲ್ಲಿ ಕೇಂದ್ರ ಸರ್ಕಾರದಿಂದ 6 ಸಾವಿರ, ರಾಜ್ಯ ಸರ್ಕಾರದಿಂದ 4 ಸಾವಿರ ಸೇರಿ ಒಟ್ಟು 10 ಸಾವಿರ ರೂ. ನೇರವಾಗಿ ರೈತರ ಖಾತೆಗೆ ಜಮಾ ಮಾಡಲಾಗುತ್ತಿದೆ ಎಂದು ವಿವರಿಸಿದರು.

ಡ್ರೋಣ್ ಬಳಕೆ: ಕೃಷಿಯಲ್ಲಿ ಡ್ರೋಣ್ ಬಳಕೆಗೆ ವಿಶ್ವವಿದ್ಯಾಲಯಗಳಲ್ಲಿ ಶೇ.12 ರಷ್ಟು ಹಾಗೂ ಎಫ್‌ಪಿಓಗಳಿಗೆ ಶೇ.75 ರಷ್ಟು ಸಬ್ಸಿಡಿಯಲ್ಲಿ ಸಾಲ ನೀಡಲಾಗುತ್ತಿದೆ. ನಿನ್ನೆ ನಡೆದ ಕಾರ್ಯಕ್ರಮವೊಂದರಲ್ಲಿ ರೈತರೊಬ್ಬರು ಡ್ರೋಣ್ ಮೂಲಕ ಒಂದು ಎಕರೆಗೆ ಔಷಧಿ ಸಿಂಪಡಿಸಲು 300 ರೂ. ಚಾರ್ಜ್ ಮಾಡಲಾಗುವುದು ಎಂದರು. ಅದೇ ಒಂದು ಎಕರೆಗೆ ಕೂಲಿಯವರನ್ನು ಕರೆದುಕೊಂಡು ಹೋದರೆ 1 ಸಾವಿರ ಖರ್ಚಾಗುತ್ತದೆ. ಕೇವಲ 10 ನಿಮಿಷದಲ್ಲಿ ಒಂದು ಎಕರೆ ಪ್ರದೇಶಕ್ಕೆ ಔಷಧಿ ಸಿಂಪಡಣೆ ಮಾಡುವ ಡ್ರೋಣ್‌ನಿಂದ ರೈತನಿಗೆ ಎಕರೆಗೆ 700 ರೂ. ಉಳಿತಾಯವಾಗುತ್ತದೆ. ರೈತರಿಗಾಗುವ ಉಳಿತಾಯವೇ ಅವರ ಆದಾಯ. ಆದ್ದರಿಂದ ಡ್ರೋಣ್ ಹಾಗೂ ಇತರೆ ಕೃಷಿ ಯಂತ್ರೋಪಕರಣಗಳ ಬಳಕೆ ಹೆಚ್ಚಾಗಬೇಕು ಎಂದು ತಿಳಿಸಿದರು.

ಜಾಗೃತ ದಳ: ರಾಜ್ಯದಲ್ಲಿ ಮೊದಲ ಬಾರಿಗೆ ರೈತರನ್ನು ವಂಚಿಸುವವರ ವಿರುದ್ಧ ಕ್ರಮಕೈಗೊಳಲಾಗುತ್ತಿದೆ. ನಕಲಿ ಬೀಜ, ಗೊಬ್ಬರ ಮಾರಾಟ ಮಾಡುತ್ತಿದ್ದವರ ವಿರುದ್ಧ ಸೂಕ್ತ ಕ್ರಮ ಕೈಗೊಂಡಿದ್ದು, ಇಲ್ಲಿಯವರೆಗೆ 145 ಲೈಸನ್ಸ್ ರದ್ದು ಹಾಗೂ 202 ಕೇಸ್ ದಾಖಲಿಸಿದ್ದೇವೆ. ಈ ಮೂಲಕ ಪೊಲೀಸರಂತೆ ರೈತರಿಗೆ ಮೋಸ ಮಾಡುವವರ ಪತ್ತೆ ಕಾರ್ಯ ನಡೆಯುತ್ತಿದೆ ಎಂದು ಹೇಳಿದರು.

ರಿವಾರ್ಡ್ ಯೋಜನೆ: ಜಲಾನಯನ ಅಭಿವೃದ್ಧಿ ಇಲಾಖೆಯ ರಿವಾರ್ಡ್ ಯೋಜನೆಗೆ ಕೇಂದ್ರ ಸರ್ಕಾರದಿಂದ 5 ವರ್ಷಗಳ ಅವಧಿಗೆ 600 ಕೋಟಿ ರೂ. ಬಂದಿದೆ. ಹಾಗೆಯೇ ನ್ಯೂ ಜನರೇಷನ್ ವಾಟರ್‌ಶೆಡ್ ಯೋಜನೆಗೆ 642 ಕೋಟಿ ರೂ. ಬಂದಿದ್ದು, ರಾಜ್ಯದಲ್ಲಿ 51 ತಾಲೂಕುಗಳನ್ನು ಆಯ್ಕೆ ಮಾಡಿದ್ದೇವೆ ಎಂದರು.

ಕೃಷಿ ಸಂಜೀವಿನಿ: ರಾಜ್ಯದ ಎಲ್ಲಾ ತಾಲೂಕು ರೈತ ಸಂಪರ್ಕ ಕೇಂದ್ರಕ್ಕೆ ಕೃಷಿ ಸಂಜೀವಿನಿ ಯೋಜನೆ ಮೂಲಕ ಲ್ಯಾಬ್ ವ್ಯವಸ್ಥೆಯುಳ್ಳ ವಾಹನಗಳನ್ನು ನೀಡಲು ಮುಂದಾಗಿದ್ದೇವೆ. ರೈತರ ಜಮೀನಿರುವ ಸ್ಥಳಕ್ಕೆ ಹೋಗಿ ಬೆಳೆಗಳು ಹಾಗೂ ಮಣ್ಣಿನ ಪರೀಕ್ಷೆ ಮಾಡಿ ಸ್ಥಳದಲ್ಲೇ ವರದಿ ನೀಡುವ ಯೋಜನೆ ಇದಾಗಿದೆ. ಇದಕ್ಕಾಗಿ 164 ವಾಹನಗಳ ಮಂಜೂರಾತಿಯಾಗಿದ್ದು, ಸದ್ಯದಲ್ಲಿಯೇ ನೂರು ವಾಹನಗಳನ್ನು ಬಿಡುಗಡೆ ಮಾಡಲಾಗುವುದು. ಹಾಗೆಯೇ ನಮ್ಮ ಅವಧಿಯಲ್ಲಿ ಮೂರು ಕೃಷಿ ಕಾಲೇಜುಗಳನ್ನು ನೀಡಿದ್ದೇವೆ ಎಂದು ತಿಳಿಸಿದರು.



ಉಗ್ರ ಕ್ರಮ ತೆಗೆದುಕೊಳ್ಳಬೇಕು....

ಪಿಎಸ್‌ಐ ಅಕ್ರಮ ನೇಮಕಾತಿ ಕುರಿತು ಪ್ರತಿಕ್ರಿಯಿಸಿದ ಸಚಿವರು, ನನಗೂ ಆಶ್ಚರ್ಯವಾಗಿದೆ. ಪೊಲೀಸ್ ಇಲಾಖೆಯಲ್ಲಿ ಇನ್‌ಫ್ಲೂಯೆನ್ಸ್ ನಡೆಯುವುದಿಲ್ಲ. ನಿಮ್ಮ ಬುದ್ಧಿಶಕ್ತಿಯೇ ಇನ್‌ಫ್ಲೂಯೆನ್ಸ್ ಎಂದು ನಾನೇ ಹೇಳುತ್ತಿದ್ದೆ. ಮೊದಲಿನಿಂದಲೂ ಮೆರಿಟ್ ಆಧಾರದ ಮೇಲೆಯೇ ನೇಮಕಾತಿ ನಡೆದುಕೊಂಡು ಬಂದಿದೆ. ರಾಜ್ಯದಲ್ಲಿ ಇದೇ ಮೊದಲ ಬಾರಿ ಪಿಎಸ್‌ಐ ಅಕ್ರಮ ನೇಮಕಾತಿ ಎಂದು ಕೇಳುತ್ತಿರುವುದು. ಅಕ್ರಮದಲ್ಲಿ ಭಾಗಿಯಾದವರಿಗೆ ಉಗ್ರವಾದ ಕ್ರಮ ವಹಿಸಬೇಕು. ಯಾಕೆಂದರೆ ಇನ್‌ಫ್ಲೂಯೆನ್ಸ್ ಎಂಬುದು ದುಡ್ಡಿದ್ದವರಿಗೆ ದೊಡ್ಡ ವಿಷಯವಲ್ಲ. ಆದ್ದರಿಂದ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗಬೇಕು.

– ಬಿ.ಸಿ.ಪಾಟೀಲ್, ಕೃಷಿ ಸಚಿವ

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ
ಶುಕ್ರವಾರ
22-4-2022

ಬೆಳ್ಳಿ ಬೆಳಕು

ಸತ್ಯಮೂರ್ತಿ ತೋಳಹುಣಸೆ

ಹರಳು ಮಾಫಿಯಾದ ಮೇಲೊಬ್ಬ ಮಾಯಾವಿ

ಮಲೆನಾಡಿನ ಪಶ್ಚಿಮಘಟ್ಟಗಳಲ್ಲಿ ನಡೆಯುತ್ತಿರುವ ಹರಳು ಮಾಫಿಯಾ ಇಟ್ಟುಕೊಂಡು ನಿರ್ಮಾಣವಾದ ಚಿತ್ರ ಮೇಲೊಬ್ಬ ಮಾಯಾವಿ. ನವೀನ್ ಕೃಷ್ಣ ನಿರ್ದೇಶನದ ಈ ಚಿತ್ರ ಏ.29ಕ್ಕೆ ಬಿಡುಗಡೆಯಾಗಲಿದೆ. ಅದಕ್ಕೂ ಮುನ್ನ ಚಿತ್ರದ ಟ್ರೈಲರ್ ಹಾಗೂ ವೀಡಿಯೋ ಸಾಂಗ್ ಬಿಡುಗಡೆ ಕಾರ್ಯಕ್ರಮ ರೇಣುಕಾಂಬ ಥಿಯೇಟರಿನಲ್ಲಿ ನೆರವೇರಿತು. ಶ್ರೀನಗರಕಿಟ್ಟಿ ಅತಿಥಿಯಾಗಿ ಭಾಗವಹಿಸಿ ಟ್ರೈಲರ್ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭ ಕೋರಿದರು.

ಈ ಚಿತ್ರದಲ್ಲಿ ಸಂಚಾರಿ ವಿಜಯ್ ಇರುವೆ ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ಅರಣ್ಯ ಪ್ರದೇಶವನ್ನೇ ಹೊದ್ದುಕೊಂಡಿರುವ ದಕ್ಷಿಣ ಕನ್ನಡ ಮತ್ತು ಕೊಡಗು ಗಡಿಭಾಗದ ಪುಷ್ಪಗಿರಿ ಅಭಯಾರಣ್ಯದಲ್ಲಿ ನಡೆಯುತ್ತಿರುವ ಹರಳು ದಂಧೆಯ ಕರಾಳಮುಖವನ್ನು ತಮ್ಮ ಪಾತ್ರದ ಮೂಲಕ ಬಿಚ್ಚಿಡಲಿದ್ದಾರೆ.

ಅನನ್ಯಶೆಟ್ಟಿ ಚಿತ್ರದ ನಾಯಕಿಯಾಗಿ ಕಾಣಿಸಿಕೊಂಡಿದ್ದು, ಚಕ್ರವರ್ತಿ ಚಂದ್ರಚೂಡ್ ಖಳನಟನಾಗಿ ಕಾಣಿಕೊಳ್ಳುತ್ತಿದ್ದಾರೆ. ಉಳಿದಂತೆ ಪವಿತ್ರಾ ಜಯರಾಮ್, ಕೃಷ್ಣಮೂರ್ತಿ ಕವತ್ತಾರ್, ಬೆನಕ ನಂಜಪ್ಪ, ಎಮ್.ಕೆ.ಮಠ, ನವೀನ್‌ಕುಮಾರ್, ಲಕ್ಷ್ಮಿ ಅರ್ಪಣ್, ಮುಖೇಶ್ ಹಾಗೂ ಡಾ.ಮನೋನ್ಮಣಿ ಹೀಗೆ ಸಾಕಷ್ಟು ರಂಗಭೂಮಿ ಪ್ರತಿಭೆಗಳು ಅಭಿನಯಿಸಿದ್ದಾರೆ,

ದಶಕಗಳಿಂದ ನಡೆಯುತ್ತಿರುವ ಹರಳು ಮಾಫಿಯಾದ ಹಿಂದಿರುವ ಪೈಶಾಚಿಕ ಮನಸ್ಥಿತಿಗಳು ಯಾವುವು..? ಈ ಹರಳು ದಂಧೆ ಪರಿಸರವನ್ನು ನಾಶಗೊಳಿಸುವುದರ ಜೊತೆಗೆ, ಇಡೀ ಮನುಕುಲವನ್ನೇ ಹೇಗೆ ವಿನಾಶದ ಅಂಚಿಗೆ ದೂಡಲಿದೆ ಎನ್ನುವ ಅನೇಕ ವಿಚಾರಗಳನ್ನು ನಿರ್ದೇಶಕರು ಈ ಚಿತ್ರದ ಮೂಲಕ ಹೇಳಹೊರಟಿದ್ದಾರೆ. ಸಂಚಾರಿ ವಿಜಯ್ ಪಾತ್ರದ ಬಗ್ಗೆ ಪ್ರೇಕ್ಷಕರಲ್ಲಿ ಸಾಕಷ್ಟು ಕುತೂಹಲವಿದೆ. ಅಕ್ರೊಮೊಟಾಪ್ಸಿಯಾದ ನ್ಯೂನತೆ ಮತ್ತು ಹಲವು ಸಾವು-ನೋವುಗಳಿಗೆ ಇಂದಿಗೂ ಸಾಕ್ಷಿಯಾಗಿರುವ ಮಾಫಿಯಾದ ವಿಭಿನ್ನ ಕಥಾಹಂದರ ಹೊಂದಿರುವ, ನೈಜ ಘಟನೆಗಳ ಕುರಿತಾದ ಚಿತ್ರ ಮೇಲೊಬ್ಬ ಮಾಯಾವಿ. ಈ ಚಿತ್ರವನ್ನು ಇತ್ತೀಚೆಗಷ್ಟೇ ವೀಕ್ಷಿಸಿದ ಸೆನ್ಸಾರ್ ಮಂಡಳಿ ಯಾವುದೇ ಕಟ್ ನೀಡದೆ ಎ ಪ್ರಮಾಣಪತ್ರ ನೀಡಿದೆ. ಬಿ.ನವೀನ್ ಕೃಷ್ಣ ನಿರ್ದೇಶನದ ಮೇಲೊಬ್ಬ ಮಾಯಾವಿ ಚಿತ್ರಕ್ಕೆ ಚಕ್ರವರ್ತಿ ಚಂದ್ರಚೂಡ್ ಚಿತ್ರಕಥೆ, ಸಂಭಾಷಣೆ ಹೆಣೆದಿದ್ದಾರೆ. ಶ್ರೀಕಟೀಲ್ ಸಿನಿಮಾಸ್ ಬ್ಯಾನರ್ ಅಡಿಯಲ್ಲಿ ಭರತ್‌ಕುಮಾರ್ ಮತ್ತು ತನ್ವಿ ಅಮಿನ್ ಅವರು ನಿರ್ಮಾಣ ಮಾಡಿದ್ದಾರೆ.





ಶೋಕಿವಾಲ ಚಿತ್ರದಲ್ಲಿ ಸಂಜನಾ ಆನಂದ್



ಶೋಕಿವಾಲನಿಗೆ ಸಾಥ್ ನೀಡಿದ ನಿರ್ದೇಶಕರು

ಅಜಯ್‌ರಾವ್ ನಾಯಕನಾಗಿ ನಟಿಸಿರುವ "ಶೋಕಿವಾಲ" ಚಿತ್ರದ ಹಾಡೊಂದರ ಬಿಡುಗಡೆ ಸಮಾರಂಭ ಇತ್ತೀಚೆಗೆ ನೆರವೇರಿತು.

ಈ ಹಾಡಿನ ವಿಶೇಷತೆ ಏನೆಂದರೆ ನಾಯಕ ಅಜಯ್‌ರಾವ್ ಅವರೊಂದಿಗೆ ಕನ್ನಡ ಚಿತ್ರರಂಗದ ಖ್ಯಾತ ನಿರ್ದೇಶಕರಾದ ರವಿ ಬಸ್ರೂರ್, ನಂದಕಿಶೋರ್, ಹರಿ ಸಂತೋಷ್, ಶಶಾಂಕ್, ವಿ.ನಾಗೇಂದ್ರ ಪ್ರಸಾದ್ ಹೆಜ್ಜೆ ಹಾಕಿದ್ದಾರೆ. ಈ ಹಾಡನ್ನು ಚೇತನ್ ಕುಮಾರ್ ಬರೆದಿದ್ದು, ಶಶಾಂಕ್ ಶೇಷಗಿರಿ ಹಾಡಿದ್ದಾರೆ. ಶ್ರೀಧರ್.ವಿ.ಸಂಭ್ರಮ್ ಸಂಗೀತ ಸಂಯೋಜಿಸಿದ್ದಾರೆ.

ಈ ಹಾಡಿನಲ್ಲಿ ನಟಿಸಿರುವ ನಿರ್ದೇಶಕರುಗಳೇ ಹಾಡನ್ನು ರಿಲೀಸ್ ಮಾಡಿದ್ದು ವಿಶೇಷವಾಗಿತ್ತು. ವಿ.ನಾಗೇಂದ್ರಪ್ರಸಾದ್, ನಂದಕಿಶೋರ್, ಹರಿ ಸಂತೋಷ್, ಚೇತನ್ ಕುಮಾರ್, ಮಹೇಶ್ ಕುಮಾರ್ ಹಾಡನ್ನು ಬಿಡುಗಡೆ ಮಾಡಿದರು. ಏ.29 ರಂದು ಶೋಕಿವಾಲ ಚಿತ್ರ ರಾಜ್ಯಾದ್ಯಂತ ಬಿಡುಗಡೆಯಾಗಲಿದೆ. ಕುಟುಂಬ ಸಮೇತ ಕುಳಿತು ನೋಡುವ ಸಿನಿಮಾ ಇದು ಎಂದು ನಿರ್ಮಾಪಕ ಚಂದ್ರಶೇಖರ್ ಹೇಳಿದರು.

ಜಾಕಿ ಅವರ ನಿರ್ದೇಶನದ ಈ ಚಿತ್ರಕ್ಕೆ ಶ್ರೀಧರ್ ವಿ. ಸಂಭ್ರಮ್ ಸಂಗೀತ ನೀಡಿದ್ದಾರೆ. ನವೀನ್ ಕುಮಾರ್ ಈ ಚಿತ್ರದ ಛಾಯಾಗ್ರಾಹಕರು. ಅಜಯ್ ರಾವ್ ಜೊತೆ ನಾಯಕಿಯಾಗಿ ಸಂಜನಾ ಆನಂದ್ ನಟಿಸಿದ್ದಾರೆ. ಶರತ್ ಲೋಹಿತಾಶ್ವ, ಅರುಣ ಬಾಲರಾಜ್, ತಬಲಾ ನಾಣಿ, ಪ್ರಮೋದ್ ಶೆಟ್ಟಿ, ಗಿರಿ, ನಾಗರಾಜ ಮೂರ್ತಿ ಮುಂತಾದವರು ಈ ಚಿತ್ರದ ತಾರಾಬಳಗದಲ್ಲಿದ್ದಾರೆ. ಕ್ರಿಸ್ಟಲ್ ಪಾರ್ಕ್ ಸಿನಿಮಾಸ್ ಲಾಂಛನದಲ್ಲಿ ಟಿ.ಆರ್.ಚಂದ್ರಶೇಖರ್ ಹಾಗೂ ಕಿಶೋರ್ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ.

ಬೆಲ್ಲದಬಚ್ಚು ಫಸ್ಟ್‌ಲುಕ್ ಬಿಡುಗಡೆ




ಸದಾ ಹೊಸಬರಿಗೆ ಪ್ರೋತ್ಸಾಹ ನೀಡುತ್ತ ಬಂದಿರುವ ಕ್ರೇಜಿಸ್ಟಾರ್ ಡಾ.ರವಿಚಂದ್ರನ್ ಈಗ ಬೆಲ್ದಚ್ಚು ಚಿತ್ರದ ನಾಯಕನ ಫಸ್ಟ್ ಲುಕ್‌ನ್ನು ಬಿಡುಗಡೆ ಮಾಡಿ ತಂಡಕ್ಕೆ ಶುಭ ಹಾರೈಸಿದ್ದಾರೆ. ಈ ಮೂಲಕ ಕನಸುಗಾರನ ಕೈಯಲ್ಲಿ ಬಿಡುಗಡೆ ಮಾಡಿ ಸಬೇಕೆಂಬ ಚಿತ್ರತಂಡದ ಆಸೆಯೂ ಫಲಿಸಿದೆ. ಈ ಹಿಂದೆ ರಾಕ್‌ಲೈನ್ ವೆಂಕಟೇಶ್ ಅವರು ಡಾ.ಅಂಬರೀಷ್ ಸ್ಮಾರಕದ ಬಳಿ ಶೀರ್ಷಿಕೆಯನ್ನು ಅನಾವರಣಗೊಳಿಸಿದ್ದರು. ರಾಗಿ ಮುದ್ದೆ ಸಿನಿಕಂಬೈನ್ಸ್ ಬ್ಯಾನರ್ ಅಡಿಯಲ್ಲಿ ಸಿದ್ಧವಾಗುತ್ತಿರುವ ಈ ಚಿತ್ರವನ್ನು ಹೆಚ್.ಎನ್.ಸ್ವಾಮಿ ನಿರ್ದೇಶನ ಮಾಡುತ್ತಿದ್ದಾರೆ. ನಿರ್ದೇಶಕನಾಗಿ ಗುರುತಿಸಿಕೊಂಡಿದ್ದ ನವಿಲುಗರಿ ನವೀನ್.ಪಿ.ಬಿ ಅವರು ಈ ಚಿತ್ರದ ನಾಯಕನಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ವಿನೋದ್ ಮೈಸೂರು ಸಹ ನಿರ್ಮಾಪಕರು.

ನಾಯಕಿ ಹಾಗೂ ಚಿತ್ರದ ಉಳಿದ ವಿವರಗಳು ಮುಂದಿನ ದಿನಗಳಲ್ಲಿ ಲಭ್ಯವಾಗಲಿದೆ. ಸಂಗೀತ ಮನುರಾಜ್, ಛಾಯಾಗ್ರಹಣ ಮಂಡ್ಯ ಗಿರೀಶ್, ಸಂಕಲನ ಪ್ರೇಮ್‌ರಾಜ್.ಕೆ.ಕೆ ಅವರದಾಗಿದೆ. ತೆಲುಗಿನಲ್ಲಿ ಲಕ್ಷೀಶಭಟ್, ತಮಿಳಿನಲ್ಲಿ ನಟ ಸತ್ಯಜಿತ್ ಹಾಗೂ ಮಲೆಯಾಳಂನಲ್ಲಿ ಪ್ರೇಂರಾಜ್ ಆಯಾ ಭಾಷೆಯ ಪೋಸ್ಟರ್‌ನ್ನು ಬಿಡುಗಡೆ ಮಾಡಿದ್ದಾರೆ. ಪ್ಯಾನ್ ಇಂಡಿಯಾ ಮಟ್ಟದಲ್ಲಿ ಸಿನಿಮಾ ಸಿದ್ಧಗೊಳ್ಳುತ್ತಿರುವುದು ವಿಶೇಷ. ಅತಿ ಶೀಘ್ರದಲ್ಲೇ ಬೆಂಗಳೂರಿನ ಬಂಡಿ ಮಹಾಕಾಳಿ ದೇವಾಲಯದಲ್ಲಿ ಮುಹೂರ್ತ ನಡೆಸಲು ತಂಡವು ಯೋಜನೆ ರೂಪಿಸಿಕೊಂಡಿದೆ.

ಸಿನಿಪದಬಂಧ-004

ಆಜ಼ಾದ್ ಜಿ. ಆಚಾರ್ಯ 6361429085



ಹೆಸರು ______

ವಿಳಾಸ ______

ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1. ಪೂರ್ಣಚಂದ್ರ ತೇಜಸ್ವಿಯವರ ಅಂಚೆ ಕಚೇರಿ 9
4. ನವ್ಯ ನಾಯರ್ ಮೇಲಧಿಕಾರಿಯಾದ ದರ್ಶನ್ 2
5. ರವಿಚಂದ್ರನ್ ಸಾವಿರಕ್ಕೆ ಒಬ್ಬ----- 4
6. ಸಿಪಾಯಿ ಚಿತ್ರದಲ್ಲಿ ರವಿಚಂದ್ರನ್ ಆಪ್ತಮಿತ್ರ 4
8. ವಿಷ್ಣು-ಅಂಬಿ-ಲಕ್ಷ್ಮಿ ನಟಿಸಿದ ಚಿತ್ರ 5
10. ಸೈನಿಕನಾಗಿ ಗಗನ ದಾರಿಯಲ್ಲಿ ಪ್ರೇಯಸಿ ಹುಡುಕಿದ ಅನಂತನಾಗ್ 5
13. ಪುನೀತ್ ದ್ವಿಪಾತ್ರದಲ್ಲಿ ನಟಿಸಿದ ಡಾ. ರಾಜ್ ಚಿತ್ರ ತಿರುಗಿದೆ 4
14. ರಾಮಾಚಾರಿಯಲ್ಲ ಮಾಟಗಾರ 4
15. ಮಂತ್ರಾಲಯವಾದ ಗೃಹ 2
16. ಇದು ಸ್ಟುಡಿಯೋ ಹೊರಗೆ ನಡೆದ ಶೂಟಿಂಗ್ 9

ಮೇಲಿನಿಂದ ಕೆಳಕ್ಕೆ

1. ಕಾಶಿನಾಥ್ ನಿರ್ದೇಶನದಲ್ಲಿ ಬಂದ ಗೊತ್ತಿಲ್ಲದವನು 5
2. ನಟ ಸಾಯಿಕುಮಾರ್ ಹೆಚ್ಚಾಗಿ ಮಿಂಚಿದ್ದು ಈ ಪಾತ್ರದಲ್ಲೇ 3
3. ರವಿಚಂದ್ರನ್ ನಟಿಸಿದ ಚಿತ್ರದಲ್ಲಿ ಅಮಲಾ ಗೆಜ್ಜೆ ಕಟ್ಟಿದ್ದು 5
5. ಕನ್ನಡ ನಾಡಿನ----- ಕನ್ನಡ ದೇವಿಯ ಪ್ರಭಾವಳಿ 4
7. 'ಮಾನ' ಚಿತ್ರವು ಈ ಅನಿಷ್ಟದ ಕುರಿತಾಗಿದೆ 2
9. ಜೋಗಿ ಪ್ರೇಮ್ ನಿರ್ದೇಶನದ ಪುಂಡಾಟಿಕೆ ಚಿತ್ರ 4
10. ವಾಹನದೊಂದಿಗೆ ಬಂದ ಅರ್ಜುನನ ಮಗ 5
11. ವಿಷ್ಣು-ದೇವರಾಜ್-ರೂಪಿಣಿ ನಟಿಸಿರುವ ಚಿತ್ರ 2
12. ಕ್ಯಾಮೆರಾಮನ್ ಕೆಲಸ 5
15. ರಾಮಕೃಷ್ಣ ಹೆಗಡೆ ಬಾರಿಸಿದ ಮೃದಂಗದ ಪೂರ್ವಾರ್ಧ 3

ಸಿನಿ ಪದಬಂಧ 003ರ ಸರಿ ಉತ್ತರ

ಅ	ನು	ರಾ	ಗ ಅ	ರ	ಳಿ	ತು		ತಾ	ರಾ
ಣ್ಣ				ನ್ನ			ಕೆ		ಮಾ
ವ್ರ		ಟಿ	ರಾ ಭ			ಗ್	ಜಿಂ	ಲೆಂ	ಚಾ
ಮ	ಯೂ	ರಾ		ಕ	ಲ್ಪ	ನಾ			ರಿ
ಕ್ಕ			ಶಂ	ಥಾ		ರ	ಚಿ	ತಾ	
ಳು			ಕ	ಸಂ		ಕ			ಹ
	ಅ	ಮ	ರ್	ಗ		ಶಂ			ಸಿಂ
ಸಾ			ಗು ಲಾ	ಮ			ಗಂ	ಧ	ದ
ಹು	ಡು	ಗ	ರು		ಗ	ರು	ಡ		ಳಿ
ಕಾ		ಜ		ಇ					ರ
ರ	ವ್ಯಾ		ಬಾ ನ	ಲ್ಲೆ	ಮ	ಧು	ಚಂ	ದ್ರ	ಕೆ

ವಿಜೇತರು: ಲತಾ ಎಂ.ಎನ್. ಕೋಂ. ಜನಾರ್ಧನ್ ಕೆ. #851, 7ನೇ ಮುಖ್ಯ ರಸ್ತೆ, ಇ ಅಂಡ್ ಎಫ್ ಬ್ಲಾಕ್, ರಾಮಕೃಷ್ಣ ನಗರ, ಮೈಸೂರು.

ದಾಂಪತ್ಯದ ಮಹತ್ವ ಸಾರುವ ರಾಜಿ



ಪೋಷಕ ನಟಿಯಾಗಿದ್ದ ಪ್ರೀತಿ ಎಸ್.ಬಾಬು ನಿರ್ಮಾಣ ಹಾಗೂ ನಿರ್ದೇಶನದ ಚಿತ್ರ ರಾಜಿ. ರಾಘವೇಂದ್ರ ರಾಜಕುಮಾರ್ ಹಾಗೂ ಪ್ರೀತಿ ಪ್ರಮುಖ ಪಾತ್ರಗಳಲ್ಲಿ ನಟಿಸಿರುವ ಈ ಚಿತ್ರದ ಹಾಡುಗಳ ಬಿಡುಗಡೆ ಇತ್ತೀಚೆಗೆ ನಡೆಯಿತು. ಶ್ರೀನಗರಕಿಟ್ಟಿ ಹಾಗೂ ವಿಜಯ ರಾಘವೇಂದ್ರ ಆಡಿಯೋ ರಿಲೀಸ್ ಮಾಡಿದರು. ಪ್ರೀತಿ ಅವರು ರಾಘವೇಂದ್ರ ರಾಜಕುಮಾರ್ ಮಡದಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

ಈ ಸಿನಿಮಾ ನನಗೆ ವಿಶೇಷ. ಏಕೆಂದರೆ, ಇದರ ಮುಹೂರ್ತ ಕಳೆದ ವರ್ಷ ಅ. 30ರಂದು ನಿಗದಿಯಾಗಿತ್ತು ಅಪ್ಪು ಚಿತ್ರಕ್ಕೆ ಕ್ಲ್ಯಾಪ್ ಮಾಡಲು ಬರಬೇಕಿತ್ತು ಆದರೆ ಹಿಂದಿನ ದಿನವೇ ಅಪ್ಪು ನಮ್ಮಿಂದ ದೂರವಾದ. ಆನಂತರ ಕೆಲವು ದಿನಗಳಾದ ಮೇಲೆ ಮುಹೂರ್ತ ನಡೆಯಿತು. ಅದೇ ಕಂಠೀರವ ಸ್ಟುಡಿಯೋದಲ್ಲಿ. ಅಪ್ಪು ಸಮಾಧಿ ಬಳಿ. ಈಗ ಕಾಕತಾಳೀಯವಾಗಿ ಇದೇ 29ರಂದು ಚಿತ್ರವೂ ಬಿಡುಗಡೆಯಾಗುತ್ತಿದೆ. ಗಂಡ-ಹೆಂಡತಿ ನಡುವಿನ ಸುಂದರ ಒಪ್ಪಂದವೇ ರಾಜಿ ಎಂದು ರಾಘಣ್ಣ ಹೇಳಿದರು.

25 ವರ್ಷಗಳಿಂದ ಪೋಷಕ ಕಲಾವಿದೆಯಾಗಿ ಚಿತ್ರರಂಗದಲ್ಲಿದ್ದೇನೆ. ಮೊದಲ ಬಾರಿಗೆ ನಿರ್ದೇಶಕಿಯಾಗಿದ್ದೇನೆ. ರಾಘಣ್ಣ ಬಳಿ ಕಥೆ ಹೇಳಲು ಭಯವಾಯಿತು. ನಂತರ ಅವರ ಮಾತಿನ ಶೈಲಿ ನೋಡಿ ಭಯ ದೂರವಾಯಿತು. ಅವರ ಮೇಲಿನ ಗೌರವ ಇಮ್ಮಡಿಯಾಯಿತು. ದಾಂಪತ್ಯದ ಮಹತ್ವ ಸಾರುವ ಕಥೆಯನ್ನು ಈ ಚಿತ್ರದ ಮೂಲಕ ಹೇಳಹೊರಟಿದ್ದೇವೆ. ಬಸವರಾಜು ಮೈಸೂರು ಅವರು ನಿರ್ಮಾಣದಲ್ಲಿ ಕೈಜೋಡಿಸಿದ್ದಾರೆ. 29ರಂದು ಚಿತ್ರವನ್ನು ರಾಜ್ಯಾದ್ಯಂತ ಬಿಡುಗಡೆ ಮಾಡುತ್ತಿದ್ದೇವೆ ಎಂದು ನಿರ್ದೇಶಕಿ, ನಟಿ ಪ್ರೀತಿ ಎಸ್. ಬಾಬು ತಿಳಿಸಿದರು.

ಈ ಚಿತ್ರದಲ್ಲಿ ಏಳು ಹಾಡುಗಳಿದ್ದು, ಡಾ॥ ಹೆಚ್.ಎಸ್. ವೆಂಕಟೇಶ್‌ಮೂರ್ತಿ ಸಾಹಿತ್ಯ ಬರೆದಿದ್ದಾರೆ ಎಂದು ಸಂಗೀತ ಸಂಯೋಜಕ ಉಪಾಸನ ಮೋಹನ್ ತಿಳಿಸಿದರು. ಚಿತ್ರ ನಿರ್ಮಾಣವಾದ ಬಗ್ಗೆ ಬಸವರಾಜ್ ಮೈಸೂರು ಹಾಗೂ ಚಿತ್ರದ ಮತ್ತೊಂದು ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿರುವ ಪ್ರತಾಪ್‌ಸಿಂಹ ಮಾತನಾಡಿದರು. ಅತಿಥಿಗಳಾಗಿ ಆಗಮಿಸಿದ್ದ ಶ್ರೀನಗರ ಕಿಟ್ಟಿ, ವಿಜಯ ರಾಘವೇಂದ್ರ, ಡಾ॥ವಿ.ನಾಗೇಂದ್ರ ಪ್ರಸಾದ, ಕೆಂಪಣ್ಣ ಚೆಟ್ಟಿ, ಮುನಿರಾಜು ರಾಮಯ್ಯ, ತಬಲಾ ನಾಣಿ, ಸಾಗರ್ ಪುರಾಣಿಕ್ ಮುಂತಾದ ಗಣ್ಯರು ಚಿತ್ರತಂಡಕ್ಕೆ ಶುಭ ಕೋರಿದರು.

ಸಹಾಯದ ಪ್ರಾಮುಖ್ಯತೆ ಹೇಳುವ ಹೆಲ್ಪ್



ಸಿನಿಮಾ ನಿರ್ದೇಶಕನಾಗಬೇಕು ಎಂದರೆ ಮೊದಲು ಕಿರುಚಿತ್ರಗಳನ್ನು ಮಾಡಿ ತನ್ನ ಪ್ರತಿಭೆ ಏನೆಂದು ತೋರಿಸಬೇಕು. ಬಂಡವಾಳ ಹಾಕುವ ನಿರ್ಮಾಪಕನಿಗೆ ಈತನ ಕೈಲಿ ಒಳ್ಳೆ ಸಿನಿಮಾ ಮೂಡಿಬರುತ್ತೆ ಎಂಬ ನಂಬಿಕೆ ಬರಬೇಕು, ಹಿಂದೆ ಫಸ್ಟ್ ರ‍್ಯಾಂಕ್ ರಾಜು ಕೂಡ ಅದೇ ರೀತಿ ಷಾರ್ಟ್ ಫಿಲಂ ಆಗಿತ್ತು. ಆದಿತ್ಯ ರಂಗಭೂಮಿ ಕಿರುಚಿತ್ರಗಳನ್ನು ಮಾಡಿದಂಥ ಬಹುಮುಖ ಪ್ರತಿಭೆ. ಈಗ ಸಾಮಾಜಿಕ ಸಂದೇಶ ಇಟ್ಟುಕೊಂಡು 'ಹೆಲ್ಪ್' ಎಂಬ ಕಿರುಚಿತ್ರ ನಿರ್ಮಾಣ ಮಾಡಿದ್ದಾರೆ. ಜೊತೆಗೆ ರಾಜು ಎಂಬ ಕೂಲಿ ಹುಡುಗನಾಗಿ ಕಾಣಿಸಿಕೊಂಡಿದ್ದಾರೆ.

ಇಂಗ್ಲೀಷ್ ಪ್ರಾಧ್ಯಾಪಕರಾದ ಜರಿನ್ ಚಂದನ್ ತಮ್ಮಶಿಷ್ಯನಿಗಾಗಿ ಈ ಚಿತ್ರವನ್ನು ನಿರ್ದೇಶಿಸಿದ್ದಾರೆ. ನಮಗೆ ಪ್ರತಿಯೊಬ್ಬರಿಗೂ ಸಹಾಯ ಮಾಡಬೇಕು ಎನ್ನುವ ಆಸೆ ಇರುತ್ತದೆ. ಆದೇರೀತಿ ಸಹಾಯ ಪಡೆಯುವ ಮನಸ್ಥಿತಿಯೂ ನಮ್ಮಲ್ಲಿರಬೇಕು. ಆತ ಬಡವನೇ ಆಗಲಿ, ಶ್ರೀಮಂತನೇ ಆಗಲಿ, ಆತನಿಗೆ ಒಂದಲ್ಲ ಒಂದುದಿನ ಮತ್ತೊಬ್ಬರ ಹೆಲ್ಪ್ ಬೇಕಾಗಿರುತ್ತದೆ. ಈ ಅಂಶವನ್ನಿಟ್ಟುಕೊಂಡು ಈ ಚಿತ್ರ ಮಾಡಿದ್ದೇವೆ ಎಂದರು.

ತುಮಕೂರು ರೈಲ್ವೆ ಸ್ಟೇಶನ್, ಬೆಂಗಳೂರು ಸುತ್ತಮುತ್ತ ಇದರ ಚಿತ್ರೀಕರಣ ನಡೆದಿದೆ. ಏ. 27ರಂದು ಈ ಕಿರುಚಿತ್ರ ಓಟಿಟಿಯಲ್ಲಿ ಬಿಡುಗಡೆಯಾಗುತ್ತಿದ್ದು, ಇದರ ಟೀಸರ್ ಅನ್ನು ನಿರ್ದೇಶಕ ಸಿಂಪಲ್ ರಿಲೀಸ್ ಮಾಡಿದರು.

ನಿರ್ಮಾಪಕ ಆದಿತ್ಯ ಮಾತನಾಡಿ, ಉತ್ತಮ ಸಂದೇಶವಿರುವ ಹೆಲ್ಪ್ ಚಿತ್ರ ವನ್ನು ಸಿನಿಮಾ ರೀತಿಯಲ್ಲೇ ಮಾಡಿದ್ದೇವೆ. ಕನ್ನಡದಲ್ಲಿ ಇದೊಂದು ವಿಭಿನ್ನ ಪ್ರಯತ್ನ, ಇದೇ ಮೊದಲ ಬಾರಿಗೆ ಓಟಿಟಿ ಯಲ್ಲಿ ಈ ಕಿರುಚಿತ್ರ ಬಿಡುಗಡೆಯಾಗುತ್ತಿದೆ ನಾನೊಬ್ಬ ಕೂಲಿ ಹುಡುಗನಾಗಿ ಕಾಣಿಸಿಕೊಂಡಿದ್ದೇನೆ. ವೀರೇಂದ್ರ ಹೆಗಡೆಯವರು ಚಿತ್ರದ ಪೋಸ್ಟರ್ ಬಿಡುಗಡೆ ಮಾಡಿದ್ದರು ಎಂದರು.

ನಿರ್ದೇಶಕ ಜೆರಿನ್ ಅವರ ಜೊತೆ ಶಾಲೆಯಲ್ಲಿ ಕಲಿತ ಬಗ್ಗೆ ಹೇಳಿಕೊಂಡ ಸಿಂಪಲ್ ಸುನಿ, ನನ್ನ ಸಿಂಪಲ್ಲಾಗೊಂದು ಲವ್ ಸ್ಟೋರಿ ಚಿತ್ರದಲ್ಲಿ ಜೆರಿನ್ ಎಂಬ ಪಾತ್ರ ಬರುತ್ತೆ ಆ ಹೆಸರಿಡಲು ನನ್ನ ಗೆಳೆಯನೆ ಸ್ಫೂರ್ತಿ. ಈಗ "ಹೆಲ್ಪ್" ಎಂಬ ಕಿರುಚಿತ್ರ ಮಾಡಿದ್ದಾರೆ. ಜೆರಿನ್ ಅವರಿಂದ ಇನ್ನೂ ಉತ್ತಮ ಚಿತ್ರಗಳು ಮೂಡಿಬರಲಿ ಎಂದು ಹಾರೈಸಿದರು.

ಅಭಿಜಿತ್, ಬಿ.ಸುರೇಶ್, ವೀಣಾ ಸುಂದರ್, ಸ್ವಾತಿ, ನಿಶಾ ಸೇರಿದಂತೆ ಅನೇಕರು "ಹೆಲ್ಪ್" ಚಿತ್ರದಲ್ಲಿ ನಟಿಸಿದ್ದಾರೆ. ಹರ್ಷವರ್ಧನ್ ರಾಜ್ ಸಂಗೀತ ನೀಡಿದ್ದಾರೆ.

ಸರ್ಕಾರಿ ಕೆಲಸವನ್ನು ಪಾರದರ್ಶಕವಾಗಿ ನಿರ್ವಹಿಸಿ



ಮಂಡ್ಯ,ಏ.21(ಮೋಹನ್‌ರಾಜ್)– ಸರ್ಕಾರದ ಅಧೀನದಲ್ಲಿ ಕೆಲಸ ಮಾಡುವ ಅಧಿಕಾರಿ–ಸಿಬ್ಬಂದಿ ಪಾರದರ್ಶಕವಾಗಿ ಕರ್ತವ್ಯ ನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ಎಸ್.ಅಶ್ವತಿ ತಿಳಿಸಿದರು.

ನಗರದ ಸರ್.ಎಂ. ವಿಶ್ವೇಶ್ವರಯ್ಯ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಸಂಯುಕ್ತಾಶ್ರಯದಲ್ಲಿ ಆಚರಿಸಲಾದ ರಾಜ್ಯ ಸರ್ಕಾರಿ ನೌಕರರ ದಿನಾಚರಣೆ ಹಾಗೂ 2021–2022ನೇ ಸಾಲಿನ ಸರ್ವೋತ್ತಮ ಸೇವಾ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಾರ್ವಜನಿಕರಿಗೆ ಸರ್ಕಾರದ ಸೌಲಭ್ಯಗಳನ್ನು ಒದಗಿಸಿ ಅವರ ಜೀವನ ಮಟ್ಟವನ್ನು ಸುಧಾರಿಸಿ ಉನ್ನತ ಮಟ್ಟಕ್ಕೆ ತರುವಂತಹ ಅವಕಾಶ ಸರ್ಕಾರಿ ನೌಕರರಿಗೆ ದೊರಕಿದೆ. ಇಂತಹ ಅವಕಾಶವನ್ನು ಸದುಪಯೋಗ ಮಾಡಿಕೊಂಡು ಸಾರ್ವಜನಿಕ ವ್ಯವಸ್ಥೆಯಲ್ಲಿ ಗೌರವವನ್ನು ಗಳಿಸುವಂತೆ ತಿಳಿಸಿದರು.

ಜನಸಾಮಾನ್ಯರು ತಮ್ಮ ಕುಂದುಕೊರತೆಗಳನ್ನು ಪರಿಹರಿಸಿಕೊಳ್ಳಲು ಸರ್ಕಾರಿ ಕಚೇರಿಗಳನ್ನು ಅವಲಂಬಿಸಿಕೊಂಡಿರುತ್ತಾರೆ. ಅವರನ್ನು ಅಲೆದಾಡಿಸದೆ ಸರ್ಕಾರದ ನಿಯಮಗಳ ಚೌಕಟ್ಟಿನಲ್ಲಿ ಅಹವಾಲುಗಳನ್ನು ಪರಿಹರಿಸಿ. 1947 ಏ.21 ರಂದು ಗೃಹ ಸಚಿವರಾಗಿದ್ದ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರು ಭಾರತ ಆಡಳಿತ ಸೇವೆಯನ್ನು ಕುರಿತು ಮೊದಲ ಬಾರಿಗೆ ದೆಹಲಿಯಲ್ಲಿ ಭಾಷಣ ಮಾಡಿದರು. ಅಂದಿನ ದಿನವನ್ನು ಸರ್ಕಾರಿ ನೌಕರರ ದಿನಾಚರಣೆ ಎಂದು ಆಚರಿಸಲಾಗುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮವನ್ನು ಕುರಿತು ಜಿಪಂನ ಸಿಇಒ ದಿವ್ಯಪ್ರಭು ಮಾತನಾಡಿ, ದೇವರ ಪೂಜೆಯನ್ನು ಎಷ್ಟು ಶ್ರದ್ಧೆಯಿಂದ ಮಾಡುತ್ತೇವೆಯೋ ಅದೇ ರೀತಿಯಾಗಿ ಸರ್ಕಾರಿ ಸೇವೆಯನ್ನು ಮಾಡಬೇಕು. ಯಾವುದೇ ಕೆಲಸವನ್ನು ಬಹಳ ಶ್ರದ್ಧೆಯಿಂದ ಮಾಡಿದ್ದೇ ಆದರೆ ನಮ್ಮ ಗುರಿಯನ್ನು ತಲುಪಬಹುದು ಎಂದರು.

ಇದೇ ಸಂದರ್ಭದಲ್ಲಿ ಪ್ರಶಸ್ತಿಗೆ ಭಾಜನರಾದ ಕಂದಾಯ ಇಲಾಖೆಯ ಭೂ ಮಾಪನ ಇಲಾಖೆ ಸಹಾಯಕ ನಿರ್ದೇಶಕ ಎಂ.ಸುರೇಶ್, ಶ್ರೀರಂಗಪಟ್ಟಣ ಗ್ರಾಮಲೆಕ್ಕಿಗ ಸೌಮ್ಯ, ಜಲ ಸಂಪನ್ಮೂಲ ಇಲಾಖೆ ಅಧೀಕ್ಷಕ ಅಭಿಯಂತರ ಕೆ.ಜಿ. ವಿಜಯಕುಮಾರ್, ಕೃಷಿ ಇಲಾಖೆಯ ಕೃಷಿ ಅಧಿಕಾರಿ ಶಿವನಂಜಯ್ಯ, ಜಿಲ್ಲಾ ಕ್ಷಯರೋಗ ಆರೋಗ್ಯ ನಿರ್ಮೂಲನಾ ಅಧಿಕಾರಿ ಎಂ.ಎನ್. ಡಾ.ಆಶಾಲತಾ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿಗಳಾದ ಜಿ.ಎಸ್.ಸೋಮಶೇಖರ್, ನಿಲಯಪಾಲಕ ಹೆಚ್.ಎಸ್.ಕೃಷ್ಣ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಬಿ.ವಿ ಶ್ರೀಧರ, ಯೋಜನಾಧಿಕಾರಿಗಳ ಕಚೇರಿಯ ಸೂಪರ್‌ವೈಸರ್ ಎ.ಲಕ್ಷ್ಮಿ ಹಾಗೂ ದ್ವಿತೀಯ ದರ್ಜೆ ಲೆಕ್ಕ ಸಹಾಯಕ ಕೆ.ಕೆಂಪೇಗೌಡ ರವರಿಗೆ ಜಿಲ್ಲಾ ಮಟ್ಟದಲ್ಲಿ ರಾಜ್ಯ ಸರ್ಕಾರಿ ನೌಕರರಿಗೆ ಸರ್ವೋತ್ತಮ ಸೇವಾ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಶಾಸಕ ಎಂ.ಶ್ರೀನಿವಾಸ್, ಅಪರ ಜಿಲ್ಲಾಧಿಕಾರಿ ವಿ.ಆರ್. ಶೈಲಜಾ, ಪೊಲೀಸ್ ವರಿಷ್ಠಾಧಿಕಾರಿ ಎನ್. ಯತೀಶ್, ಪಿಇಟಿ ಅಧ್ಯಕ್ಷ ಕೆ.ಎಸ್.ವಿಜಯಾನಂದ, ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕ ಡಿ.ಮಂಜುನಾಥ್, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಬಿ.ರಂಗೇಗೌಡ, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಮಲ್ಲಿಕಾರ್ಜುನಪ್ಪ, ಮಂಡ್ಯ ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಶಂಭುಗೌಡ ಉಪಸ್ಥಿತರಿದ್ದರು.

ನೀರಾವರಿಗೆ ದೇವೇಗೌಡರ ಕೊಡುಗೆ ಅಪಾರ



ಭಾರತೀನಗರ,ಏ.21–(ಅ.ಸತೀಶ್)– ನೀರಾವರಿ ಕ್ಷೇತ್ರಕ್ಕೆ ಎಚ್.ಡಿ. ದೇವೇಗೌಡ ಅವರ ಕೊಡುಗೆ ಅಪಾರ ಎಂದು ಶಾಸಕ ಡಿ.ಸಿ. ತಮ್ಮಣ್ಣ ಬಣ್ಣಿಸಿದರು. ಭಾರತೀನಗರದಲ್ಲಿ ನಡೆದ ಜನತಾ ಜಲ ಧಾರೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ನೀರಾವರಿ ಕ್ಷೇತ್ರಕ್ಕೆ ಎಚ್.ಡಿ.ದೇವೇಗೌಡರ ಕೊಡುಗೆ ಅಪಾರ. ರಾಮಕೃಷ್ಣಹೆಗಡೆ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ನೀರಾವರಿಗೆ ಹಣ ಕೊಡಲಿಲ್ಲ ಎಂಬ ಕಾರಣಕ್ಕೆ ಮಂತ್ರಿ ಪದವಿಗೆ ರಾಜೀನಾಮೆ ಕೊಟ್ಟ ಏಕೈಕ ರಾಜಕಾರಣಿ ಎಂದರು.

ಮೊಟ್ಟಮೊದಲಿಗೆ ಬಡವರಿಗೆ ಪಡಿತರ ವ್ಯವಸ್ಥೆ ಅಡಿ ಉಚಿತ ಅಕ್ಕಿ ಕೊಟ್ಟವರು ದೇವೇಗೌಡ. ಇದನ್ನು ಬೇರೆ ಸರ್ಕಾರಗಳು ಮುಂದುವರೆಸಿಕೊಂಡು ಬಂದವು. ಆದರೆ ನಾನು ಅನ್ನಭಾಗ್ಯ ಕೊಟ್ಟೆ ಎಂದು ಬುರುಡೆ ಬಿಡುತ್ತಿದ್ದಾರೆ ಎಂದು ಪರೋಕ್ಷವಾಗಿ ಸಿದ್ದರಾಮಯ್ಯ ಅವರನ್ನು ಟೀಕಿಸಿದರು.

ಸಮಗ್ರ ಅಭಿವೃದ್ಧಿಗೆ ಶ್ರಮ: ಕ್ಷೇತ್ರದಲ್ಲಿ ಸಮಗ್ರ ಅಭಿವೃದ್ಧಿಗೆ ಶ್ರಮಿಸುತ್ತಿದ್ದೇನೆ. ಶಿಕ್ಷಣ, ಆರೋಗ್ಯ ಕ್ಷೇತ್ರ ಸೇರಿದಂತೆ ರಸ್ತೆ ಅಭಿವೃದ್ಧಿ, ಕೆರೆಕಟ್ಟೆಗಳಿಗೆ ನೀರು ತುಂಬಿಸುವುದು, ನಾಲೆಗಳನ್ನು ಅಭಿವೃದ್ಧಿಪಡಿಸುವುದು ಮಹತ್ವವಾದ ಯೋಜನೆಗಳನ್ನು ಕ್ಷೇತ್ರದಲ್ಲಿ ಮಾಡುತ್ತಿದ್ದು, ಮುಂದಿನ ದಿನಗಳಲ್ಲಿ ಜೆಡಿಎಸ್ ಸರ್ಕಾರ ಬಂದರೆ ಎಚ್.ಡಿ.ಕುಮಾರಸ್ವಾಮಿ ರಾಜ್ಯವನ್ನೇ ಅಭಿವೃದ್ಧಿಯತ್ತ ಕೊಂಡೊಯ್ಯುತ್ತಾರೆ. ರೈತರನ್ನು ಉಳಿಸುತ್ತಾರೆ. ನಮ್ಮ ಕ್ಷೇತ್ರವು ಸಹ ಅಭಿವೃದ್ಧಿ ಕಾಣುತ್ತದೆ ಎಂದರು.

ಇದೇ ವೇಳೆ ಮೇಕೆದಾಟು ಯೋಜನೆ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರ ಕನಸಿನ ಕೂಸು ಎಂದು ವಿಧಾನಪರಿಷತ್ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ಹೇಳಿದರು.

ಮೇಳೈಸಿದ ಮೆರವಣಿಗೆ : ಕಾರ್ಯಕ್ರಮಕ್ಕೂ ಮುನ್ನಾ ನಡೆದ ಜನತಾ ಜಲಧಾರೆ ವಾಹನವನ್ನು ಗಡಿ ಗ್ರಾಮ ಚಂದೂಪುರದಲ್ಲಿ ಸ್ವಾಗತ ಕೋರಲಾಯಿತು. ತೊರೆಬೊಮ್ಮನಹಳ್ಳಿ, ಮಡೇನಹಳ್ಳಿ, ಮೆಣಸಗೆರೆ ಗ್ರಾಮಸ್ಥರು ವಾಹನವನ್ನು ಸಂಭ್ರಮದಿಂದ ಬರಮಾಡಿಕೊಂಡು ಜೈಕಾರ ಕೂಗಿದರು.ಭಾರತೀನಗರದ ಮದ್ದೂರು ಮಳವಳ್ಳಿ ಹೆದ್ದಾರಿಯಲ್ಲಿ ತಮಟೆ, ನಗಾರಿ, ಪೂಜಾ ಕುಣಿತದೊಂದಿಗೆ ಪಟಾಕಿ ಸಿಡಿಸಿ ಕಾರ್ಯಕರ್ತರು ಸಂಭ್ರಮಿಸಿದರು.

ವೇದಿಕೆಯಲ್ಲಿ ಮಾಜಿ ಶಾಸಕಿ ಕಲ್ಪನಾ ಸಿದ್ದರಾಜು, ಜೆಡಿಎಸ್ ಜಿಲ್ಲಾ ಘಟಕ ಅಧ್ಯಕ್ಷ ಡಿ. ರಮೇಶ, ದಕ್ಷಿಣ ಪದವೀಧರ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಎಚ್.ಕೆ.ರಾಮು, ತಾಲೂಕು ಘಟಕ ಅಧ್ಯಕ್ಷ ಚಿಕ್ಕತಿಮ್ಮೇಗೌಡ, ಮುಖಂಡರಾದ ಮಾದನಾಯಕನಹಳ್ಳಿ ರಾಜಣ್ಣ ಎಚ್.ಎಂ. ಮರಿಮಾದೇಗೌಡ, ದೇವರಹಳ್ಳಿ ವೆಂಕಟೇಶ, ದೊಡ್ಡರಸಿನಕೆರೆ ಹೊನ್ನೇಗೌಡ, ಎ.ಟಿ. ಬಲ್ಲೇಗೌಡ, ಕೆಸ್ತೂರು ದಾಸೇಗೌಡ, ಗೆಜ್ಜಲಗೆರೆ ಯೋಗೇಶ, ಮದ್ದೂರು ಮಹೇಶ್, ಪುರಸಭಾ ಸದಸ್ಯರು ಇದ್ದರು.

ಪಂಪ್‌ಸೆಟ್ ಬಾವಿಗೆ ಬಿದ್ದು ವ್ಯಕ್ತಿ ಸಾವು

ಮಳವಳ್ಳಿ,ಏ.21(ಮೋಹನ್‌ರಾಜ್)– ಜಮೀನಿನೊಂದರ ತೆರೆದ ಪಂಪ್‌ಸೆಟ್ ಬಾವಿಗೆ ವ್ಯಕ್ತಿಯೊಬ್ಬ ಕಾಲು ಜಾರಿ ಬಿದ್ದು ಸಾವನ್ನಪ್ಪಿರುವ ಘಟನೆ ಮಳವಳ್ಳಿ ತಾಲೂಕಿನ ದಬ್ಬಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಲೇಟ್ ಮಹದೇವಪ್ಪ ಅವರ ಪುತ್ರ ಮಹೇಶ್(48) ಸಾವನಪ್ಪಿದ ವ್ಯಕ್ತಿ. ಮಹೇಶ್ ತಮ್ಮ ಜಮೀನಿನಲ್ಲಿ ಹಾಕಲಾಗಿದ್ದ ಹಿಪ್ಪುನೇರಳೆ ಹಾಗೂ ಸೀಮೆ ಹುಲ್ಲಿಗೆ ನೀರು ಹಾಯಿಸಲು ಹೋಗಿದ್ದರು. ಈ ವೇಳೆ ತೆರೆದ ಬಾವಿಯಲ್ಲಿದ್ದ ಮೋಟಾರ್‌ಗೆ ನೀರು ಹಾಕುವ ವೇಳೆ ಆಕಸ್ಮಿಕವಾಗಿ ಕಾಲು ಜಾರಿ ಬಿದ್ದು ಮೃತಪಟ್ಟಿದ್ದಾರೆ ಎಂದು ಮೃತರ ಪತ್ನಿ ಪೂರ್ಣಿಮಾ ಬೆಳಕವಾಡಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ.

ಅರ್ಜಿ ಆಹ್ವಾನ

ಮಂಡ್ಯ,ಏ.21– ಹಿಂದೂಸ್ಥಾನ್ ಏರೋನಾಟಿಕ್ಸ್, ಟೆಕ್ನಿಕಲ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ಬೆಂಗಳೂರು–17 ಅವರಿಂದ ಫಿಟ್ಟರ್, ಟರ್ನರ್, ಮಷಿನಿಷ್ಟ್, ಎಲೆಕ್ಟ್ರಿಷಿಯನ್, ವೆಲ್ಡರ್, ಫೌಂಡ್ರಿ ಮ್ಯಾನ್, ಶೀಟ್ ಮೆಟಲ್ ವರ್ಕರ್, ಟ್ರೇಡ್‌ಗಳಿಗೆ ಅಪ್ರೆಂಟಿಸ್ ತರಬೇತಿಯನ್ನು ನೀಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಅಥವಾ ದೂ.ಸಂ: 08232–295124 ಸಂಪರ್ಕಿಸಬಹುದು.

ಕಾರು ಪಲ್ಟಿ: ಮಹಿಳೆ ಸಾವು, ಎಂಟು ಮಂದಿಗೆ ಗಾಯ

ಹಲಗೂರು,ಏ.21(ಮೋಹನ್‌ರಾಜ್)– ಸಮೀಪದ ಲಂಬಾಣಿ ಹೊಸದೊಡ್ಡಿ ಹಾಗೂ ಕೃಷ್ಣೇಗೌಡನ ದೊಡ್ಡಿ ಮಾರ್ಗಮಧ್ಯೆ ಕಾರು ಪಲ್ಟಿಯಾಗಿ ಸ್ಥಳದಲ್ಲೇ ಮಹಿಳೆ ಮೃತಪಟ್ಟಿರುವ ಘಟನೆ ಜರುಗಿದೆ.

ಸಮೀಪದ ಮುತ್ತತ್ತಿಯಲ್ಲಿ ಬೀಗರ ಊತಣಕೂಟ ಮುಗಿಸಿ ಹಿಂದಿರುಗುವಾಗ ಲಂಬಾಣಿ ಹೊಸದೊಡ್ಡಿ ಮತ್ತು ಕೃಷ್ಣೇಗೌಡನ ದೊಡ್ಡಿಯ ಮಾರ್ಗ ಮಧ್ಯೆ ಕಾರಿನ ಹಿಂಭಾಗದ ಚಕ್ರ ಬರ್ಸ್ಟ್ ಆದ ಕಾರಣ ಈ ದುರ್ಘಟನೆ ಸಂಭವಿಸಿದ್ದು, ರಾಮನಗರ ಜಿಲ್ಲೆಯ ಕನಕಪುರ ತಾಲೂಕು ಕಬ್ಬಾಳು ಗ್ರಾಮದ ವೀರಭದ್ರಗೌಡರ ಪತ್ನಿ ನಾಗಮ್ಮ (45) ಮೃತಪಟ್ಟಿದ್ದು, ಕಾರಿನಲ್ಲಿದ್ದ ಕನಕಪುರ ತಾಲೂಕು ಮಲ್ಲಪುರ ಗ್ರಾಮದ ಕುಮಾರ್(27), ಸುಮಿತ್ರ(37), ಸುಜಾತ (30), ಪುಷ್ಪ(25), ಪೂಜಾ(18), ಕೆಂಪಮ್ಮ(47), ನಕ್ಷತ್ರ(2), ಆಯುಷ್(04) ಗಂಭೀರವಾಗಿ ಗಾಯಗೊಂಡಿದ್ದಾರೆ. ಹೆಚ್ಚಿನ ಚಿಕಿತ್ಸೆಗೆ ಮಳವಳ್ಳಿ ತಾಲೂಕು ಆಸ್ಪತ್ರೆಗೆ ದಾಖಲಿಸಲಾಗಿದೆ.

ಘಟನೆ ಸಂಬಂಧ ಹಲಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿಧನ

ರೇಣುಕಪ್ಪ



ಪಾಂಡವಪುರ, ಏ.21– ಪಟ್ಟಣದ ರೇಣುಕಪ್ಪ(76) ಗುರುವಾರ ಮಧ್ಯಾಹ್ನ ನಿಧನರಾದರು. ಮೃತರು ಪತ್ನಿ, ಇಬ್ಬರು ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.

ಅಂತ್ಯಕ್ರಿಯೆ ಶುಕ್ರವಾರ ಬೆಳಗ್ಗೆ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ವಿರಾಜಪೇಟೆಗೆ ಆಗಮಿಸಿದ 'ಜನತಾ ಜಲಧಾರೆ'

ಪ್ರಮುಖ ಬೀದಿಗಳಲ್ಲಿ ಮೆರವಣಿಗೆ, ರಥಯಾತ್ರೆ ಬಗ್ಗೆ ಜನರಲ್ಲಿ ಅರಿವು ಮೂಡಿಸಿದ ಜೆಡಿಎಸ್ ಮುಖಂಡರು



ವಿರಾಜಪೇಟೆ,ಏ.21– ಜೆಡಿಎಸ್ 'ಜನತಾ ಜಲಧಾರೆ' ರಥಯಾತ್ರೆಯನ್ನು ವಿರಾಜಪೇಟೆ ಜೆಡಿಎಸ್ ಮುಖಂಡರು ಹಾಗೂ ಕಾರ್ಯಕರ್ತರು ಬರಮಾಡಿಕೊಂಡರು.

ನಂತರ ನಗರದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ಮೂಲಕ ಸಾಗಿದ ರಥಯಾತ್ರೆ ಖಾಸಗಿ ಬಸ್ ನಿಲ್ದಾಣ, ಸುಣ್ಣದ ಬೀದಿ, ಚೌಕಿ ಮುಖಾಂತರ ಗಡಿಯಾರ ಕಂಬದ ಬಳಿ ಆಗಮಿಸಿತು. ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷ ಕೆ.ಎಂ ಗಣೇಶ್ ಸಾರ್ವಜನಿಕರಿಗೆ ರಥಯಾತ್ರೆಯ ಕುರಿತು ಅರಿವು ಮೂಡಿಸಿದರು.

ಅಲ್ಪಸಂಖ್ಯಾತ ಘಟಕದ ಜಿಲ್ಲಾಧ್ಯಕ್ಷ ಇಸಾಕ್ ಖಾನ್, ವಿರಾಜಪೇಟೆ ನಗರ ಅಧ್ಯಕ್ಷ ಯೋಗೀಶ್ ನಾಯ್ಡು, ಯುವ ಘಟಕದ ಚಿಲ್ಲವಂಡ ಗಣಪ, ಕಿಶೋರ್, ಅಶ್ರಫ್ ಅಲಿ, ತಾಲೂಕು ಉಪಾಧ್ಯಕ್ಷ ಪಂದ್ಯಂಡ ರವಿ ಮಾದಪ್ಪ, ಅಪ್ಪನೆರವಂಡ ಸನ್ನು ಕುಶಾಲಪ್ಪ, ಬಾಳೆಕುಟೀರ ದಿನಿ, ಚಾಮಿಯಾಲ ಸೈಫುದ್ದೀನ್, ಸಂಶುದ್ದೀನ್, ಚೊಕ್ಕಂಡಹಳ್ಳಿ ಮಜೀದ್, ಟಿ.ಆರ್.ಹರ್ಷ, ರಚನ್, ನೂರ್ ಅಹಮದ್, ಹಿರಿಯ ಮುಖಂಡರಾದ ಯೂಸುಫ್ ಕೊಂಡಂಗೇರಿ, ವಿರಾಜಪೇಟೆ ತಾಲೂಕು ಅಧ್ಯಕ್ಷ ಪಿ.ಎ.ಮಂಜುನಾಥ್, ರಾಜ್ಯ ಉಪಾಧ್ಯಕ್ಷ ಎಂ.ಎಂ. ಶರೀಫ್ ಕಾರ್ಯಾಧ್ಯಕ್ಷ ಎಸ್.ಎಚ್.ಮತೀನ್, ಅಮ್ಮತ್ತಿ ಜಯಮ್ಮ, ಜಿಲ್ಲಾ ಕಾರ್ಯದರ್ಶಿ ಸುನಿಲ್ ಹಾಗೂ ಮತ್ತಿತರ ಕಾರ್ಯಕರ್ತರು ಹಾಜರಿದ್ದರು.

ನಿಧನ

ಪ್ರೇಮಲತಾ



ಸೋಮವಾರಪೇಟೆ,ಏ.21– ತಾಲೂಕಿನ ಮೂಲತಃ ತೊರೆನೂರು ಗ್ರಾಮದವರಾಗಿದ್ದು, ಮೈಸೂರಿನಲ್ಲಿ ನೆಲೆಸಿರುವ ಕೆ.ಆರ್.ಪೇಟೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾಗಿರುವ ಡಾ.ಟಿ.ಎಂ.ದೇವರಾಜು ಅವರ ಧರ್ಮಪತ್ನಿ ಪ್ರೇಮಲತಾ (49) ಅವರು ಗುರುವಾರ ಮೈಸೂರಿನ ಆಸ್ಪತ್ರೆಯಲ್ಲಿ ಹೃದಯಾಘಾತದಿಂದ ನಿಧನ ಹೊಂದಿದ್ದಾರೆ. ಮೃತರು ಪತಿ ಡಾ.ದೇವರಾಜು, ಇಬ್ಬರು ಪುತ್ರಿಯರು ಸೇರಿದಂತೆ ಬಂಧು–ಬಳಗ ಅಗಲಿದ್ದಾರೆ. ಅಂತ್ಯಸಂಸ್ಕಾರವು ಶುಕ್ರವಾರ ಏ.22 ಮಧ್ಯಾಹ್ನ ತೊರೆನೂರು ಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಇಂದಿನಿಂದ ದ್ವಿತೀಯ ಪಿಯುಸಿ ಪರೀಕ್ಷೆ

ಮಡಿಕೇರಿ,ಏ.21– ಜಿಲ್ಲೆಯಲ್ಲಿ ಏ.22 ರಿಂದ ಮೇ 18ರವರೆಗೆ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗಳನ್ನು ಸುಗಮವಾಗಿ ನಡೆಸುವ ಸಲುವಾಗಿ ಪರೀಕ್ಷಾ ಕೇಂದ್ರಗಳ ಸುತ್ತಲಿನ 200 ಮೀಟರ್ ವ್ಯಾಪ್ತಿಯಲ್ಲಿನ ಪ್ರದೇಶವನ್ನು ನಿಷೇಧಿತ ಸ್ಥಳ ಎಂದು ಘೋಷಿಸಿ ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಅವರು ಆದೇಶ ಹೊರಡಿಸಿದ್ದಾರೆ.

ಪರೀಕ್ಷಾ ಕೇಂದ್ರಗಳ ವಿವರ: ಗೋಣಿಕೊಪ್ಪ ಕಾವೇರಿ ಪದವಿ ಪೂರ್ವ ಕಾಲೇಜು, ನಾಪೋಕ್ಲು, ಪೊನ್ನಂಪೇಟೆ, ಸೋಮವಾರಪೇಟೆ, ವಿರಾಜಪೇಟೆ, ಮಡಿಕೇರಿ, ಕುಶಾಲನಗರ, ನೆಲ್ಯಹುದಿಕೇರಿ, ಕೂಡಿಗೆ ಸರ್ಕಾರಿ ಪದವಿ ಪೂರ್ವ ಕಾಲೇಜುಗಳು, ಮೂರ್ನಾಡು ಪದವಿ ಪೂರ್ವ ಕಾಲೇಜು, ಚೇರಂಬಾಣೆ ಅರುಣಾ ಪದವಿ ಪೂರ್ವ ಕಾಲೇಜು, ಕೊಡ್ಲಿಪೇಟೆ ಪದವಿ ಪೂರ್ವ ಕಾಲೇಜು, ಶ್ರೀಮಂಗಲ ಪದವಿ ಪೂರ್ವ ಕಾಲೇಜು, ಶನಿವಾರಸಂತೆ ಪದವಿ ಪೂರ್ವ ಕಾಲೇಜು, ಮಡಿಕೇರಿ ಸಂತ ಮೈಕಲರ ಪದವಿ ಪೂರ್ವ ಕಾಲೇಜು, ವಿರಾಜಪೇಟೆ ಸಂತ ಅನ್ನಮ್ಮ ಪದವಿ ಪೂರ್ವ ಕಾಲೇಜು ಮತ್ತು ಕುಶಾಲನಗರ ಕನ್ನಡ ಭಾರತಿ ಪದವಿ ಪೂರ್ವ ಕಾಲೇಜುಗಳಲ್ಲಿ ಪರೀಕ್ಷೆ ನಡೆಯಲಿದೆ.

ಜಿಲ್ಲೆಯಲ್ಲಿ ಒಟ್ಟು 6,050 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದು, ಕಲಾ ವಿಭಾಗದಲ್ಲಿ 1,570, ವಾಣಿಜ್ಯ ವಿಭಾಗದಲ್ಲಿ 3,192, ವಿಜ್ಞಾನ ವಿಭಾಗದಲ್ಲಿ 1,288 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಇವರಲ್ಲಿ 2,919 ಬಾಲಕರು ಮತ್ತು 3,131 ಬಾಲಕಿಯರು ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ಬರೆಯಲಿದ್ದಾರೆ.

ಜಿಲ್ಲೆಯಲ್ಲಿ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ಬರೆಯುವ 6,050 ವಿದ್ಯಾರ್ಥಿಗಳಲ್ಲಿ, 5423 ವಿದ್ಯಾರ್ಥಿಗಳು ಹೊಸದಾಗಿ(ಫ್ರೆಶರ್ಸ್), 368 ಮಂದಿ ಪುನರಾವರ್ತಿತ(ರಿಪಿಟರ್ಸ್) ಹಾಗೂ ಖಾಸಗಿಯಾಗಿ 259 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ.

ಜಿಲ್ಲೆಯಲ್ಲಿ ಒಟ್ಟು 17 ಕೇಂದ್ರಗಳಲ್ಲಿ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ನಡೆಯಲಿದೆ. ಮಡಿಕೇರಿ ತಾಲೂಕಿನ 5, ಕುಶಾಲನಗರ ತಾಲೂಕಿನ 4, ಸೋಮವಾರಪೇಟೆ ತಾಲೂಕಿನ 3, ವಿರಾಜಪೇಟೆ ತಾಲೂಕು 2, ಪೊನ್ನಂಪೇಟೆ ತಾಲೂಕಿನ 3 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ.

ಶುಂಠಿ ಚೀಲದ ಕೆಳಭಾಗದಲ್ಲಿ ಬಚ್ಚಿಟ್ಟು ಸಾಗಿಸುತ್ತಿದ್ದ ಬೀಟೆ ನಾಟಗಳ ವಶ

ಮಡಿಕೇರಿ,ಏ.21– ಶನಿವಾರಸಂತೆಯಿಂದ ಕೇರಳಕ್ಕೆ ಶುಂಠಿ ತುಂಬಿದ ಚೀಲಗಳ ಕೆಳಭಾಗದಲ್ಲಿ ಬಚ್ಚಿಟ್ಟು ಅಕ್ರಮವಾಗಿ ಸಾಗಾಟ ಮಾಡುತ್ತಿದ್ದ ಬೀಟೆ ನಾಟಗಳನ್ನು ಹುಣಸೂರು ಪ್ರಾದೇಶಿಕ ಅರಣ್ಯ ವಿಭಾಗದ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

ಶನಿವಾರಸಂತೆಯಿಂದ ಹುಣಸೂರು–ಹೆಚ್.ಡಿ.ಕೋಟೆ ಮಾರ್ಗವಾಗಿ ಬಾವಲಿ ಚೆಕ್‌ಪೋಸ್ಟ್ ಮೂಲಕ ಕೇರಳಕ್ಕೆ ಬೀಟೆ ನಾಟಗಳನ್ನು ಸಾಗಿಸುತ್ತಿದ್ದಾಗ ಅರಣ್ಯ ಸಿಬ್ಬಂದಿ ದಾಳಿ ಮಾಡಿದರು. ಈ ಸಂದರ್ಭ ಚಾಲಕ ಪರಾರಿಯಾಗಿದ್ದು, ಸುಮಾರು 7 ಲಕ್ಷ ರೂ. ಮೌಲ್ಯದ ಬೀಟೆ ನಾಟ ಮತ್ತು ಶನಿವಾರಸಂತೆಯ ವ್ಯಕ್ತಿಯೊಬ್ಬರಿಗೆ ಸೇರಿದ ಗೂಡ್ಸ್ ವಾಹನವನ್ನು ವಶಕ್ಕೆ ಪಡೆದರು. ಶುಂಠಿ ತುಂಬಿದ ಚೀಲಗಳ ಕೆಳಭಾಗದಲ್ಲಿ ಮರದ ನಾಟಗಳನ್ನು ಜೋಡಿಸಿ ಸಾಗಾಟ ಮಾಡಲಾಗುತ್ತಿತ್ತು ಎಂದು ಅರಣ್ಯಾಧಿಕಾರಿಗಳು ಮಾಹಿತಿ ನೀಡಿದ್ದಾರೆ ಡಿಎಫ್‌ಓ ಸೀಮಾ ಬಿ.ಎ. ಹಾಗೂ ಎಸಿಎಫ್ ಅನ್ಸಾ ಅವರ ಮಾರ್ಗದರ್ಶನದಲ್ಲಿ ಆರ್‌ಎಫ್‌ಓ ನಂದಕುಮಾರ್ ನೇತೃತ್ವದಲ್ಲಿ ಡಿ.ಆರ್.ಎಫ್.ಓ.ಗಳಾದ ಮಲ್ಲಿಕಾರ್ಜುನ, ಹರೀಶ್, ದೇವಯ್ಯ ಹಾಗೂ ಸಿಬ್ಬಂದಿ ಕಾರ್ಯಾಚರಣೆ ನಡೆಸಿದರು.

ಹುಣಸೂರು ಅಪಘಾತದಲ್ಲಿ ಮಡಿದ ಆರು ಮಂದಿಯ ಅಂತ್ಯಕ್ರಿಯೆ

ವಿದೇಶದಲ್ಲಿರುವ ಪುತ್ರ ಬಂದ ನಂತರ ಮತ್ತೊಬ್ಬರ ಅಂತ್ಯಕ್ರಿಯೆ





ಮಡಿಕೇರಿ,ಏ.21–ಹುಣಸೂರು ಬಳಿ ಬುಧವಾರ ನಡೆದ ಭೀಕರ ರಸ್ತೆ ಅಪಘಾತದಲ್ಲಿ ಮೃತಪಟ್ಟ 7 ಮಂದಿಯಲ್ಲಿ ಹಿಂದೂ ರುದ್ರಭೂಮಿಯಲ್ಲಿ 5 ಮತ್ತು ಕ್ರೈಸ್ತರ ಸ್ಮಶಾನದಲ್ಲಿ ಒಬ್ಬರ ಅಂತ್ಯಸಂಸ್ಕಾರವನ್ನು ಗುರುವಾರ ನಡೆಸಲಾಯಿತು.

ಮೃತ ಅನಿಲ್ ಎಂ.ಆರ್ ಅವರ ಪುತ್ರ ವಿದೇಶದಲ್ಲಿದ್ದು, ಶುಕ್ರವಾರ ತಲುಪುವ ನಿರೀಕ್ಷೆ ಇದೆ. ನಂತರ ಅನಿಲ್ ಅವರ ಅಂತ್ಯಸಂಸ್ಕಾರ ನೆರವೇರಲಿದೆ. ಪಾಲಿಬೆಟ್ಟದಲ್ಲಿ ಸ್ಮಶಾನ ಮೌನ ಆವರಿಸಿದ್ದು, ಮೃತರ ಅಗಲಿಕೆಯ ನೋವಿಗೆ ಅಂಗಡಿ ಮುಂಗಟ್ಟುಗಳು ಎಲ್ಲವೂ ಸ್ವಯಂ ಪ್ರೇರಿತವಾಗಿ ಬಂದ್ ಆಗಿದ್ದವು. ಮದುವೆಗೆಂದು ಹೋದವರಲ್ಲಿ ಏಳು ಮಂದಿ ಸ್ನೇಹಿತರು ಶವವಾಗಿ ಹುಟ್ಟೂರಿಗೆ ಮರಳಿರುವುದು ಗ್ರಾಮಸ್ಥರಿಗೆ ಮರೆಯಲಾಗದ ನೋವು ನೀಡಿದೆ.

ಸ್ನೇಹಿತರ ಅಗಲಿಕೆಯಿಂದ ಇಡೀ ಗ್ರಾಮ ದಿಗ್ಭ್ರಮೆಗೊಂಡಿದೆ. ಒಂದೇ ರುದ್ರಭೂಮಿಯಲ್ಲಿ ಅಂತ್ಯಸಂಸ್ಕಾರ ಮಾಡಲು ಪಾರ್ಥಿವ ಶರೀರಗಳನ್ನು ಹೊತ್ತು ತರುತ್ತಿದ್ದ ದೃಶ್ಯ ಎಂತಹವರ ಕರುಳನ್ನೂ ಹಿಂಡುವಂತಿತ್ತು.

ಅಪಘಾತದಲ್ಲಿ ಸಾವನ್ನಪ್ಪಿದ ಯುವಕ ವಿನೀತ್ ವೃತ್ತಿಯಲ್ಲಿ ಬಸ್ ಚಾಲಕನಾಗಿದ್ದು, ಕೇವಲ 3 ದಿನಗಳಲ್ಲಿ ಇವರ ವಿವಾಹ ಪಾಲಿಬೆಟ್ಟದಲ್ಲಿ ನಡೆಯಬೇಕಾಗಿತ್ತು. ಹಸೆಮಣೆ ಏರಬೇಕಾದ ಯುವಕ ಮಸಣ ಸೇರಿದ ಬಗ್ಗೆ ಕುಟುಂಬದ ಸದಸ್ಯರು ಮತ್ತು ಗ್ರಾಮಸ್ಥರು ರೋದಿಸುತ್ತಿದ್ದರು.

ಮೈಸೂರಿನಲ್ಲಿ ಬುಧವಾರ ವೈವಾಹಿಕ ಜೀವನಕ್ಕೆ ಕಾಲಿಟ್ಟ ಜಾನಿ ಅವರ ತಂದೆ ಫಿಲಿಪ್ ಅವರು ಕೂಡ ಅಪಘಾತದಲ್ಲಿ ಮೃತಪಟ್ಟಿದ್ದು, ಮದುವೆ ಮನೆ ಶೋಕ ಸಾಗರದಲ್ಲಿ ಮುಳುಗಿದೆ. ಪಾಲಿಬೆಟ್ಟ ಆಟೋ ಮಾಲೀಕರ ಹಾಗೂ ಚಾಲಕರ ಸಂಘ ಮೃತರ ಆತ್ಮಕ್ಕೆ ಶಾಂತಿ ಕೋರಿ ಸಂತಾಪ ಸೂಚಿಸಿದೆ.

ಇಂದಿನಿಂದ ದ್ವಿತೀಯ ಪಿಯುಸಿ ಪರೀಕ್ಷೆ

ಜಿಲ್ಲೆಯಲ್ಲಿ ಪರೀಕ್ಷೆ ಬರೆಯಲಿದ್ದಾರೆ 7965 ವಿದ್ಯಾರ್ಥಿಗಳು





"ಜಿಲ್ಲೆಯಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆಗೆ ಎಲ್ಲಾ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ. ಪರೀಕ್ಷೆ ಸುಲಭವಾಗಿದ್ದು, ಆಯ್ಕೆ ಪ್ರಶ್ನೆಗಳು ಜಾಸ್ತಿ ಇರುತ್ತವೆ. ವಿದ್ಯಾರ್ಥಿಗಳು ಭಯಪಡದೇ, ಗಾಬರಿ ಇಲ್ಲದೇ ಮುಕ್ತವಾಗಿ, ನಿರ್ಭಯವಾಗಿ ಪರೀಕ್ಷೆ ಬರೆಯಬೇಕು.

– ನಾಗಮಲ್ಲೇಶ್, ಡಿಡಿಪಿಯು

ಚಾಮರಾಜನಗರ,ಏ.21(ಎಸ್‌ಎಸ್)– ದ್ವಿತೀಯ ಪಿಯುಸಿ ಪರೀಕ್ಷೆ ಏ.22ರಿಂದ ಆರಂಭವಾಗುತ್ತಿದ್ದು, ಜಿಲ್ಲೆಯಲ್ಲಿಯೂ ಸಕಲ ಸಿದ್ಧತೆ ಕೈಗೊಳ್ಳಲಾಗಿದೆ. ಜಿಲ್ಲೆಯಲ್ಲಿ ಈ ಬಾರಿ ಒಟ್ಟು 7,965 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಈ ಪೈಕಿ 4,040 ಬಾಲಕರು, 3,925 ಬಾಲಕಿಯರು ಇದ್ದಾರೆ. ಇವರಲ್ಲಿ 6,991 ವಿದ್ಯಾರ್ಥಿಗಳು ಮೊದಲ ಬಾರಿ ಪರೀಕ್ಷೆ ಬರೆಯುತ್ತಿದ್ದಾರೆ. 320 ಖಾಸಗಿ ಅಭ್ಯರ್ಥಿಗಳು, 654 ಪುನರಾವರ್ತಿತ ವಿದ್ಯಾರ್ಥಿಗಳು ಪರೀಕ್ಷೆ ತೆಗೆದುಕೊಂಡಿದ್ದಾರೆ ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ನಾಗಮಲ್ಲೇಶ್ 'ಮೈಸೂರುಮಿತ್ರ'ನಿಗೆ ಮಾಹಿತಿ ನೀಡಿದರು.

ಜಿಲ್ಲೆಯಲ್ಲಿ ಒಟ್ಟು 17 ಪರೀಕ್ಷಾ ಕೇಂದ್ರಗಳನ್ನು ತೆರೆಯಲಾಗಿದೆ. ಚಾಮರಾಜನಗರ ತಾಲೂಕಿನಲ್ಲಿ 4, ಗುಂಡ್ಲುಪೇಟೆ ತಾಲೂಕಿನಲ್ಲಿ 3, ಕೊಳ್ಳೇಗಾಲ ತಾಲೂಕಿನಲ್ಲಿ 5, ಯಳಂದೂರು ತಾಲೂಕಿನಲ್ಲಿ 2 ಹಾಗೂ ಹನೂರಿನಲ್ಲಿ 2, ರಾಮಪುರದಲ್ಲಿ 1 ಪರೀಕ್ಷಾ ಕೇಂದ್ರವನ್ನು ತೆರೆಯಲಾಗಿದೆ ಎಂದು ತಿಳಿಸಿದರು.

ಯಾವ ಕಾಲೇಜಿನಲ್ಲಿ ಸಮವಸ್ತ್ರ ಇದೆಯೋ ಅಲ್ಲಿನ ವಿದ್ಯಾರ್ಥಿಗಳು ಪರೀಕ್ಷೆ ಬರುವಾಗ ಕಡ್ಡಾಯವಾಗಿ ಸಮವಸ್ತ್ರ ಧರಿಸಿಕೊಂಡು ಬರಬೇಕು. ಪರೀಕ್ಷಾ ಕೊಠಡಿಗಳಿಗೆ ಧಾರ್ಮಿಕ ನಂಬಿಕೆಗೆ ಸಂಬಂಧಿಸಿದ ವಸ್ತ್ರವನ್ನು ಧರಿಸುವುದನ್ನು ನಿರ್ಬಂಧಿಸಲಾಗಿದೆ ಎಂದರು.

ಪರೀಕ್ಷೆಗೆ ಸರಳ ಕ್ಯಾಲುಕುಲೇಟರ್ ಬಳಸಲು ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಲಾಗಿದೆ. ಸದ್ಯಕ್ಕೆ ಕೋವಿಡ್ ಪ್ರಕರಣಗಳು ಇಳಿಕೆಯಾಗಿರುವುದರಿಂದ ಕೋವಿಡ್ ನಿಯಮ ಪಾಲನೆ ಕಡ್ಡಾಯವಾಗಿಲ್ಲ. ಕೆಮ್ಮು, ಜ್ವರ ಸೇರಿದಂತೆ ಇತರೆ ಆರೋಗ್ಯ ಸಮಸ್ಯೆಗಳಿರುವ ವಿದ್ಯಾರ್ಥಿಗಳು ಮಾಸ್ಕ್ ಧರಿಸಬೇಕು ಎಂದು ನಾಗಮಲ್ಲೇಶ್ ತಿಳಿಸಿದರು.

ಕಾರ್ಯಾಂಗದ ಪರಿಣಾಮಕಾರಿ ಕಾರ್ಯನಿರ್ವಹಣೆಯಿಂದ ದೇಶ, ರಾಜ್ಯದ ಅಭಿವೃದ್ಧಿ: ಶಾಸಕ ಸಿ.ಪುಟ್ಟರಂಗಶೆಟ್ಟಿ



ಚಾಮರಾಜನಗರ, ಏ.21– ಕಾರ್ಯಾಂಗದ ಪ್ರಮುಖ ಭಾಗವಾಗಿರುವ ಅಧಿಕಾರಿ ನೌಕರರ ವರ್ಗದ ಪರಿಣಾಮಕಾರಿ ಹಾಗೂ ಪ್ರಾಮಾಣಿಕ ಕಾರ್ಯನಿರ್ವಹಣೆಯಿಂದ ದೇಶ, ರಾಜ್ಯದ ಅಭಿವೃದ್ಧಿ ಸಾಧ್ಯವಾಗಲಿದೆ ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ಹೇಳಿದರು.

ನಗರದ ಜಿಲ್ಲಾಡಳಿತ ಭವನದಲ್ಲಿರುವ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ಗುರುವಾರ ಜಿಲ್ಲಾಡಳಿತ ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಶಾಖೆ ಸಹಯೋಗದಲ್ಲಿ ಆಯೋಜಿಸಿದ್ದ ಜಿಲ್ಲಾ ಮಟ್ಟದ ರಾಜ್ಯ ಸರ್ಕಾರಿ ನೌಕರರ ದಿನಾಚರಣೆ ಹಾಗೂ ಸರ್ವೋತ್ತಮ ಸೇವಾ ಪ್ರಶಸ್ತಿ ಪ್ರದಾನ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಶಾಸಕಾಂಗ ರೂಪಿಸುವ ಶಾಸನಗಳು, ಕಾರ್ಯಕ್ರಮಗಳು, ಯೋಜನೆಗಳನ್ನು ಅನುಷ್ಠಾನ ಮಾಡುವ ಮಹತ್ತರ ಹೊಣೆಗಾರಿಕೆ ಕಾರ್ಯಾಂಗದ ಮೇಲಿದೆ. ಸರ್ಕಾರಿ ಅಧಿಕಾರಿ ನೌಕರರು ನಿಷ್ಠೆ ಕಾಳಜಿಯಿಂದ ಕರ್ತವ್ಯ ನಿರ್ವಹಿಸಿದರೆ ಅಭಿವೃದ್ಧಿಯಾಗಲಿದೆ. ಈ ನಿಟ್ಟಿನಲ್ಲಿ ಅತ್ಯಂತ ಪ್ರಮುಖ ಪಾತ್ರ ಅಧಿಕಾರಿ ನೌಕರರದ್ದಾಗಿದೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಮಾತನಾಡಿ, ಜನಪರವಾಗಿ ಅಧಿಕಾರಿ ನೌಕರರು ಸೇವೆ ಸಲ್ಲಿಸಬೇಕು. ಹಿರಿಯ ನೌಕರರ ಮಾರ್ಗದರ್ಶನ ಪಡೆಯಬೇಕು. ಬೇರೆ ಬೇರೆ ಇಲಾಖೆಗಳು ಸಮನ್ವಯದಿಂದ ಒಂದು ತಂಡವಾಗಿ ಕೆಲಸ ಮಾಡಿದಾಗ ಜನರ ನಿರೀಕ್ಷೆಗೆ ತಕ್ಕಂತೆ ಕಾರ್ಯಗಳು ನಡೆಯಲು ಸಾಧ್ಯವಾಗುತ್ತದೆ ಎಂದರು.

ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷ ಎಂ.ರಾಮಚಂದ್ರ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪಿ.ಬಿ.ಶಾಂತಮೂರ್ತಿ ಕುಲಗಾಣ, ಜಿಪಂ ಸಿಇಓ ಕೆ.ಎಂ.ಗಾಯಿತ್ರಿ, ಹೆಚ್ಚುವರಿ ಜಿಲ್ಲಾಧಿಕಾರಿ ಎಸ್.ಕಾತ್ಯಾಯಿನಿದೇವಿ, ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಚಂದ್ರಶೇಖರ್ ಮಾತನಾಡಿದರು.

ಡಯಟ್ ಹಿರಿಯ ಉಪನ್ಯಾಸಕ ಯು.ಆರ್. ಲಿಂಗರಾಜೇಅರಸ್ ಅವರು ಮುಖ್ಯ ಭಾಷಣ ಮಾಡಿದರು. ಇದೇ ವೇಳೆ ಗುಂಡ್ಲುಪೇಟೆ ತಾಲೂಕು ಸಾರ್ವಜನಿಕ ಆಸ್ಪತ್ರೆಯ ಹಿರಿಯ ದಂತ ವೈದ್ಯಾಧಿಕಾರಿ ಡಾ.ಜೆ.ಡಿ.ಸ್ಮಿತಾ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಕೆ.ಎಂ.ವಿಶ್ವೇಶ್ವರಯ್ಯ, ಜಿಲ್ಲಾಸ್ಪತ್ರೆಯ ಹಿರಿಯ ವಾಹನ ಚಾಲಕ ಎಸ್.ಕೃಷ್ಣಮೂರ್ತಿ, ಜಿಪಂ ಲೆಕ್ಕಾಧಿಕಾರಿ ಹೆಚ್.ಎಸ್.ಗಂಗಾಧರ್, ಉಡಿಗಾಲ ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ.ಉಮಾರಾಣಿ, ಸಿಮ್ಸ್ ಆಸ್ಪತ್ರೆಯ ತುರ್ತು ಔಷಧ ವೈದ್ಯಾಧಿಕಾರಿ ಡಾ.ಕೆ.ಬಿ.ಅಭಿಷೇಕ್, ಚಾಮರಾಜನಗರ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಯ ಪ್ರಥಮ ದರ್ಜೆ ಸಹಾಯಕ ಶಿವಕುಮಾರ್, ಹನೂರು ತಾಲೂಕು ರಾಮಾಪುರ ಹೋಬಳಿಯ ಉಪತಹಸೀಲ್ದಾರ್ ಜಿ.ಎಂ. ಸುರೇಖ, ಚಾಮರಾಜನಗರ ತಾಲೂಕು ಯಡಿಯೂರು ವೃತ್ತದ ಗ್ರಾಮ ಲೆಕ್ಕಾಧಿಕಾರಿ ಸುಮಂತ್‌ಕುಮಾರ್ ಹಾಗೂ ಹನೂರು ತಾಲೂಕು ಬಂಡಳ್ಳಿ ಗ್ರಾಪಂ ಅಭಿವೃದ್ಧಿ ಅಧಿಕಾರಿ ನವೀತಾ ತೇಜೆಗೌಡ ಅವರಿಗೆ ಸರ್ವೋತ್ತಮ ಸೇವಾ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಸನ್ಮಾನಿತರ ಪರವಾಗಿ ಮಾತನಾಡಿದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಕೆ.ಎಂ.ವಿಶ್ವೇಶ್ವರಯ್ಯ ಹಾಗೂ ಜಿಪಂ ಲೆಕ್ಕಾಧಿಕಾರಿ ಹೆಚ್.ಎಸ್.ಗಂಗಾಧರ್ ಅವರು ಸೇವೆ ಗುರುತಿಸಿ ಪ್ರಶಸ್ತಿ ನೀಡಿ ಗೌರವಿಸಿರುವುದಕ್ಕೆ ಕೃತಜ್ಞತೆ ಸಲ್ಲಿಸುವುದಾಗಿ ನುಡಿದರು.

ಜಿಪಂ ಲೆಕ್ಕಾಧಿಕಾರಿ ಹೆಚ್.ಎಸ್.ಗಂಗಾಧರ್ ಮಾತನಾಡಿ, ಪ್ರಶಸ್ತಿ ಪುರಸ್ಕಾರದೊಂದಿಗೆ ತಮಗೆ ನೀಡಲಾಗಿರುವ 25 ಸಾವಿರ ರೂ. ನಗದನ್ನು ಬಡ ವಿದ್ಯಾರ್ಥಿಗಳ ನೆರವಿಗೆ ಹಾಗೂ ಸರ್ಕಾರಿ ನೌಕರರ ಸಂಘದ ಚಟುವಟಿಕೆಗಳಿಗೆ ನೀಡುವುದಾಗಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಎಎಸ್‌ಪಿ ಕೆ.ಎಸ್. ಸುಂದರ್‌ರಾಜ್, ತಹಸೀಲ್ದಾರ್ ಚಿದಾನಂದ ಗುರುಸ್ವಾಮಿ, ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಶಾಖೆಯ ಪದಾಧಿಕಾರಿಗಳಾದ ಎಸ್.ಮಹದೇವಸ್ವಾಮಿ, ಎಸ್.ಮಹಾದೇವಯ್ಯ, ಮಲ್ಲಿಕಾರ್ಜುನ್ ಕುಂಟೋಜಿ, ಜೋಸೆಫ್ ಅಲೆಕ್ಸಾಂಡರ್ ಸೇರಿದಂತೆ ಇತರರು ಉಪಸ್ಥಿತರಿದ್ದರು.



ಚಾಮರಾಜನಗರ ಜಿಲ್ಲಾ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ(ಎಪಿಎಂಸಿ)ಗೆ ಬದನಗುಪ್ಪೆ ಕ್ಷೇತ್ರದಿಂದ ನೂತನವಾಗಿ ಆಯ್ಕೆಯಾದ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಎಂ.ಬಿ.ಗುರುಸ್ವಾಮಿ ಅವರು ಗುರುವಾರ ಬೆಳಗ್ಗೆ ಮರಿಯಾಲ ಶ್ರೀ ಮುರುಘ ರಾಜೇಂದ್ರಸ್ವಾಮಿ ಮಠಕ್ಕೆ ಭೇಟಿ ನೀಡಿ ಶ್ರೀ ಇಮ್ಮಡಿ ಮುರುಘ ರಾಜೇಂದ್ರ ಸ್ವಾಮೀಜಿ ಅವರ ಆಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರು ಮತ್ತು ಮರಿಯಾಲ ಗ್ರಾಮಸ್ಥರು ಹಾಜರಿದ್ದರು. ಚಿತ್ರ: ಬದನಗುಪ್ಪೆ ಮಲ್ಲಣ್ಣ

ವಿಜೃಂಭಣೆಯ ಶ್ರೀರಾಮ ಪಟ್ಟಾಭಿಷೇಕ ಮಹೋತ್ಸವ

ಗುಂಡ್ಲುಪೇಟೆ, ಏ.21(ಸೋಮ್.ಜಿ)– ಪಟ್ಟಣದ ಕಿತ್ತೂರು ರಾಣಿ ಚೆನ್ನಮ್ಮ ರಸ್ತೆಯಲ್ಲಿರುವ ಶ್ರೀರಾಮ ಮಂದಿರ ಟ್ರಸ್ಟ್ ವತಿಯಿಂದ 114ನೇ ವರ್ಷದ ಶ್ರೀರಾಮ ಪಟ್ಟಾಭಿಷೇಕ ಮಹೋತ್ಸವವು ಗುರುವಾರ ವಿಜೃಂಭಣೆಯಿಂದ ನೆರವೇರಿತು.

ಕಳೆದ 12 ದಿನಗಳಿಂದ ವಿವಿಧ ಪೂಜಾ ಕೈಂಕರ್ಯ ಮತ್ತು ಹೋಮ ಹವನಗಳು ದೇವಾಲಯದಲ್ಲಿ ನೆರವೇರಿತು. ಪಟ್ಟಾಭಿಷೇಕದ ಹಿನ್ನೆಲೆ ಶ್ರೀರಾಮ ದೇವರ ಉತ್ಸವ ಮೂರ್ತಿಗೆ ವಿಶೇಷ ಅಲಂಕಾರ ಮತ್ತು ಅಭಿಷೇಕಗಳು ನಡೆದವು. ನಂತರ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು. ಈ ವೇಳೆ ಶ್ರೀರಾಮ ಆಡಳಿತ ಮಂಡಳಿಯ ಸದಸ್ಯರು ಮತ್ತು ಮಹಿಳಾ ವಿಪ್ರಬಳಗದ ಸದಸ್ಯರು ಹಾಜರಿದ್ದರು.




ಶ್ರೀರಾಮ ಪಟ್ಟಾಭಿಷೇಕ: ಪಟ್ಟಣದ ಸಂಗೊಳ್ಳಿ ರಾಯಣ್ಣ ರಸ್ತೆಯಲ್ಲಿ ಶ್ರೀರಾಮ ಮಂದಿರದಲ್ಲಿ ಶ್ರೀರಾಮ ಪಟ್ಟಾಭಿಷೇಕವನ್ನು ನೆರವೇರಿಸಲಾಯಿತು. ಪಟ್ಟಾಭಿಷೇಕದ ಹಿನ್ನೆಲೆಯಲ್ಲಿ ದೇವಾಲಯವನ್ನು ವಿವಿಧ ಹೂವುಗಳಿಂದ ಅಲಂಕಾರ ಮಾಡಲಾಗಿತ್ತು ನಂತರ ದೇವರಿಗೆ ಪೂಜೆ ಮತ್ತು ಮಹಾ ಮಂಗಳಾರತಿ ನೆರವೇರಿಸಿ ಪ್ರಸಾದ ವಿತರಣೆ ಮಾಡಲಾಯಿತು.

ಆರೋಗ್ಯ ಇಲಾಖೆಯಲ್ಲಿ ಬಯೋಮೆಟ್ರಿಕ್ ಆಧರಿಸಿ ವೇತನ ಪಾವತಿ ವ್ಯವಸ್ಥೆ

● ಆರೋಗ್ಯ ಸಚಿವ ಡಾ. ಸುಧಾಕರ್ ಸಮರ್ಥನೆ ● ಇಲಾಖೆಯಲ್ಲಿ ಗುಣಮಟ್ಟದ ಸೇವೆಗೆ ಈ ಕ್ರಮ

ಬೆಂಗಳೂರು, ಏ.21(ಕೆಎಂಶಿ)–ಇಲಾಖೆಯಲ್ಲಿ ಗುಣಾತ್ಮಕ ಬದಲಾವಣೆ ತರುವ ನಿಟ್ಟಿನಲ್ಲಿ ಎಲ್ಲ ಹಂತದ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಬಯೋ ಮೆಟ್ರಿಕ್ ಹಾಜರಾತಿ ಆಧರಿಸಿ ವೇತನ ಪಾವತಿಸುವ ವ್ಯವಸ್ಥೆ ಕಡ್ಡಾಯಗೊಳಿಸಿ ಮಹತ್ವದ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ. ಕೆ. ಸುಧಾಕರ್ ಹೇಳಿದ್ದಾರೆ.





ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಈ ಕುರಿತು ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಆಸ್ಪತ್ರೆ, ಇಲಾಖೆ ಕಚೇರಿ ಮತ್ತು ಸಂಸ್ಥೆಗಳಲ್ಲಿ ವೈದ್ಯರು, ಅಧಿಕಾರಿಗಳು ಮತ್ತು ಸಿಬ್ಬಂದಿ ಕರ್ತವ್ಯದ ವೇಳೆಯಲ್ಲಿ ಹಾಜರಿಲ್ಲದಿರುವ ಬಗ್ಗೆ ಸಾರ್ವಜನಿಕರು ಹಾಗೂ ಚುನಾಯಿತ ಪ್ರತಿನಿಧಿಗಳಿಂದ ದೂರುಗಳು ಬಂದ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ನಿಜವಾದ ಕಾರಣಗಳಿಲ್ಲದೆ ಕೆಲಸ ಕದಿಯುವುದನ್ನು ಸಹಿಸಲು ಆಗುವುದಿಲ್ಲ. ಅವರ ಕರ್ತವ್ಯಲೋಪದಿಂದ ಆರೋಗ್ಯ ಸೇವೆಯಲ್ಲಿ ವ್ಯತ್ಯಯ ಆಗುತ್ತದೆ. ಹೀಗಾಗಿ ಕರ್ತವ್ಯದ ವೇಳೆಯಲ್ಲಿ ಹಾಜರಿಲ್ಲದ ಯಾರೇ ಆಗಲಿ ಅಂತಹವರ ವೇತನ ಕಡಿತಕ್ಕೆ ಸೂಚನೆ ನೀಡಲಾಗಿದೆ. ಇಲಾಖೆ ಅಡಿಯಲ್ಲಿ ಬರುವ ಎಲ್ಲ ಸಂಸ್ಥೆಗಳು ಮತ್ತು ಆಸ್ಪತ್ರೆಗಳಲ್ಲಿ ಪ್ರತಿಯೊಬ್ಬ ಅಧಿಕಾರಿ ಮತ್ತು ಸಿಬ್ಬಂದಿಗೂ ಅವರ "ಆಧಾರ್" ಆಧರಿತ ಬಯೋಮೆಟ್ರಿಕ್ ಹಾಜರಾತಿ (ಎಇಬಿಎಎಸ್) ಕಡ್ಡಾಯಗೊಳಿಸಲಾಗಿದೆ. ಅದನ್ನು ಆಧರಿಸಿಯೇ ಇನ್ನು ಮುಂದೆ ವೇತನ ನೀಡುವಂತೆ ಅಧಿಕೃತ ಆದೇಶ ಹೊರಡಿಸಲಾಗಿದೆ ಎಂದು ವಿವರಿಸಿದರು.

ಕೋವಿಡ್ ಕಾರಣಕ್ಕೆ ಸ್ಥಗಿತಗೊಂಡಿದ್ದ ಬಯೋಮೆಟ್ರಿಕ್ ಹಾಜರಾತಿ ಪದ್ಧತಿಯನ್ನು ಕಳೆದ ಎರಡು ತಿಂಗಳ ಹಿಂದಿನಿಂದಲೇ ಮತ್ತೆ ಕಡ್ಡಾಯಗೊಳಿಸಲಾಗಿದೆ. ಅನೇಕ ಸಭೆಗಳಲ್ಲಿ ಮತ್ತು ಸುತ್ತೋಲೆ ಮೂಲಕವೂ ಈ ಬಗ್ಗೆ ಸೂಚನೆ ನೀಡಲಾಗಿದೆ. ಆದರೂ ಕೆಲ ಅಧಿಕಾರಿಗಳು ಮತ್ತು ಸಿಬ್ಬಂದಿ ತಮ್ಮ ಹಾಜರಾತಿ ದಾಖಲಿಸದಿರುವ ಪ್ರಕರಣಗಳು ಗಮನಕ್ಕೆ ಬಂದಿವೆ. ಇದನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಈಗ ಸ್ಪಷ್ಟ ಎಚ್ಚರಿಕೆ ಜತೆಗೆ ಅಧಿಕೃತ ಆದೇಶ ನೀಡಿದ್ದು, ಅಂತಹ ಪ್ರಕರಣಗಳನ್ನು ಗೈರು ಹಾಜರಿ ಎಂದು ಪರಿಗಣಿಸಿ ವೇತನ ಕಡಿತಗೊಳಿಸಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಇಲಾಖೆಯ ಆಸ್ಪತ್ರೆ, ಸಂಸ್ಥೆ ಮತ್ತು ಕೇಂದ್ರಗಳ ಜವಾಬ್ದಾರಿ ನಿರ್ವಹಿಸುವ ಡಿಡಿಒ (ಸ್ಯಾಲರಿ ಡ್ರಾಯಿಂಗ್ ಆಫೀಸರ್)ಗಳು ಪ್ರತೀ ತಿಂಗಳು ಎಇಬಿಎಎಸ್‌ನಲ್ಲಿ ತಮ್ಮ ವ್ಯಾಪ್ತಿಯ ಎಲ್ಲ ಸಿಬ್ಬಂದಿಗಳ ಹಾಜರಾತಿ ಪರಿಶೀಲಿಸಿ ಅದರ ಅನುಸಾರವೇ ವೇತನ ಪಾವತಿಗೆ ವರದಿ ಸಿದ್ಧಪಡಿಸಿ ಸಂಬಂಧಿಸಿದ ಅಧಿಕಾರಿಗಳ ಮೂಲಕ ಆಯಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗೆ (ಡಿಎಚ್‌ಒ) ಸಲ್ಲಿಸಬೇಕು.

ಅವರು ಅದನ್ನು ಪರಿಶೀಲಿಸಿ ವೇತನ ಬಿಡುಗಡೆ ಮತ್ತು ಕಡಿತಕ್ಕೆ ಸೂಚನೆ ನೀಡಲಿದ್ದಾರೆ. ಡಿಹೆಚ್‌ಒ ಅವರು ಕೈಗೊಂಡ ಕ್ರಮಗಳನ್ನು ಮೇಲಿನ ಹಂತದ ಅಧಿಕಾರಿಗಳು ನಿಯಮಿತವಾಗಿ ಪರಿಶೀಲಿಸಲಿದ್ದಾರೆ ಎಂದು ಸ್ಪಷ್ಟಪಡಿಸಿದರು

ಯಾರೇ ಆಗಲಿ ಶೇ.80ರಷ್ಟು ಹಾಜರಾತಿಗಿಂತ ಕಡಿಮೆ ಇದ್ದಲ್ಲಿ ಅವರ ವೇತನ ತಡೆ ಹಿಡಿಯಲಾಗುತ್ತದೆ. ನಂತರ ಮಾರ್ಗಸೂಚಿ ಅನ್ವಯ ಮುಂದಿನ ಕ್ರಮ ವಹಿಸಲಾಗುವುದು. ಒಂದು ವೇಳೆ ಶೇ.80ರಷ್ಟು ಹಾಜರಾತಿ ಇದ್ದಲ್ಲಿ ವೇತನ ಬಿಡುಗಡೆ ಮಾಡಿ ಉಳಿದ ಶೇ.20 ಹಾಜರಾತಿ ದಾಖಲು ಮಾಡದಿರುವುದಕ್ಕೆ ಕಾರಣ ಕೇಳಿ ನೋಟಿಸ್ ಜಾರಿಗೊಳಿಸಲಾಗುತ್ತದೆ. ಸಿಬ್ಬಂದಿ ನೀಡುವ ಕಾರಣ ನಿಜವಾಗಿದ್ದಲ್ಲಿ ಪ್ರಕರಣ ಮುಕ್ತಾಯಗೊಳಿಸಲಾಗುವುದು. ಒಂದು ವೇಳೆ ಸಬೂಬು ನೀಡಿದರೆ ಅಥವಾ ನೀಡಿರುವ ಮಾಹಿತಿ ಸುಳ್ಳು ಆಗಿದ್ದಲ್ಲಿ ಮುಂದಿನ ತಿಂಗಳ ವೇತನದಲ್ಲಿ ನಿರ್ದಿಷ್ಟಪಡಿಸಿರುವ ಮೊತ್ತವನ್ನು ಕಡಿತಗೊಳಿಸಲಾಗುವುದು ಎಂದರು.

ಒಂದು ವೇಳೆ ಎಇಬಿಎಎಸ್ ಅನುಷ್ಠಾನಗೊಳಿಸದೆ, ಹಾಜರಾತಿ ಪರಿಶೀಲಿಸದೆ ವೇತನ ಪಾವತಿಸಿದರೆ ಆಯಾ ಡಿಡಿಒಗಳನ್ನೇ ಹೊಣೆ ಮಾಡಿ ಕ್ರಮ ಕೈಗೊಳ್ಳಲಾಗುವುದು. ಇದನ್ನು ಸರಿಯಾಗಿ ಉಸ್ತುವಾರಿ ಮಾಡದಿದ್ದಲ್ಲಿ ಡಿಎಚ್‌ಒಗಳ ವಿರುದ್ಧವೂ ಕ್ರಮ ಕೈಗೊಳ್ಳಲು ವರದಿ ನೀಡುವಂತೆ ಜಿಲ್ಲೆಗಳ ಉಸ್ತುವಾರಿ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದರು.

ಪ್ರತಿ ವಾರ ಇಲಾಖೆ ಪ್ರಗತಿ ಪರಿಶೀಲನೆಯಲ್ಲಿ ಉಳಿದ ಅಂಶಗಳ ಜತೆಗೆ ಹಾಜರಾತಿ ಕಡ್ಡಾಯ ಮತ್ತು ವೇತನಕ್ಕೆ ಸಂಯೋಜನೆಗೊಳಿಸಿರುವ ವ್ಯವಸ್ಥೆಯನ್ನು ಪರಾಮರ್ಶೆ ಮಾಡಲಾಗುತ್ತಿದೆ. ಅನುಷ್ಠಾನದಲ್ಲಿ ಲೋಪ ಕಂಡರೆ ನಿರ್ದಾಕ್ಷಿಣ್ಯ ಕ್ರಮ ನಿಶ್ಚಿತ ಎಂದರು.


ಆರೋಗ್ಯಸೌಧ ಸೇರಿದಂತೆ ಇಲಾಖೆ ವ್ಯಾಪ್ತಿಯ ಎಲ್ಲಾ ಕಚೇರಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯರು, ಸೇವಾ ಸಿಬ್ಬಂದಿ ಮತ್ತು ಕಚೇರಿ ಸಿಬ್ಬಂದಿ ಎಇಬಿಎಎಸ್‌ನಲ್ಲಿ ದಿನಕ್ಕೆ ಮೂರು ಬಾರಿ ತಮ್ಮ ಹಾಜರಾತಿ ದಾಖಲಿಸಲು ಸೂಚಿಸಲಾಗಿದೆ ಕಚೇರಿ, ಆಸ್ಪತ್ರೆಗಳಲ್ಲಿ ಪ್ರತ್ಯೇಕ ಸಮಯ ನಿಗದಿ ಮಾಡಲಾಗಿದೆ ಎಂದು ತಿಳಿಸಿದರು.

ಇಲಾಖೆಯ ಹೊಣೆ ಹೊತ್ತಿರುವ ಆಯುಕ್ತ ರಂದೀಪ್ ಅವರೇ ಬಯೋಮೆಟ್ರಿಕ್ ಹಾಜರಾತಿ ನೋಂದಾಯಿಸಿ ಅನುಸರಿಸುವ ಮೂಲಕ ಉಳಿದ ಹಂತದ ಅಧಿಕಾರಿ ಮತ್ತು ಸಿಬ್ಬಂದಿಗೆ ಮಾದರಿಯಾಗಿದ್ದಾರೆ ಎಂದು ಸಚಿವ ಸುಧಾಕರ್ ಮೆಚ್ಚುಗೆ ವ್ಯಕ್ತಪಡಿಸಿದರು.

ಹುಬ್ಬಳ್ಳಿ ಗಲಭೆ: 'ಮಾಸ್ಟರ್ ಮೈಂಡ್' ಬಂಧನ

● ತನಿಖೆ ನಂತರ ಅನೇಕ ಸಹಚರರು ವಶಕ್ಕೆ
● ವೀಡಿಯೋ ಹೊರ ಬಿಟ್ಟ ಕೆಲ ಗಂಟೆಯಲ್ಲೇ ಸಿಕ್ಕಿಬಿದ್ದ

ಹುಬ್ಬಳ್ಳಿ, ಏ.21–ಹುಬ್ಬಳ್ಳಿ ಹಿಂಸಾಚಾರದ ಮಾಸ್ಟರ್ ಮೈಂಡ್ ವಾಸೀಂ ಪಠಾಣ್ ಸೇರಿದಂತೆ ಏಳು ಮಂದಿ ಸಹಚರರನ್ನು ಹುಬ್ಬಳ್ಳಿ ಪೊಲೀಸರು ಬಂಧಿಸಿದ್ದಾರೆ. ಧಾರ್ಮಿಕ ಮುಖಂಡನೆಂದು ಗುರ್ತಿಸಿಕೊಂಡಿದ್ದ ವಾಸೀಂ ಪಠಾಣ್, ಮುಖಂಡ ಮೊಹಮ್ಮದ್ ಆರೀಫ್, ಇಬ್ಬರು ರೌಡಿಶೀಟರ್‌ಗಳು ಸೇರಿದಂತೆ ಏಳು ಮಂದಿಯನ್ನು ತೀವ್ರ ವಿಚಾರಣೆಗೊಳಪಡಿಸಿದ ಪೊಲೀಸರು, ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ವೈದ್ಯಕೀಯ ಪರೀಕ್ಷೆಗೆಂದು ಕರೆದೊಯ್ದಿದ್ದಾರೆ ಎನ್ನಲಾಗಿದೆ.



ವೈದ್ಯಕೀಯ ಪರೀಕ್ಷೆ ಮುಗಿದ ನಂತರ ಆರೋಪಿಗಳನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಿ ಪೊಲೀಸ್ ಕಸ್ಟಡಿಗೆ ನೀಡುವಂತೆ ಕೋರುವ ಸಾಧ್ಯತೆ ಇದೆ. ಇದುವರೆವಿಗೂ ಹುಬ್ಬಳ್ಳಿ ಹಿಂಸಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಒಟ್ಟು 133 ಮಂದಿಯನ್ನು ಬಂಧಿಸಿದಂತಾಗಿದೆ. ಪ್ರಚೋದನಾಕಾರಿ ವಾಟ್ಸಾಪ್ ಸ್ಟೇಟಸ್‌ನಿಂದ ರೊಚ್ಚಿಗೆದ್ದ ಸಾವಿರಾರು ಮಂದಿ ದಾಂಧಲೆ ನಡೆಸಿ, ಹುಬ್ಬಳ್ಳಿ ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಿ ಪೊಲೀಸ್ ಜೀಪನ್ನು ಉರುಳಿಸಿ ಕಲ್ಲು ತೂರಾಟ ನಡೆಸಿದ್ದರು. ಇದರಿಂದ 15 ಮಂದಿ ಪೊಲೀಸ್ ಸಿಬ್ಬಂದಿ ಸೇರಿದಂತೆ ಹಲವರು ಗಾಯಗೊಂಡಿದ್ದರು.

ಘಟನೆ ಸಂದರ್ಭದಲ್ಲಿ ಪೊಲೀಸ್ ಠಾಣೆ ಮುಂದೆ ನಿಂತಿದ್ದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಾರಿನ ಮೇಲೆ ನಿಂತು ವಸೀಂ ಪಠಾಣ್ ಮತ್ತು ಆತನ ಸಹಚರರು, ಉದ್ರಿಕ್ತ ಗುಂಪನ್ನುದ್ದೇಶಿಸಿ ಪ್ರಚೋದನಾಕಾರಿ ಹೇಳಿಕೆ ನೀಡಿದ್ದರು. ಈ ವೀಡಿಯೋ ಭಾರೀ ವೈರಲ್ ಆಗಿತ್ತು. ಈ ವೇಳೆ ಸ್ಥಳದಲ್ಲಿದ್ದ ವಸೀಂ ಪಠಾಣ್ ಬೆಂಬಲಿಗನೆನ್ನಲಾದ ಮೊಹಮ್ಮದ್ ಆರೀಫ್ ಪೊಲೀಸ್ ಅಧಿಕಾರಿಗಳೊಂದಿಗೆ ವಾಗ್ವಾದ ನಡೆಸಿ, ಹಿಂಸಾಚಾರವನ್ನು ಬೆಂಬಲಿಸಿದ್ದನೆಂದು ಹೇಳಲಾಗಿದೆ. ಘಟನೆಯ ನಂತರ ವಾಸೀಂ ಪಠಾಣ್ ಮತ್ತು ಆತನ ಸಹಚರರು ತಲೆಮರೆಸಿಕೊಂಡು ಮುಂಬೈನ ಅಜ್ಞಾತ ಸ್ಥಳದಲ್ಲಿ ಅಡಗಿದ್ದರು. ಈ ಮಧ್ಯೆ ಇಂದು ಬೆಳಗ್ಗೆ ವಾಸೀಂ ಪಠಾಣ್ ವೀಡಿಯೋವೊಂದನ್ನು ಬಿಡುಗಡೆ ಮಾಡಿ, "ನನಗೆ ಜೀವ ಭಯ ಇರುವುದರಿಂದ ತಲೆ ಮರೆಸಿಕೊಂಡಿದ್ದೇನೆ. ಶೀಘ್ರದಲ್ಲೇ ಪೊಲೀಸರ ಮುಂದೆ ಹಾಜರಾಗಿ ಎಲ್ಲವನ್ನೂ ಹೇಳುತ್ತೇನೆ. ನಾನು ಈ ಪ್ರಕರಣದ ಮಾಸ್ಟರ್ ಮೈಂಡ್ ಅಲ್ಲ" ಎಂಬಿತ್ಯಾದಿ ಹೇಳಿಕೆ ನೀಡಿದ್ದ. ತಕ್ಷಣ ಕಾರ್ಯ ಪ್ರವೃತ್ತರಾದ ಹುಬ್ಬಳ್ಳಿ ಪೊಲೀಸರು ಇದರ ಜಾಡು ಬೆನ್ನತ್ತಿ ವಾಸೀಂ ಪಠಾಣ್ ಮತ್ತು ಆತನ ಸಹಚರರನ್ನು ಮಧ್ಯಾಹ್ನದ ವೇಳೆಗೆ ಹೆಡೆಮುರಿ ಕಟ್ಟಿ ಕರೆತಂದು ಹಳೇ ಹುಬ್ಬಳ್ಳಿ ಪೊಲೀಸ್ ಠಾಣೆಯಲ್ಲಿ ಸಂಜೆಯವರೆಗೂ ವಿಚಾರಣೆ ನಡೆಸಿ ಮಹತ್ವದ ಮಾಹಿತಿ ಸಂಗ್ರಹಿಸಿದರು ಎನ್ನಲಾಗಿದೆ. ಆರೋಪಿ ಹೇಳಿಕೆ ಮತ್ತು ಸುಳಿವಿನ ಮೇರೆಗೆ ಮತ್ತಷ್ಟು ಜನರನ್ನು ಬಂಧಿಸುವ ಸಾಧ್ಯತೆ ಇದೆ ಎಂದು ತಿಳಿದು ಬಂದಿದೆ.

ವಾಸೀಂ ಪಠಾಣ್ ಸಿಕ್ಕಿದ್ದು ಹೇಗೆ?: ವಾಸೀಂ ಪಠಾಣ್ ಗಲಭೆಯ ನಂತರ ಮುಂಬೈಗೆ ಹೋಗಿ ತಲೆ ಮರೆಸಿಕೊಂಡಿದ್ದ. ಅಲ್ಲಿಂದಲೇ ಹುಬ್ಬಳ್ಳಿಯಲ್ಲಿರುವ ತನ್ನ ಆಪ್ತನಿಗೆ ಮೊಬೈಲ್ ಮೂಲಕ ನಿರಂತರವಾಗಿ ಸಂಪರ್ಕದಲ್ಲಿದ್ದುಕೊಂಡು ಹುಬ್ಬಳ್ಳಿಯ ವಿದ್ಯಮಾನಗಳನ್ನು ತಿಳಿದುಕೊಳ್ಳುತ್ತಿದ್ದ. ಈ ವಿಷಯ ತಿಳಿದ ಪೊಲೀಸರು ವಾಸೀಂ ಜೊತೆ ಸಂಪರ್ಕ ಮುಂದುವರೆಸಿಕೊಂಡು ಹೋಗುವಂತೆ ಸೂಚಿಸಿ, ಮೊಬೈಲ್ ಟ್ರ್ಯಾಕ್ ಮೂಲಕ ಆತ ಮುಂಬೈನಲ್ಲಿ ತಲೆ ಮರೆಸಿಕೊಂಡಿರುವುದನ್ನು ಪತ್ತೆ ಹಚ್ಚಿದರು.

ನಂತರ ಶರಣಾಗುವಂತೆ ಇಲ್ಲದಿದ್ದರೆ ಪೊಲೀಸರು ಎನ್‌ಕೌಂಟರ್ ಮಾಡುವುದಾಗಿ ವಾಸೀಂ ಪಠಾಣ್‌ಗೆ ಆಪ್ತನ ಮೂಲಕ ವಿಷಯ ತಲುಪುವಂತೆ ಮಾಡಲಾಯಿತು. ಈ ವಿಷಯ ತಿಳಿಯುತ್ತಿದ್ದಂತೆ ವಾಸೀಂ ಮುಂಬೈನಿಂದ ಬೆಳಗಾವಿಗೆ ಬರುತ್ತಿರುವುದಾಗಿ ತನ್ನ ಆಪ್ತನಿಗೆ ತಿಳಿಸಿದ್ದ. ಅದರಂತೆ ಇಂದು ಬೆಳಗಾವಿಗೆ ಬಂದ ಕೂಡಲೇ ಪೊಲೀಸರು ಆತನನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದ್ದಾರೆ.

ಉತ್ತಮ ಆರೋಗ್ಯಕ್ಕೆ ನಗುವೇ ಔಷಧ

ಅರ್ಕ ಫೌಂಡೇಷನ್ ಮುಖ್ಯಸ್ಥ ಯೋಗಿ ಶ್ರೀನಿವಾಸ ಅರ್ಕ ಅಭಿಮತ



ಮೈಸೂರು, ಏ.21(ಆರ್‌ಕೆ)–ಉತ್ತಮ ಆರೋಗ್ಯಕ್ಕೆ ನಗುವೇ ದಿವ್ಯೌಷಧ ಎಂದು ಅರ್ಕ ಫೌಂಡೇಷನ್ ಮುಖ್ಯಸ್ಥ ಯೋಗಿ ಶ್ರೀನಿವಾಸ ಅರ್ಕ ಅಭಿಪ್ರಾಯಪಟ್ಟಿದ್ದಾರೆ.

ಆಯುಷ್ ಇಲಾಖೆ, ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ, ಮೈಸೂರು ವಿಶ್ವವಿದ್ಯಾನಿಲಯ ಹಾಗೂ ಆರೋಗ್ಯ ಭಾರತೀ ಸಂಸ್ಥೆ ಸಂಯುಕ್ತಾಶ್ರಯದಲ್ಲಿ ಮಾನಸ ಗಂಗೋತ್ರಿಯ ವಿಜ್ಞಾನ ಭವನದಲ್ಲಿ ಇಂದು ಏರ್ಪಡಿಸಿದ್ದ ವಿಶ್ವ ಆರೋಗ್ಯ ದಿನಾಚರಣೆ 'ಸ್ವಾಸ್ಥ್ಯ–2022' ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ನೂರಾರು ಸಮಸ್ಯೆಗಳು ಬಂದರೂ ಮನುಷ್ಯ ಅವುಗಳನ್ನು ನಗು ನಗುತ್ತಲೇ ಎದುರಿಸಬೇಕು. ನಗುತ್ತಾ ಇದ್ದರೆ ಆರೋಗ್ಯವೂ ವೃದ್ಧಿಯಾಗುತ್ತದೆ ಎಂದರು.


ನಮ್ಮ ನಗುವಿನಲ್ಲಿ ಸಕಾರಾತ್ಮಕ ಚಿಂತನೆ ಇದೆ. ನಗುವಿನ ವಾತಾವರಣವಿದ್ದರೆ ನಾವು ಚೆನ್ನಾಗಿರಬಹುದು. ಪರಿಸರ ಉಳಿಸಿ ನಿಸರ್ಗದ ಬಗ್ಗೆ ಕಾಳಜಿ ವಹಿಸಬೇಕು. ಯಾವುದೇ ಕಾಯಿಲೆ ಇರಲಿ, ಭಯಪಡದಿದ್ದರೆ ಅರ್ಧ ರೋಗ ನಿವಾರಣೆಯಾಗುತ್ತದೆ. ನಗು ಎಷ್ಟೋ ಸಮಸ್ಯೆಗೆ ರಾಮಬಾಣದಂತೆ ಕೆಲಸ ಮಾಡುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ ಜಿ.ಹೇಮಂತ ಕುಮಾರ್, ಸರಿಯಾದ ಸಮಯಕ್ಕೆ ಆಹಾರ, ನಿದ್ರೆ ವ್ಯಾಯಾಮ, ಸಕಾರಾತ್ಮಕ ಚಿಂತನೆ, ಪ್ರೀತಿಸುವ ಗುಣವಿದ್ದರೆ ಮಾತ್ರ ಮಾನಸಿಕ ಮತ್ತು ದೈಹಿಕ ಸ್ವಾಸ್ಥ್ಯ ಕಾಪಾಡಿಕೊಳ್ಳಲು ಸಾಧ್ಯ ಆಯುರ್ವೇದ ಪದ್ಧತಿ ಚಿಕಿತ್ಸೆ ಪಡೆಯುವ ಮೂಲಕ ರೋಗಗಳನ್ನು ಗುಣಪಡಿಸಿಕೊಳ್ಳಬೇಕೆಂದು ಸಲಹೆ ನೀಡಿದರು. ಯುವರಾಜ ಕಾಲೇಜು ಪ್ರಾಚಾರ್ಯರಾದ ಪ್ರೊ ಬಿ.ಎನ್. ಯಶೋಧ, ಆಯುರ್ವೇದ ವೈದ್ಯ ಡಾ. ಎ.ಎಸ್.ಚಂದ್ರಶೇಖರ್, ಡಾ. ಲಕ್ಷ್ಮೀನಾರಾಯಣ ಶೆಣೈ, ಡಾ. ಆರ್.ಶೇಖರ್ ನಾಯ್ಕ ಹಾಗೂ ಡಾ. ಎಂ.ಎಸ್.ಮಹೇಶ್ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

'2030ರ ವೇಳೆಗೆ ಭಾರತೀಯ ರೈಲ್ವೆಯ ಹಸಿರೀಕರಣ' ಕುರಿತ ಚಿತ್ರಕಲೆ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ

ಮೈಸೂರು,ಏ.21(ಪಿಎಂ)– ಸ್ಮಾರಕ ಮತ್ತು ತಾಣಗಳ ಅಂತಾರಾಷ್ಟ್ರೀಯ ದಿನಾಚರಣೆ ಅಂಗವಾಗಿ ನೈರುತ್ಯ ರೈಲ್ವೆ ಮೈಸೂರು ವಿಭಾಗದ ವತಿಯಿಂದ ಆಯೋಜಿಸಿದ್ದ '2030ರ ವೇಳೆಗೆ ಭಾರತೀಯ ರೈಲ್ವೆಯ ಹಸಿರೀಕರಣ' ಕುರಿತ ಚಿತ್ರಕಲೆ ಸ್ಪರ್ಧೆಯಲ್ಲಿ 100ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡು ತಮ್ಮ ಸೃಜನಶೀಲತೆ ಪ್ರದರ್ಶಿಸಿದರು.

ಏ.18ರಂದು ಮೈಸೂರು ರೈಲು ವಸ್ತು ಸಂಗ್ರಹಾಲಯದ ಆವರಣದಲ್ಲಿ ಚಿತ್ರಕಲೆ ಸ್ಪರ್ಧೆ ಆಯೋಜಿಸಲಾಗಿತ್ತು. ಇದೇ ಆವರಣದಲ್ಲಿ ಬುಧವಾರ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಮಾಡಲಾಯಿತು.



ಮೈಸೂರು ರೈಲು ವಸ್ತುಸಂಗ್ರಹಾಲಯದ ಆವರಣದಲ್ಲಿ ಬುಧವಾರ ಚಿತ್ರಕಲೆ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಣೆ ಮಾಡಲಾಯಿತು.

ಮೈಸೂರು ವಿಭಾಗದ ಮೂವರು ಹಿರಿಯ ಅಧಿಕಾರಿ ಸದಸ್ಯರನ್ನೊಳಗೊಂಡ ತೀರ್ಪುಗಾರರ ತಂಡ ಚಿತ್ರಕಲೆಗಳನ್ನು ಬಹುಮಾನಕ್ಕೆ ಆಯ್ಕೆ ಮಾಡಿತು. 12ರಿಂದ 15 ವರ್ಷ ವಯೋಮಾನದವರ ವಿಭಾಗದಲ್ಲಿ ತುಮಕೂರಿನ ಸೇಂಟ್ ಮೇರಿಸ್ ಕಾನ್ವೆಂಟ್‌ನ ದೀಪಾಂಜಲಿ ಪ್ರಿನ್ಸಾ, ಮೈಸೂರಿನ ಸೇಂಟ್ ಜೋಸೆಫ್ ಸೆಂಟ್ರಲ್ ಸ್ಕೂಲ್‌ನ ಸಾನ್ವಿ ಹರೀಶ್ ಮತ್ತು ಮೈಸೂರಿನ ಕ್ರೈಸ್ಟ್ ಪಬ್ಲಿಕ್ ಸ್ಕೂಲ್‌ನ ನಿಖಿತಾ ಕ್ರಮವಾಗಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಬಹುಮಾನ ಪಡೆದರು.

ಅಂತೆಯೇ 5ರಿಂದ 11 ವರ್ಷ ವಯೋಮಾನದ ವಿಭಾಗದಲ್ಲಿ ಮೈಸೂರಿನ ಸೇಂಟ್ ಜೋಸೆಫ್ ಸೆಂಟ್ರಲ್ ಶಾಲೆಯ ವೇದಶ್ರೀ ವಾಲಿಂಬೆ, ಅದೇ ಶಾಲೆಯ ಧೃತಿ ವಿ.ಶಾ ಮತ್ತು ಮೈಸೂರಿನ ಪೋದರ್ ಇಂಟರ್‌ನ್ಯಾಷನಲ್ ಶಾಲೆಯ ಪ್ರೇಮ್ ಸಾಗರ್ ಗುಲಾಬ್ ರಾಠೋಡ್ ಕ್ರಮವಾಗಿ ಪ್ರಥಮ, ದ್ವಿತೀಯ ಮತ್ತು ತೃತೀಯ ಬಹುಮಾನ ಪಡೆದರು.

ನೈರುತ್ಯ ರೈಲ್ವೆ ಮೈಸೂರು ವಿಭಾಗದ ಹೆಚ್ಚುವರಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಬಿ.ಶ್ರೀನಿವಾಸುಲು ಬಹುಮಾನ ವಿತರಿಸಿದರು ಎಂದು ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರೂ ಆದ ಸಾರ್ವಜನಿಕ ಸಂಪರ್ಕಾಧಿಕಾರಿ ಡಾ.ಮಂಜುನಾಥ್ ಕನಮಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತುಂಬಲ ಬೆಟ್ಟದಲ್ಲಿ ಪ್ರಾಕೃತಿಕ ಸೊಬಗಿನ ವಿಸ್ಮಯ ಕಂಡು ಪುಳಕಿತಗೊಂಡ ಶಾಲಾ ಮಕ್ಕಳು

ಮೈಸೂರು, ಏ.21(ಪಿಎಂ)– ಪ್ರಾಕೃತಿಕ ಸೊಬಗು ಕಂಡು ವಿಸ್ಮಯಗೊಂಡ ಮಕ್ಕಳು, ಸಂಭ್ರಮದಿಂದ ಕುಣಿದು, ಕುಪ್ಪಳಿಸಿದರು.

ಮೈಸೂರಿನ ಆರ್‌ಟಿ ನಗರದಲ್ಲಿರುವ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಶಾಲೆಯ ವಿದ್ಯಾರ್ಥಿಗಳಿಗಾಗಿ ತಿ.ನರಸೀಪುರ ತಾಲೂಕಿನ ತುಂಬಲ ಗ್ರಾಮದ ಶ್ರೀ ಕಂಬದ ರಾಮದೇವರ ಬೆಟ್ಟದಲ್ಲಿ ಬುಧವಾರ ಏರ್ಪಡಿಸಿದ್ದ ಬೇಸಿಗೆ ಬಂಡಿ ಶಿಬಿರದಲ್ಲಿ ಶಾಲೆಯ ಮಕ್ಕಳಲ್ಲಿ ಈ ಬಗೆಯ ಉತ್ಸಾಹ ಕಂಡು ಬಂದಿತ್ತು.

ಬೆಟ್ಟಕ್ಕೆ ಟ್ರೆಕ್ಕಿಂಗ್ ನಡೆಸಿದ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಕಾಡಿನ ಪರಿಸರ, ಬೆಟ್ಟದ ಮೇಲಿನ ದೇವಸ್ಥಾನ, ಸುತ್ತಮುತ್ತಲಿನ ಪರಿಸರವನ್ನು ನೋಡಿ ಕುಣಿದು ಕುಪ್ಪಳಿಸಿದರು.

ಶಾಲೆಯ ಮುಖ್ಯ ಶಿಕ್ಷಕಿ ಶಿಲ್ಪಾ ಪ್ರಶಾಂತ್ ಮಾತನಾಡಿ, ಮಕ್ಕಳಿಗೆ ಪ್ರಕೃತಿಯ ಜೊತೆಗೆ ಇತಿಹಾಸ ಬಗ್ಗೆ ತಿಳಿಸಿಕೊಡುವ ಸಲುವಾಗಿ ಬೇಸಿಗೆ ಬಂಡಿ ಶಿಬಿರ ಆಯೋಜಿಸಿದ್ದೇವೆ. ಹಳ್ಳಿಯ ಸೊಗಡು, ಗ್ರಾಮೀಣ ಜನತೆ ಬದುಕು ಹಾಗೂ ಜಾನಪದದ ಬಗ್ಗೆ ತಿಳಿಸುವುದು ಶಿಬಿರದ ಮುಖ್ಯ ಉದ್ದೇಶ ಎಂದು ತಿಳಿಸಿದರು.

ಮುಖಂಡರಾದ ತಂಬಲ ನಂದೀಶ್, ಸಿದ್ದರಾಮು, ತಿರುಮಕೂಡಲು ವಾಸು, ಅಕ್ಕೂರು ಸಿದ್ದು, ಚಿಕ್ಕಣ್ಣ, ವೆಂಕಟ ಕೃಷ್ಣನ್, ಶಿಕ್ಷಕರಾದ ಚೇತನ್, ಕೇಶವ್, ಲಿಖಿತ್, ತೀರ್ಥ, ಶ್ವೇತಾ, ರೇಷ್ಮಾ, ವರ್ಷ, ಹೇಮ, ತ್ರಿವೇಣಿ ಮತ್ತಿತರರು ಪಾಲ್ಗೊಂಡಿದ್ದರು.



ಮಂಗಳೂರಿನಲ್ಲಿ ದರ್ಗಾ ನವೀಕರಣದ ವೇಳೆ ಹಿಂದೂ ದೇವಸ್ಥಾನ ಪತ್ತೆ!

ಮಂಗಳೂರು, ಏ.21– ಮಂಗಳೂರಿನಲ್ಲಿ ದರ್ಗಾ ನವೀಕರಣಕ್ಕಾಗಿ ದರ್ಗಾ ಕೆಡವಿದಾಗ ಹಿಂದೂ ಶೈಲಿಯ ದೇವಸ್ಥಾನ ಪತ್ತೆಯಾಗಿದೆ. ಮಂಗಳೂರು ಹೊರ ವಲಯದ ಗಂಜಿಮಠ ಬಳಿಯ ಮಳಲಿ ಬಳಿ ಅಸಯ್ಯಿದ್ ಅಬ್ದುಲ್ಲಾ ಹಿಲ್ ಮದನಿ ದರ್ಗಾದಲ್ಲಿ ಹಿಂದೂ ದೇವಸ್ಥಾನ ಪತ್ತೆಯಾಗಿದೆ. ನವೀಕರಣದ ವೇಳೆ ಅಸಯ್ಯಿದ್ ಅಬ್ದುಲ್ಲಾ ಹಿಲ್ ಮದನಿ ದರ್ಗಾ ಮುಂಭಾಗವನ್ನು ಕೆಡವಲಾಗಿತ್ತು. ಅಸಯ್ಯಿದ್ ಅಬ್ದುಲ್ಲಾ ಹಿಲ್ ಮದನಿ ದರ್ಗಾದ ಹಿಂಭಾಗದಲ್ಲಿ ದೇವಸ್ಥಾನದ ಕಲಶ, ತೋಮರ, ಕಂಬಗಳ ಮಾದರಿ ಪತ್ತೆಯಾಗಿದೆ. ದರ್ಗಾದಲ್ಲಿ ಜೈನ ಅಥವಾ ಹಿಂದೂ ದೇವಸ್ಥಾನ ಇರುವ ಸಾಧ್ಯತೆ ಗೋಚರ ಆಗಿದೆ.





ಮೈಸೂರಿನ ಶ್ರೀ ಚಾಮರಾಜೇಂದ್ರ ಮೃಗಾಲಯದ ಜೀಬ್ರಾ 'ಲಾಸ್ಯ' ಮರಿಗೆ ಜನ್ಮ ನೀಡಿದೆ.

ಅಪಾಯದ ಅರಿವಿದ್ದರೂ ಎಚ್ಚೆತ್ತುಕೊಳ್ಳದ ಪಾಲಿಕೆ

ಮಳೆಗಾಲ ಬರುತ್ತಿದೆ; ಎಚ್ಚರ ವಹಿಸದೇ ಇದ್ದರೆ ಅನಾಹುತ





ಮೈಸೂರು, ಏ.21(ಎಸ್‌ಬಿಡಿ)– ಕೆಲ ತಿಂಗಳ ಹಿಂದೆ ಸುರಿದ ಮಳೆಯಿಂದ ಮೈಸೂರು ನಗರದಲ್ಲಿ ಭಾರೀ ಅವಾಂತರವಾಗಿತ್ತು ಸಾವಿರಾರು ಮನೆಗಳಿಗೆ ನೀರು ನುಗ್ಗಿ ಜನ ಭಾರೀ ಕಷ್ಟ–ನಷ್ಟ ಅನುಭವಿಸಿದ್ದರು. ಅದು ನಗರ ಪಾಲಿಕೆಗೆ ಅರಿವೇ ಇಲ್ಲ.

ರಾಜಮಾರ್ಗದಲ್ಲಿ ಹೂಳು ತುಂಬಿರುವುದು ಹಾಗೂ ಒತ್ತುವರಿಯಾಗಿರುವುದೇ ಮಳೆ ನೀರಿನಿಂದ ಅವಾಂತರ ಸೃಷ್ಟಿಯಾಗಲು ಕಾರಣ ಎಂದು ಅಧಿಕಾರಿಗಳೇ ಹೇಳಿದ್ದರು. ಆರಂಭದಲ್ಲಿ ಅಧಿಕಾರಿಗಳ ಕಾರ್ಯಾಚರಣೆ, ಜೆಸಿಬಿ ಘರ್ಜನೆ ಗಮನಿಸಿದ ಜನ, ಇನ್ನೇನು ಸಮಸ್ಯೆಗಳೆಲ್ಲಾ ಪರಿಹಾರ ಎಂದು ಭಾವಿಸಿದ್ದರು. ಆದರೆ ಅದೆಲ್ಲವೂ ನಾಲ್ಕಾರು ದಿನಗಳಿಗಷ್ಟೇ ಸೀಮಿತವಾಯಿತು. ಕೆಲವೆಡೆ ರಾಜಕಾಲುವೆ ಹೂಳೆತ್ತುವ ಕೆಲಸವಾಯಿತಾದರೂ ಸಂಪೂರ್ಣವಾಗಿ ನಡೆಯಲಿಲ್ಲ. ಸದ್ಯ ಮಳೆಯಾಗುತ್ತಿದ್ದರೂ ಪಾಲಿಕೆ ತಲೆಕೆಡಿಸಿಕೊಂಡಿಲ್ಲ. ರಾಜಕಾಲುವೆಗಳೆಲ್ಲಾ ಹೂಳು ತುಂಬಿ ಗಬ್ಬೆದ್ದು ನಾರುತ್ತಿದ್ದರೂ ತಿರುಗಿ ನೋಡುತ್ತಿಲ್ಲ.

ತ್ಯಾಜ್ಯದ ರಾಶಿ: ನಗರದ ಮಹಾತ್ಮ ಗಾಂಧಿ(ಎಂಜಿ) ರಸ್ತೆಯ ರಾಜಕಾಲುವೆಯನ್ನು ಒಮ್ಮೆ ನೋಡಿದರೆ ಮೈಸೂರಿನ ದುಸ್ಥಿತಿ ಅರಿವಾಗುತ್ತದೆ. ರಸ್ತೆಗೆ ಅಡ್ಡಲಾಗಿ ಹಾದು ಹೋಗಿರುವ ರಾಜಕಾಲುವೆ ತ್ಯಾಜ್ಯದಿಂದ ತುಂಬಿ ಹೋಗಿದೆ. ರಾಶಿ ಪ್ಲಾಸ್ಟಿಕ್ ಬಿದ್ದಿದೆ. ಇಲ್ಲಿ ತರಕಾರಿ ಮಾರುಕಟ್ಟೆ ಇದೆ. ರಸ್ತೆಯುದ್ದಕ್ಕೂ ಫುಟ್‌ಪಾತ್‌ನಲ್ಲಿ ವ್ಯಾಪಾರ ಮಾಡುತ್ತಾರೆ. ಪರಿಣಾಮ ತರಕಾರಿ ತ್ಯಾಜ್ಯವೂ ರಾಜಕಾಲುವೆಗೆ ಸೇರಿದೆ. ಪ್ಲಾಸ್ಟಿಕ್ ಚೀಲಗಳಿಗೆ ಕಸ ತುಂಬಿ, ಅದನ್ನು ಕಾಲುವೆಗೆ ಬಿಸಾಡಲಾಗಿದೆ. ಹೂಳು, ಗಿಡಗಂಟಿಗಳ ಜೊತೆಗೆ ತ್ಯಾಜ್ಯದ ರಾಶಿ ಸೇರಿರುವುದರಿಂದ ನೀರಿನ ಹರಿವಿಗೆ ಅಡ್ಡಿಯಾಗಿದೆ. ತ್ಯಾಜ್ಯ ಕೊಳೆತು, ದುರ್ವಾಸನೆ ಬೀರುತ್ತಿದೆ. ರಾಜಕಾಲುವೆ ಕೊಳಚೆ ಗುಂಡಿಯಾಗಿ ಮಾರ್ಪಟ್ಟಿದೆ.

ರಸ್ತೆಗೂ ಅಪಾಯ: ರಾಜಕಾಲುವೆಯಲ್ಲಿ ಬಿದ್ದಿರುವ ತ್ಯಾಜ್ಯವನ್ನು ಹೊರತೆಗೆದು, ಹೂಳೆತ್ತಿ ಸ್ವಚ್ಛಗೊಳಿಸದಿದ್ದರೆ ಮಳೆ ಬಂದಾಗ ಅಪಾಯವಂತೂ ಕಟ್ಟಿಟ್ಟ ಬುತ್ತಿ ರಾಜಕಾಲುವೆ ರಸ್ತೆಗೆ ಅಡ್ಡಲಾಗಿರುವುದರಿಂದ ನೀರಿನ ಪ್ರಮಾಣ ಹೆಚ್ಚಾಗಿ ವಾಹನ ಓಡಾಟಕ್ಕಿರುವ ಸೇತುವೆಗೂ ಹಾನಿಯಾಗಬಹುದು. ಈ ರಸ್ತೆ ಸಂಪರ್ಕವೇ ಕಡಿತಗೊಳ್ಳಬಹುದು. ಆ ಸಂದರ್ಭದಲ್ಲಿ ವಾಹನ ಸಂಚಾರವಿದ್ದರೆ ಪ್ರಾಣಾಪಾಯ ಸಂಭವಿಸುವ ಸಾಧ್ಯತೆಯೂ ಇದೆ. ಮಳೆ ಬಂದಾಗ ತಗ್ಗು ಪ್ರದೇಶಗಳಿಗೆ ನೀರು ತುಂಬುತ್ತದೆ, ಕೆಲ ಗಂಟೆಗಳ ಬಳಿಕ ಕಡಿಮೆಯಾಗುತ್ತದೆ ಎಂದು ತಿಳಿದಿರುವ ಅಧಿಕಾರಿಗಳಿಗೆ ಸಂಭವಿಸಬಹುದಾದ ಅಪಾಯಗಳ ಬಗ್ಗೆಯೂ ಅರಿವಿರಬೇಕು. ಘಟನೆ ಬಳಿಕ ಅದಕ್ಕೆ ಕಾರಣ ಹುಡುಕಿ, ಪರಿಹಾರ ಕ್ರಮ ಕೈಗೊಳ್ಳುವುದಕ್ಕಿಂತ ಮುಂಜಾಗ್ರತೆ ವಹಿಸುವುದು ಬಹಳ ಮುಖ್ಯ.

ಹಿಂದಿನದ್ದು ಮರೆತಿದ್ದಾರೆ: ಕೆಲ ತಿಂಗಳ ಹಿಂದೆ ಜೋರು ಮಳೆಯಿಂದ ರಾಜಕಾಲುವೆಗಳು ತುಂಬಿ ಹರಿದಿದ್ದವು, ಒಳಚರಂಡಿ ಒತ್ತಡ ಹೆಚ್ಚಾಗಿ ಮ್ಯಾನ್‌ಹೋಲ್‌ಗಳು ಉಕ್ಕಿದ್ದವು. ಬೋಗಾದಿ ಕೆರೆ ಕೋಡಿ ಒಡೆದು ಅವಾಂತರ ಸೃಷ್ಟಿಯಾಗಿತ್ತು. ತಗ್ಗು ಪ್ರದೇಶಗಳೆಲ್ಲಾ ಜಲಾವೃತವಾಗಿದ್ದವು. ಹಲವು ಬಡಾವಣೆಗಳು ಜಲಾವೃತವಾಗಿ ಸಾವಿರಾರು ಮನೆಗಳಿಗೆ ನೀರು ತುಂಬಿತ್ತು. ವಾಹನಗಳು, ಗೃಹೋಪಯೋಗಿ ವಸ್ತುಗಳು ಸೇರಿ ಸಾರ್ವಜನಿಕರ ಅಪಾರ ಮೌಲ್ಯದ ವಸ್ತುಗಳು ಹಾಳಾಗಿದ್ದವು. ನಂತರ ಪಾಲಿಕೆಯಿಂದ ಸಮೀಕ್ಷೆ ಮಾಡಿ, ನಷ್ಟವಾದವರಿಗೆ ಒಂದಿಷ್ಟು ಪರಿಹಾರ ಕಲ್ಪಿಸುವ ಪ್ರಯತ್ನ ಮಾಡಿದರು. ಅಲ್ಲಲ್ಲಿ ಮಳೆ ನೀರು ಚರಂಡಿ ಹಾಗೂ ರಾಜಕಾಲುವೆ ಸ್ವಚ್ಛಗೊಳಿಸುವ ಪ್ರಯತ್ನ ಮಾಡಿದರಾದರೂ ಅದು ಮುಂದುವರೆಯಲಿಲ್ಲ. ಐದಾರು ತಿಂಗಳ ಹಿಂದಿನ ಘಟನೆಗಳನ್ನು ನಗರ ಪಾಲಿಕೆ ಮರೆತು ನಿದ್ದೆಗೆ ಜಾರಿದ್ದು, ಮತ್ತೆ ಜೋರು ಮಳೆ ಬಂದಾಗ ಎಚ್ಚರವಾಗಬಹುದು.

ಎಲ್ಲೂ ಸ್ವಚ್ಛವಾಗಿಲ್ಲ: ಎಂಜಿ ರಸ್ತೆ ಮಾತ್ರವಲ್ಲ, ಇಂದಿರಾನಗರ, ಅಗ್ರಹಾರ ಸೇರಿದಂತೆ ಬಹುತೇಕ ಕಡೆ ರಾಜಕಾಲುವೆ ದುಸ್ಥಿತಿಯಲ್ಲಿವೆ. ಗಿಡ ಗಂಟಿಗಳು ಆಳೆತ್ತರಕ್ಕೆ ಬೆಳೆದಿವೆ. ಪ್ಲಾಸ್ಟಿಕ್, ಬಟ್ಟೆ, ಕಟ್ಟಡ ತ್ಯಾಜ್ಯ ಹೀಗೆ ಎಲ್ಲಾ ರೀತಿಯ ತ್ಯಾಜ್ಯವೂ ರಾಜಕಾಲುವೆ ಸೇರಿದೆ. ಮೊದಲೇ ಹೂಳು ತುಂಬಿದ್ದ ರಾಜಕಾಲುವೆ ಮತ್ತಷ್ಟು ದುಸ್ಥಿತಿ ತಲುಪಿದೆ. ರಸ್ತೆಗಳಿಂದ ಮಳೆ ನೀರು ಚರಂಡಿಗೆ ನೀರು ಹರಿಯಲು ಕಲ್ಪಿಸಿರುವ ಸ್ಥಳವನ್ನೂ ಸ್ವಚ್ಛಗೊಳಿಸಿಲ್ಲ ಬಡಾವಣೆಗಳಲ್ಲಿರುವ ಮಳೆ ನೀರು ಚರಂಡಿಗಳಲ್ಲೂ ಹೂಳೆತ್ತಿಲ್ಲ. ಮತ್ತೆ ಜೋರು ಮಳೆ ಬಂದರೆ ಊಹಿಸಲಾರದಷ್ಟು ಅವಾಂತರ ಉಂಟಾಗುತ್ತದೆ. ಆಡಳಿತ ವ್ಯವಸ್ಥೆಯ ನಿರ್ಲಕ್ಷ್ಯಕ್ಕೆ ಸಾರ್ವಜನಿಕರು ಕಷ್ಟ–ನಷ್ಟ ಅನುಭವಿಸಬೇಕಾಗುತ್ತದೆ ಎಂದು ಜನ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಬೃಹತ್ ಮೈಸೂರು' ನಂತರ ಕತೆಯೇನು?

ಮೈಸೂರು ನಗರದ ಸುತ್ತಮುತ್ತಲ ನಗರಸಭೆ, ಪಟ್ಟಣ ಪಂಚಾಯ್ತಿ, ಗ್ರಾಮ ವ್ಯಾಪ್ತಿಯ ಹಲವು ಬಡಾವಣೆ ಹಾಗೂ ಗ್ರಾಮಗಳನ್ನು ನಗರ ಪಾಲಿಕೆ ವ್ಯಾಪ್ತಿಗೆ ತಂದು 'ಬೃಹತ್ ಮೈಸೂರು' ರಚಿಸುವ ಉದ್ದೇಶ ಅತ್ಯಂತ ಮಹತ್ವದ್ದಾಗಿದೆ ನಗರದ ಬೆಳವಣಿಗೆ ವೇಗಕ್ಕೆ ಇದು ಅತ್ಯಂತ ಅವಶ್ಯಕವಾಗಿದ್ದು, ಸಮಗ್ರ ಅಭಿವೃದ್ಧಿಗೆ ಅನುಕೂಲವಾಗುತ್ತದೆ. ಆದರೆ ಈಗಿರುವ ಪ್ರದೇಶದಲ್ಲೇ ಸ್ವಚ್ಛತೆ ನಿರ್ವಹಣೆಗೆ ನಗರ ಪಾಲಿಕೆ ಹೆಣಗಾಡುತ್ತಿದ್ದು, 'ಬೃಹತ್ ಮೈಸೂರು' ನಂತರ ಕತೆಯೇನು?. ಈಗಲಾದರೂ ರಾಜಕಾಲುವೆ, ಮಳೆ ನೀರು ಚರಂಡಿ, ಕೆರೆಗಳ ಹೂಳೆತ್ತಿಸಿ, ಸ್ವಚ್ಛತೆಗೆ ಆದ್ಯತೆ ನೀಡಬೇಕು. ಸಾರ್ವಜನಿಕರ ಕಷ್ಟಕ್ಕೆ ತಕ್ಷಣ ನಗರ ಪಾಲಿಕೆ ಸ್ಪಂದಿಸಿ ನೆರವಾಗುತ್ತದೆ ಎಂಬ ನಂಬಿಕೆಯನ್ನು ಗಟ್ಟಿಗೊಳಿಸಬೇಕು ಎಂದು ಜನ ಅಭಿಪ್ರಾಯಿಸಿದ್ದಾರೆ.

ಸಿವಿಲ್ ಕಾಮಗಾರಿ, ಸಿಗ್ನಲಿಂಗ್ ಕಾರ್ಯದ ಹಿನ್ನೆಲೆ

ಕೆಲ ರೈಲು ಸಂಚಾರದಲ್ಲಿ ವ್ಯತ್ಯಯ

ಮೈಸೂರು, ಏ.21(ಪಿಎಂ)–ನೈರುತ್ಯ ರೈಲ್ವೆಯು ಹುಬ್ಬಳ್ಳಿ ವಿಭಾಗದ ಬೆಳಗಾವಿ ನಿಲ್ದಾಣ, ಮೈಸೂರು ವಿಭಾಗದ ಚಿಕ್ಕಜಾಜೂರು ಮತ್ತು ಹೊಸದುರ್ಗ ನಿಲ್ದಾಣಗಳಲ್ಲಿ ಸಿವಿಲ್ ಕಾಮಗಾರಿ ಮತ್ತು ಸಿಗ್ನಲಿಂಗ್ ಕಾರ್ಯ ಕೈಗೆತ್ತಿಕೊಂಡಿರುವ ಹಿನ್ನೆಲೆಯಲ್ಲಿ ಕೆಲ ರೈಲುಗಳ ಸಂಚಾರದಲ್ಲಿ ವ್ಯತ್ಯಯ ಉಂಟಾಗಲಿದೆ.

ಮೈಸೂರಿನಿಂದ ಬೆಳಗಾವಿಗೆ ವಿಶ್ವಮಾನವ ಎಕ್ಸ್‌ಪ್ರೆಸ್ (ರೈಲು ನಂ.17326) ಸಂಚಾರವನ್ನು ಏ.22ರಿಂದ ಮೇ 4ರವರೆಗೆ ಸಂಪೂರ್ಣ ರದ್ದುಗೊಳಿಸಲಾಗಿದೆ. ಬೆಳಗಾವಿಯಿಂದ ಮೈಸೂರಿಗೆ ವಿಶ್ವಮಾನವ ಎಕ್ಸ್‌ಪ್ರೆಸ್ (ರೈಲು ನಂ.17325) ಸಂಚಾರವನ್ನು ಏ.23ರಿಂದ ಮೇ 5ರವರೆಗೆ ಹಾಗೂ ಹುಬ್ಬಳ್ಳಿಯಿಂದ ಅರಸೀಕೆರೆಗೆ ವಿಶೇಷ ಎಕ್ಸ್‌ಪ್ರೆಸ್ (ರೈಲು ನಂ.07368) ಸಂಚಾರವನ್ನು ಏ.22, 25 ಮತ್ತು 29ರಂದು, ಅರಸೀಕೆರೆಯಿಂದ ಹುಬ್ಬಳ್ಳಿಗೆ ವಿಶೇಷ ಎಕ್ಸ್‌ಪ್ರೆಸ್ (ರೈಲು ನಂ.07367) ಸಂಚಾರವನ್ನು ಏ.23, 26 ಮತ್ತು 30ರಂದು ಸಂಪೂರ್ಣ ರದ್ದುಗೊಳಿಸಲಾಗಿದೆ.

ಬೆಂಗಳೂರಿನಿಂದ ಬೆಳಗಾವಿಗೆ ಧಾರವಾಡದಿಂದ ಬೆಳಗಾವಿಯ ನಡುವೆ ಏ.27ರಿಂದ ಮೇ 3ರವರೆಗೆ ಧಾರವಾಡದಲ್ಲಿ ಅಲ್ಪಾವಧಿಗೆ ರೈಲು ನಂ.20653ರ ಪ್ರಯಾಣ ಕೊನೆಗೊಳ್ಳುತ್ತದೆ. ರೈಲು ನಂ.20654ರ ಸಂಚಾರವನ್ನು ಬೆಳಗಾವಿಯಿಂದ ಬೆಂಗಳೂರಿಗೆ ಏ.28ರಿಂದ ಮೇ 4ರವರೆಗೆ ಬೆಳಗಾವಿಯಿಂದ ಧಾರವಾಡದ ನಡುವೆ ಭಾಗಶಃ ರದ್ದುಗೊಳಿಸಲಾಗಿದೆ. ಮತ್ತು ಧಾರವಾಡದಿಂದ ನಿಗದಿತ ಸಮಯದಲ್ಲಿ ಹೊರಡಲಿದೆ.

ಮೈಸೂರಿನಿಂದ ಅಜ್ಮೀರ್ ಎಕ್ಸ್‌ಪ್ರೆಸ್ (ರೈಲು ನಂ.16210) ರೈಲು ಏ.26, 28 ಮತ್ತು ಮೇ 3ರಂದು ಹುಬ್ಬಳ್ಳಿ, ಗದಗ, ಬಾಗಲಕೋಟ, ವಿಜಯಪುರ, ಹೊಟಗಿ, ಸೋಲಾಪುರ ಮತ್ತು ಪುಣೆಯ ಸ್ಕಿಪ್ಪಿಂಗ್ ವಾಣಿಜ್ಯ ನಿಲ್ದಾಣದ ಮೂಲಕ ಸಂಚರಿಸಲಿದೆ.

ಏ.24, 29 ಮತ್ತು ಮೇ 1ರಂದು ಅಜ್ಮೀರ್‌ನಿಂದ ಮೈಸೂರಿಗೆ ಎಕ್ಸ್‌ಪ್ರೆಸ್ (ರೈಲು ನಂ.16209) ಪುಣೆ, ಸೊಲ್ಲಾಪುರ, ಹೊಟಗಿ, ವಿಜಯಪುರ, ಬಾಗಲಕೋಟ, ಗದಗ ಮೂಲಕ ಸಂಚರಿಸಲಿದೆ. ಏ.25 ಮತ್ತು ಮೇ 2ರಂದು ನಿಜಾಮುದ್ದೀನ್‌ನಿಂದ ಮೈಸೂರಿಗೆ ಸ್ವರ್ಣಜಯಂತಿ ಎಕ್ಸ್‌ಪ್ರೆಸ್ (ರೈಲು ನಂ.12782) ಪುಣೆ, ದೌಂಡ್, ಸೊಲ್ಲಾಪುರ, ಹೊಟಗಿ, ಗದಗ ಮತ್ತು ಹುಬ್ಬಳ್ಳಿ ನಿಲ್ದಾಣದ ಮೂಲಕ ಸಂಚರಿಸಲಿದೆ. ಸತಾರಾ, ಕರಡ್, ಸಾಂಗ್ಲಿ, ಮೀರಜ್, ಬೆಳಗಾವಿ, ಲೋಂಡಾ ಮತ್ತು ಧಾರವಾಡದಲ್ಲಿ ನಿಲುಗಡೆ ಇರಲಿದೆ.

ಕುಮಾರ್ ನಿಧನ



ಮೈಸೂರು: ಮೈಸೂರಿನ ಶ್ರೀ ಮಹದೇಶ್ವರ ಟ್ರಾನ್ಸ್‌ಪೋರ್ಟ್ ಮಾಲೀಕ ಕುಮಾರ್ ಗುರುವಾರ ನಿಧನರಾಗಿದ್ದಾರೆ. ಇವರು ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನೂತನ ಅಧ್ಯಕ್ಷ ರೇವಣ್ಣ ಅವರ ಸಹೋದರ. ಮೃತರ ಅಂತ್ಯಕ್ರಿಯೆ ನಾಳೆ (ಏ.22) ಮಧ್ಯಾಹ್ನ 1 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಕುರುಬ ಸಂಪ್ರದಾಯದಂತೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಬರ್ಮತಿ ಆಶ್ರಮಕ್ಕೆ ಬ್ರಿಟನ್ ಪ್ರಧಾನಿಯ ಮೊದಲ ಭೇಟಿ

ಗಾಂಧಿ ಅಸಾಧಾರಣ ವ್ಯಕ್ತಿ ಎಂದ ಬೋರಿಸ್ ಜಾನ್ಸನ್

ಅಹ್ಮದಾಬಾದ್, ಏ.21– ಭಾರತ ಪ್ರವಾಸ ಕೈಗೊಂಡಿರುವ ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಗುಜರಾತ್‌ನಲ್ಲಿದ್ದು ಸಬರಮತಿ ಆಶ್ರಮಕ್ಕೆ ಭೇಟಿ ನೀಡಿದ್ದಾರೆ.



ಸಬರಮತಿ ಆಶ್ರಮಕ್ಕೆ ಭೇಟಿ ನೀಡಿರುವ ಮೊದಲ ಪ್ರಧಾನಿ ಬೋರಿಸ್ ಜಾನ್ಸನ್ ಆಗಿದ್ದು, "ಜಗತ್ತಿನ ಉತ್ತಮ ಬದಲಾವಣೆಗಾಗಿ ತತ್ವ ಹಾಗೂ ಅಹಿಂಸೆಗಳ ಮಾರ್ಗ ಹಿಡಿದ ಅಸಾಧಾರಣ ವ್ಯಕ್ತಿ" ಎಂದು ಮಹಾತ್ಮ ಗಾಂಧಿಯನ್ನು ಬೋರಿಸ್ ಬಣ್ಣಿಸಿದ್ದಾರೆ. 1947ರ ನಂತರ ಗುಜರಾತ್‌ಗೆ ಭೇಟಿ ನೀಡುತ್ತಿರುವ ಮೊದಲ ಬ್ರಿಟನ್ ಪ್ರಧಾನಿ ಎಂಬ ಹೆಗ್ಗಳಿಕೆಗೂ ಬೋರಿಸ್ ಜಾನ್ಸನ್ ಪಾತ್ರಾಗಿದ್ದಾರೆ. ಈ ಅಸಾಧಾರಣ ವ್ಯಕ್ತಿಯ ಆಶ್ರಮಕ್ಕೆ ಭೇಟಿ ನೀಡುತ್ತಿರುವುದು ಹಾಗೂ ಜಗತ್ತಿನ ಉತ್ತಮ ಬದಲಾವಣೆಗಾಗಿ ತತ್ವ ಹಾಗೂ ಅಹಿಂಸೆಗಳ ಮಾರ್ಗ ಹಿಡಿದಿದ್ದನ್ನು ಅರ್ಥ ಮಾಡಿಕೊಂಡಿದ್ದು ವಿಶೇಷವಾಗಿತ್ತು ಎಂದು ಆಶ್ರಮದ ಪುಸ್ತಕದಲ್ಲಿ ಬರೆದಿದ್ದಾರೆ. ಬ್ರಿಟನ್‌ನ ಆಡಳಿತದಲ್ಲಿರುವವರು ಮಹಾತ್ಮ ಗಾಂಧಿ ಬಗ್ಗೆ ಈ ರೀತಿಯ ಮೆಚ್ಚುಗೆ ವ್ಯಕ್ತಪಡಿಸಿದ್ದು ಅಪರೂಪದ ಘಟನೆಯಾಗಿದೆ.

ಒಂದನೇ ಪುಟದಿಂದ

ಪ್ರಧಾನಿ ನಿರ್ಧಾರಕ್ಕೆ

ಸಭೆಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ, ಆರ್‌ಎಸ್‌ಎಸ್ ನಾಯಕ ದತ್ತಾತ್ರೇಯ ಹೊಸಬಾಳೆ, ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ, ರಾಷ್ಟ್ರೀಯ ಮುಖಂಡ ಅರುಣ್ ಕುಮಾರ್ ಪಾಲ್ಗೊಂಡಿದ್ದರು. ಸರ್ಕಾರ ಮತ್ತು ಪಕ್ಷದ ಸಾಧನೆಯ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಈ ನಾಯಕರು, 2023ಕ್ಕೆ ಮತ್ತೆ ಪಕ್ಷವನ್ನು ರಾಜ್ಯದ ಅಧಿಕಾರಕ್ಕೆ ತರುವ ಹೊಣೆಗಾರಿಕೆಯನ್ನು ದೆಹಲಿ ನಾಯಕರು ವಹಿಸಿಕೊಳ್ಳುವುದು ಉತ್ತಮ ಎಂದು ಅಭಿಪ್ರಾಯಪಟ್ಟಿದ್ದಾರೆ. ಮುಂಬರುವ ಚುನಾವಣೆವರೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನೇ ಮುಂದುವರೆಸಬೇಕೇ? ಇಲ್ಲ ಅವರನ್ನು ಬದಲಾವಣೆ ಮಾಡಬೇಕೇ? ಎಂಬ ವಿಚಾರವನ್ನು ಪ್ರಧಾನಿಯವರ ತೀರ್ಮಾನಕ್ಕೆ ಬಿಡುವುದು ಉಚಿತ ಎಂಬ ನಿರ್ಧಾರಕ್ಕೆ ಬರಲಾಗಿದೆ. ಇದೇ ವೇಳೆ ಬಿಜೆಪಿ ರಾಜ್ಯಾಧ್ಯಕ್ಷ ನಳೀನ್ ಕುಮಾರ್ ಕಟೀಲ್ ಅವರನ್ನು ಬದಲಾವಣೆ ಮಾಡುವುದಕ್ಕೂ ಸಭೆ ಸಮ್ಮತಿಸಿದೆ. ಆದರೆ ಸಿಎಂ ಬೊಮ್ಮಾಯಿ ಬದಲಾವಣೆ ತೀರ್ಮಾನವನ್ನು ಆಧರಿಸಿ ಜಾತಿ ಸಮೀಕರಣದ ಮೇಲೆ ಪಕ್ಷದ ರಾಜ್ಯಾಧ್ಯಕ್ಷರನ್ನು ನೇಮಕ ಮಾಡುವುದು ಉತ್ತಮ ಎಂಬ ಅಭಿಪ್ರಾಯಕ್ಕೆ ಬರಲಾಗಿದೆ. ಒಂದು ವೇಳೆ ಮುಖ್ಯಮಂತ್ರಿಯಾಗಿ ಬೊಮ್ಮಾಯಿ ಅವರೇ ಮುಂದುವರೆದರೆ ಪಕ್ಷದ ರಾಜ್ಯಾಧ್ಯಕ್ಷರಾಗಿ ಒಕ್ಕಲಿಗ ಮುಖಂಡರನ್ನು ತರುವ ಚಿಂತನೆಯೂ ನಡೆದಿದೆ.

ಇತ್ತೀಚಿನ ದಿನಗಳಲ್ಲಿ ಯಾವುದೇ ರಾಜ್ಯದಲ್ಲಿ ಇಂತಹ ಪರಿಸ್ಥಿತಿ ಎದುರಾದರೆ ಸರ್ಕಾರ ಮತ್ತು ಪಕ್ಷದ ತೀರ್ಮಾನವನ್ನು ಪ್ರಧಾನಿ ನಿರ್ಧಾರಕ್ಕೆ ಬಿಡಲಾಗುತ್ತಿದೆ. ಅದೇ ಮಾನದಂಡವನ್ನು ಕರ್ನಾಟಕದ ವಿಷಯದಲ್ಲಿ ಅನುಸರಿಸಲಾಗುತ್ತಿದೆ. ಪ್ರಧಾನಿ ಮೋದಿ ತಮ್ಮದೇ ಮೂಲಗಳಿಂದ ಮಾಹಿತಿಯನ್ನು ಪಡೆದು ಅಂತಿಮ ತೀರ್ಮಾನ ಕೈಗೊಳ್ಳಲಿ ಎಂಬುದು ಈ ನಾಯಕರ ಉದ್ದೇಶವೂ ಆಗಿದೆ.

ಈ ಹಿಂದೆಯೂ ಬಿ.ಎಸ್.ಯಡಿಯೂರಪ್ಪ ಅವರನ್ನು ಬದಲಾವಣೆ ನಿರ್ಧಾರವನ್ನು ಪ್ರಧಾನಿಯವರಿಗೇ ಬಿಡಲಾಗಿತ್ತು. ಪ್ರಧಾನಿ ಮೋದಿ ತಾವು ತೆಗೆದುಕೊಂಡಂತಹ ತೀರ್ಮಾನವನ್ನು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹಾಗೂ ಉನ್ನತ ನಾಯಕರೊಬ್ಬರ ಮೂಲಕ ಸಂದೇಶ ರವಾನಿಸಿದ್ದನ್ನು ಸ್ಮರಿಸಬಹುದು. ಅದರಂತೆ ಈಗಲೂ ಮುಖ್ಯಮಂತ್ರಿ ಬೊಮ್ಮಾಯಿ ಅವರ ಅಳಿವು ಹಾಗೂ ಉಳಿವು ಪ್ರಧಾನಿಯವರ ನಿರ್ಧಾರವನ್ನು ಆಧರಿಸಿದೆ. ಇತ್ತೀಚೆಗೆ ಹೊಸಪೇಟೆಯಲ್ಲಿ ನಡೆದ ಬಿಜೆಪಿ ಕಾರ್ಯಕಾರಿಣಿ ಹಾಗೂ ಕೋರ್‌ಕಮಿಟಿ ಸಭೆಯ ನಂತರ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಕರ್ನಾಟಕದಲ್ಲಿ ನಾಯಕತ್ವ, ಸಂಪುಟ ಪುನರ್ ರಚನೆ ಹಾಗೂ ಪಕ್ಷದ ವಿಚಾರವಾಗಿ ದೆಹಲಿಯಲ್ಲಿ ಸಭೆ ಸೇರಿ ನಿರ್ಧರಿಸಲಾಗುವುದು ಎಂದು ಪ್ರಕಟಿಸಿದ್ದರು. ಇದೇ ವೇಳೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಹ ಇದೇ ಹೇಳಿಕೆಯನ್ನು ನೀಡಿದ್ದರು ಹಾಗೂ ವರಿಷ್ಠರು ಕರೆ ನೀಡಿದಾಗ ದೆಹಲಿಗೆ ತೆರಳುವುದಾಗಿಯೂ ಹೇಳಿದ್ದನ್ನು ಇಲ್ಲಿ ಸ್ಮರಿಸಬಹುದು.

ಆರೋಗ್ಯ, ಶಿಕ್ಷಣ ಉಚಿತ

ಇವುಗಳನ್ನು ಉಚಿತವಾಗಿ ನೀಡಬಹುದು. ನಾವು ಬೇಕೆ, ಇಲ್ಲವೆ ಪರ್ಸೆಂಟೇಜ್ ಸರ್ಕಾರಗಳು ನಿಮಗೆ ಬೇಕೆ ಯೋಚನೆ ಮಾಡಿ ಎಂದು ತೀರ್ಮಾನವನ್ನು ರಾಜ್ಯದ ಜನತೆಗೆ ಬಿಟ್ಟಿದ್ದಾರೆ. ನಗರದ ನ್ಯಾಷನಲ್ ಕಾಲೇಜು ಮೈದಾನದಲ್ಲಿ ರೈತ ಸಂಘ ಮತ್ತು ಹಸಿರು ಸೇನೆ ಆಯೋಜಿಸಿದ್ದ ಬೃಹತ್ ರೈತ ಸಮಾವೇಶದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಜನರ ತೆರಿಗೆ ದುಡ್ಡನ್ನು ಹೊಡೆದುಕೊಳ್ಳುತ್ತಿರುವವರ ಆಡಳಿತ ಕೊನೆಗೊಳಿಸಿ, ಅದೇ ದುಡ್ಡನ್ನು ನಿಮಗೆ ಮರಳಿಸುವ ಆಮ್ ಆದ್ಮಿ ಪಕ್ಷವನ್ನು ಅಧಿಕಾರಕ್ಕೆ ತನ್ನಿ ಎಂದು ಹೇಳಿದರು.

ಕೇಂದ್ರದಲ್ಲಿರುವ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ರಾವಣ ಸರ್ಕಾರ ಎಂದು ಜರಿದ ಅವರು. ಸೀತೆಯನ್ನು ರಾಮನಿಗೆ ಮರಳಿ ಕೊಡಿ ಎಂದು ವಿಭೀಷಣ, ಮಂಡೋದರಿ ಹೇಳಿದರೂ ರಾವಣ ಒಪ್ಪಿರಲಿಲ್ಲ. ಈಗ ಕೇಂದ್ರ ಸರ್ಕಾರವೂ ಸೀತೆ (ಕಳಂಕ ರಹಿತ) ಯನ್ನು ವಾಪಸ್ಸು ಕೊಡಿ ಎಂದರೆ ಕೇಳುತ್ತಿಲ್ಲ. ವಿಪರ್ಯಾಸವೆಂದರೆ, ಈ ದೇಶದಲ್ಲಿ ಶ್ರೀಮಂತರು ತೆರಿಗೆ ಕಟ್ಟುತ್ತಿದ್ದಾರೆ. ಬಡವರು ಉಣ್ಣುತ್ತಿದ್ದಾರೆ ಎಂಬ ಕಲ್ಪನೆಯನ್ನು ಬೇರೂರಿಸಲಾಗಿದೆ.ಆದರೆ ವಾಸ್ತವದಲ್ಲಿ ಬೆಂಕಿಪೊಟ್ಟಣದಿಂದ ಹಿಡಿದು ಪ್ರತಿಯೊಂದು ವಸ್ತುವಿಗೂ ಬಡ ಜನ ತೆರಿಗೆ ಕಟ್ಟುತ್ತಾರೆ. ಆ ತೆರಿಗೆ ದುಡ್ಡನ್ನು ಬಳಸಿ ಇವರು ಶ್ರೀಮಂತರನ್ನು ಶ್ರೀಮಂತರನ್ನಾಗಿ ಮಾಡುತ್ತಾರೆ. ಬಡ–ಮಧ್ಯಮ ವರ್ಗದ ಜನರನ್ನು ತುಳಿಯುತ್ತಾರೆ ಎಂದರು.

ಇವತ್ತು ನಾವು ದೆಹಲಿಯಲ್ಲಿ ಜನರಿಗೆ ಉಚಿತ ವಿದ್ಯುತ್, ಉಚಿತ ಶಿಕ್ಷಣ ನೀಡುತ್ತಿದ್ದೇವೆ. ಕಿಡ್ನಿ ಕಸಿ ಶಸ್ತ್ರ ಚಿಕಿತ್ಸೆಯಿಂದ ಹಿಡಿದು ಎಲ್ಲ ರೀತಿಯ ರೋಗಗಳಿಗೆ ಉಚಿತ ಚಿಕಿತ್ಸೆ ನೀಡುತ್ತಿದ್ದೇವೆ. ಇದಕ್ಕಾಗಿ ನಾವೇನೂ ತುಂಬ ಶ್ರಮಿಸುತ್ತಿಲ್ಲ. ಜನ ಕೊಟ್ಟ ದುಡ್ಡನ್ನು ಅವರಿಗೆ ತಿರುಗಿ ಕೊಡುತ್ತಿದ್ದೇವೆ ಎಂದರು. ಇದೇ ನಿಲುವಿನಿಂದ ನಾವು ಪಂಜಾಬ್ ರಾಜ್ಯಕ್ಕೆ ಹೋಗಿ ನಮಗೆ ಅವಕಾಶ ಕೊಡಿ ಎಂದೆವು. ಅವರು ನಮ್ಮನ್ನು ಒಪ್ಪಿ ಒಳಗೆ ಬಿಟ್ಟುಕೊಂಡರು. ಕರ್ನಾಟಕದಲ್ಲೂ ಮುಂದಿನ ಚುನಾವಣೆಯಲ್ಲಿ ಆಮ್ ಆದ್ಮಿ ಪಕ್ಷಕ್ಕೆ ಬೆಂಬಲ ನೀಡಿ, ನಿಮ್ಮ ದುಡ್ಡನ್ನು ನಿಮಗೆ, ನಿಮ್ಮ ಮಕ್ಕಳಿಗೆ ಖರ್ಚು ಮಾಡುತ್ತೇವೆ ಎಂದರು.

ದೆಹಲಿಯಲ್ಲಿ ಉಚಿತ ಶಿಕ್ಷಣ ನೀಡುತ್ತಿರುವ ಸರ್ಕಾರಿ ಶಾಲೆಗಳು ಇವತ್ತು 99 ಪರ್ಸೆಂಟ್ ಫಲಿತಾಂಶ ನೀಡುತ್ತಿವೆ. ಸರ್ಕಾರಿ ಶಾಲೆಗಳು ಫಲಿತಾಂಶ ತರುವುದಿಲ್ಲ ಎಂಬುದು ಸುಳ್ಳು. ಹಾಗೆ ಫಲಿತಾಂಶ ತರಲು ಭ್ರಷ್ಟರಹಿತ ಸರ್ಕಾರ ಅಸ್ತಿತ್ವದಲ್ಲಿರಬೇಕು ಎಂದರು.

ಇದೇ ಸಂದರ್ಭದಲ್ಲಿ ಮಾತನಾಡಿದ ರೈತ ಸಂಘ, ಹಸಿರು ಸೇನೆಯ ರಾಜ್ಯಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್, ಇನ್ನು ಮುಂದೆ ಕರ್ನಾಟಕದಲ್ಲಿ ಆಮ್ ಆದ್ಮಿ ಪಕ್ಷವೇ ರೈತ ಸಂಘ, ಹಸಿರು ಸೇನೆಯ ಮುಖವಾಗಲಿದೆ ಎಂದು ಘೋಷಿಸಿದರು.

ಕೇಂದ್ರದಲ್ಲಿ ರೈತ ವಿರೋಧಿ ಸರ್ಕಾರ ಇದೆ. ತಿಂಗಳಾನುಗಟ್ಟಲೆ ಕಾಲ ರೈತ ವಿರೋಧಿ ಮಸೂದೆಗಳ ವಿರುದ್ಧ ಹೋರಾಡಿದರೆ ಅವನ್ನು ವಾಪಸ್ ತೆಗೆದುಕೊಳ್ಳುತ್ತೇವೆ ಎನ್ನುತ್ತದೆ. ಆದರೆ ವಾಸ್ತವದಲ್ಲಿ ಅದನ್ನು ಹಿಂತೆಗೆದುಕೊಂಡಿಲ್ಲ ಎಂದು ದೂರಿದರು.

ಈ ಕೃಷಿ ಕಾಯ್ದೆಗಳ ಮೂಲಕ ಇವರು ನಮ್ಮ ಭೂಮಿಯನ್ನು ಕಿತ್ತುಕೊಂಡು ಅಂಬಾನಿ,ಅದಾನಿ ಅವರಂತಹ ಉದ್ಯಮಿಗಳಿಗೆ ಮಾರಾಟ ಮಾಡಲು ಹೊರಟಿದ್ದಾರೆ. ಆ ಮೂಲಕ ನಮ್ಮನ್ನು ಬೀದಿಗೆ ಬೀಳಿಸಲು ಹೊರಟಿದ್ದಾರೆ ಎಂದು ನೇರವಾಗಿ ಆರೋಪಿಸಿದರು. ನಮಗೂ ರಾಜ್ಯದಲ್ಲಿ ಆಮ್ ಆದ್ಮಿ ಪಕ್ಷದ ಸರ್ಕಾರ ಬೇಕು.ಜನರ ತೆರಿಗೆ ದುಡ್ಡನ್ನು ಜನರಿಗೆ ಮರಳಿ ಕೊಡುವ ಸರ್ಕಾರ ಬೇಕು. ಆ ಮೂಲಕ ನಮ್ಮ ಮಕ್ಕಳಿಗೆ ಒಳ್ಳೆಯ ಆರೋಗ್ಯ, ಒಳ್ಳೆಯ ಶಿಕ್ಷಣ ದೊರೆಯುವಂತಾಗಬೇಕು ಎಂದರು.

ಇಂದಿನಿಂದ ದ್ವಿತೀಯ ಪಿಯುಸಿ ಪರೀಕ್ಷೆ

ಜಿಲ್ಲಾ ಖಜಾನೆಯಿಂದ ಪ್ರಶ್ನೆ ಪತ್ರಿಕೆಗಳನ್ನು ಪೊಲೀಸ್ ಬಂದೋಬಸ್ತ್‌ನಲ್ಲಿ ಪರೀಕ್ಷಾ ಕೇಂದ್ರಕ್ಕೆ ತಲುಪಿಸಲು ವ್ಯವಸ್ಥೆ ಮಾಡಲಾಗಿದ್ದು, ಯಾವುದೇ ಅಕ್ರಮಗಳಿಗೆ ಆಸ್ಪದ ನೀಡದಂತೆ ಜಿಲ್ಲಾಡಳಿತ ಅಗತ್ಯ ಕ್ರಮ ವಹಿಸಿದೆ ಎಂದು ಡಿಡಿಪಿಯು ಶ್ರೀನಿವಾಸಮೂರ್ತಿ ತಿಳಿಸಿದ್ದಾರೆ. ಪ್ರತೀ ಕೇಂದ್ರದಲ್ಲಿ ವಿದ್ಯಾರ್ಥಿಗಳಿಗೆ ಥರ್ಮಲ್ ಸ್ಕ್ಯಾನಿಂಗ್ ಮಾಡಿ ಮಾಸ್ಕ್ ಧರಿಸುವುದು, ಸಾಮಾಜಿಕ ಅಂತರ ಕಾಯ್ದುಕೊಳ್ಳುವಂತೆ ಚೀಫ್ ಸೂಪರಿಂಟೆಂಡೆಂಟ್‌ಗಳಿಗೆ ನಿರ್ದೇಶನ ನೀಡಲಾಗಿದೆ. ಒಂದು ವೇಳೆ ನೆಗಡಿ, ಜ್ವರದ ಲಕ್ಷಣ ಕಂಡು ಬಂದಲ್ಲಿ ಅವರಿಗೆ ಪ್ರತ್ಯೇಕ ಕೊಠಡಿಯಲ್ಲಿ ಪರೀಕ್ಷೆ ಬರೆಯಲು ಅನುಕೂಲ ಮಾಡಲಾಗಿದೆ ಎಂದರು. ಇಂದು ತಾವು ಹಲವು ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಪೂರ್ವ ಸಿದ್ಧತೆಗಳನ್ನು ಪರಿಶೀಲಿಸಿದ್ದು, ಎಲ್ಲೆಡೆ ಸಂಪೂರ್ಣ ಸಿದ್ಧತೆ ಮಾಡಲಾಗಿದೆ. ಸ್ಥಳದಲ್ಲಿ ಕುಡಿಯುವ ನೀರು, ಮಾಹಿತಿ ಫಲಕವನ್ನು ಹಾಕಿ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಲಾಗಿದೆ ಎಂದು ತಿಳಿಸಿದ್ದಾರೆ.



ಬಿಜೆಪಿ ಅಧಿಕಾರಕ್ಕೆ ಬರಲು ಸಿದ್ದರಾಮಯ್ಯ ಕಾರಣ

ಮೈಸೂರಲ್ಲಿ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಪುನರುಚ್ಚಾರ

● ಹುಬ್ಬಳ್ಳಿಯಲ್ಲಿ ಗಲಾಟೆ ಮಾಡಿದವರ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಿ ● ಬಿಜೆಪಿ ಸರ್ಕಾರಕ್ಕೆ ನಾನು ಸರ್ಟಿಫಿಕೇಟ್ ಕೊಟ್ಟಿದ್ದೀನಾ? ● ನನ್ನನ್ನು ಜೈಲಿಗಟ್ಟಲು ಸಿದ್ದರಾಮಯ್ಯ ಯತ್ನಿಸಿದ್ದರು

ಮೈಸೂರು, ಏ.21(ಆರ್‌ಕೆಬಿ)– ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರಲು ವಿಪಕ್ಷ ನಾಯಕ ಸಿದ್ದರಾಮಯ್ಯನವರೇ ಕಾರಣ ಎಂದು ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಇಂದಿಲ್ಲಿ ಪುನರುಚ್ಚರಿಸಿದರು.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಮಾತೆತ್ತಿದ್ದರೆ ಶಾಸಕರನ್ನು ಸರಿಯಾಗಿ ನೋಡಿಕೊಳ್ಳಲಿಲ್ಲ ಎನ್ನುತ್ತಾರೆ. ಭ್ರಷ್ಟಾಚಾರದ ಬಗ್ಗೆ ಸುಳ್ಳಿನ ಸರಮಾಲೆಯನ್ನೇ ಕಟ್ಟುತ್ತಾರೆ. ಅರ್ಕಾವತಿ ಡೀಲ್ ಏನಾಯ್ತು? ಎಂದು ಪ್ರಶ್ನಿಸಿದರಲ್ಲದೆ, 2008ರಲ್ಲಿ ಮುಖ್ಯಮಂತ್ರಿ ಜೊತೆಗೆ ಒಟ್ಟಿಗೆ ಮಾತನಾಡಿಕೊಂಡು ಬಂದಾಗ, ಅವರು ಏನು ಮಾತನಾಡಿದರು? ಹಾಗಾದರೆ, ಆಗ ಸಿದ್ದರಾಮಯ್ಯ ಬಿಜೆಪಿ ಟೀಂ ಆಗಿರಲಿಲ್ಲವೇ ಎಂದು ವಾಗ್ದಾಳಿ ನಡೆಸಿದರು.

ರಾಜ್ಯ ಬಿಜೆಪಿ ಸರ್ಕಾರ ಸಮಸ್ಯೆಗಳಿಗೆ ಪರಿಹಾರ ನೀಡಲಾಗದ ಅಸಮರ್ಥ ಸರ್ಕಾರ ಎಂದು ಜರಿದ ಅವರು, ಎಲ್ಲವನ್ನೂ ಬರೀ ಬಾಯಿ ಮಾತಿನಲ್ಲಿ ಹೇಳುವ ಮುಖ್ಯಮಂತ್ರಿ ಬೊಮ್ಮಾಯಿ, ದೆಹಲಿ ಆರ್‌ಎಸ್‌ಎಸ್ ಮುಖಂಡರಿಗೆ ತೋರಿಸುವುದಲ್ಲ. ಯಾರನ್ನೋ ಮೆಚ್ಚಿಸುವ ಮುಖ್ಯಮಂತ್ರಿ ಅಲ್ಲ. ಜನರನ್ನು ಮೆಚ್ಚಿಸಲು ಅಧಿಕಾರ ನಡೆಸಿ ಎಂದು ಬೊಮ್ಮಾಯಿ ವಿರುದ್ಧ ಕಿಡಿಕಾರಿದರು.

ನನಗೆ ಚುನಾವಣೆ ಮುಖ್ಯವಲ್ಲ: ಹುಬ್ಬಳ್ಳಿ ಗಲಭೆ ಬಗ್ಗೆ ಪ್ರತಿಕ್ರಿಯಿಸಿದ ಅವರು, ಗಲಭೆ ಮಾಡಿದವರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಿ. ಗಲಭೆಕೋರರ ಮನೆಯನ್ನು ಬುಲ್ಡೋಜರ್ ಕಾರ್ಯಾಚರಣೆ ಮಾಡಿದರೆ ಲಾಭವಿಲ್ಲ. ಸಂಪತ್ತು ಲೂಟಿ, ಬೆಂಕಿ ಹಚ್ಚುವವರ ವಿರುದ್ಧ ಕಾರ್ಯಾಚರಣೆ ನಡೆಸಿ ಎಂದು ಒತ್ತಾಯಿಸಿದರು.

ಬಿಜೆಪಿ ಸರ್ಕಾರಕ್ಕೆ ನಾನು ಸರ್ಟಿಫಿಕೇಟ್ ಕೊಟ್ಟಿದ್ದೀನಾ?: ಬಿಜೆಪಿ ವಿರುದ್ಧ ಎಚ್.ಡಿ.ಕೆ ಸಾಫ್ಟ್ ಕಾರ್ನರ್ ಎಂಬ ವಿಚಾರಕ್ಕೆ ಸಂಬಂಧಿಸಿದಂತೆ ಹೇಳಿಕೆ ನೀಡಿದ ಕುಮಾರಸ್ವಾಮಿ, ನಿಮ್ಮ ನಾಲಿಗೆಯಲ್ಲಿ ಮೂಳೆ ಇದೆಯಾ? 10 ನಿಮಿಷದಲ್ಲಿ ಸತ್ಯವನ್ನು ಜನರ ಮುಂದಿಡಬಹುದು. ಬಿಜೆಪಿ ಸರ್ಕಾರಕ್ಕೆ ನಾನೇನು ಸರ್ಟಿಫಿಕೇಟ್ ನೀಡಿದ್ದೇನೆಯೇ? ನಾನು ದಾಖಲೆ ಇಟ್ಟುಕೊಂಡು ಮಾತನಾಡುವವನು. ನನ್ನ ಹೋರಾಟದಿಂದ ಯಡಿಯೂರಪ್ಪ ಬಿಜೆಪಿ ಬಿಟ್ಟರು. ಬಿಎಸ್‌ವೈ ಬಿಜೆಪಿ ಬಿಟ್ಟ ಲಾಭದಿಂದ ಸಿದ್ದರಾಮಯ್ಯ ಮುಖ್ಯಮಂತ್ರಿ ಆದರು. ಸಂತೆ ಭಾಷಣ ಮಾಡಿ ಅವರು ಮುಖ್ಯಮಂತ್ರಿ ಆದರು ಎಂದು ಟೀಕಿಸಿದರು.

ಕಾಂಗ್ರೆಸ್‌ನವರದ್ದು ವೈಯಕ್ತಿಕ ಹೋರಾಟ: ಈಶ್ವರಪ್ಪ ಸಾವಿಗೆ ನೇರ ಕಾರಣ ಅನ್ನೋ ದಾಖಲೆ ಕೊಟ್ಟು ಒತ್ತಾಯಿಸಿ, ಬೆಳಗಾವಿಯ ಕಲ್ಲಪ್ಪ ಹಂಡಿಭಾಗ್ ಮೃತಪಟ್ಟಾಗ ನಾನು ಆತನ ಪರ ಹೋರಾಟ ಮಾಡಿದೆ. ಆಗ ನಾನು ರಾಜಕೀಯ ಮಾಡಲಿಲ್ಲ. ಅದು ಸಿದ್ದರಾಮಯ್ಯ ಸರ್ಕಾರದ ವೈಫಲ್ಯ ವಲ್ಲವೇ? ಎಂದು ಪ್ರಶ್ನಿಸಿದರು.

ಡಿವೈಎಸ್‌ಪಿ ಆತ್ಮಹತ್ಯೆಗೆ ಸಿದ್ದರಾಮಯ್ಯ ಅರೆಸ್ಟ್ ಮಾಡಿ ಎಂದು ಹೇಳಿದ್ದೇವೆಯೇ? ಎಲ್ಲದರಲ್ಲೂ ರಾಜಕಾರಣ ಮಾಡಬಾರದು. ದ್ವೇಷವಿದ್ದರೆ ಅದು ಬೇರೆ. ಒಂದು ವೇಳೆ ಜೈಲಿಗೆ ಹೋಗಿ ಬಂದ ಮೇಲೆ ನಿರಪರಾಧಿ ಅಂದರೆ ಏನು ಮಾಡುವುದು. ದಾಖಲೆ ಇದ್ದರೆ ಜೈಲಿಗೆ ಕಳುಹಿಸಿ, ಕಾಂಗ್ರೆಸ್‌ನವರದ್ದು ವೈಯಕ್ತಿಕವಾದ ಹೋರಾಟ. ಸರ್ಕಾರ ಐದು ನಿಮಿಷದಲ್ಲಿ ಇದನ್ನು ಕ್ಲಿಯರ್ ಮಾಡಬಹುದು. ಪಾರದರ್ಶಕತೆ ಇದ್ದರೆ ಎಲ್ಲವನ್ನೂ ಜನರ ಮುಂದಿಡಬಹುದು ಎಂದು ಕುಮಾರಸ್ವಾಮಿ ಅಭಿಪ್ರಾಯಪಟ್ಟರು.

ನನ್ನನ್ನು ಜೈಲಿಗಟ್ಟಲು ಸಿದ್ದರಾಮಯ್ಯ ಯತ್ನಿಸಿದ್ದರು: ಈಶ್ವರಪ್ಪ ಬದಲು ಕುಮಾರಸ್ವಾಮಿ ಅವರನ್ನು ಬಂಧಿಸಬೇಕಾ? ಎಂಬ ಸಿದ್ದರಾಮಯ್ಯ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ನನ್ನನ್ನು ಜೈಲಿಗೆ ಕಳುಹಿಸಲು ಸಿದ್ದರಾಮಯ್ಯ ಪ್ರಯತ್ನಿಸಿದ್ದರು. ಸಿದ್ದರಾಮಯ್ಯ ಜಾತ್ಯತೀತ ಶಕ್ತಿಗಳನ್ನು ಬೆಳೆಸಿದ್ದಾರೆಯೇ? ನಾನು ಮಾಜಿ ಸಚಿವ ಕೆ.ಎಸ್.ಈಶ್ವರಪ್ಪನವರ ಲಾಯರ್ ಅಲ್ಲ. ಈಶ್ವರಪ್ಪ ಮೇಲೆ ನನಗೆ ಸಾಫ್ಟ್ ಕಾರ್ನರ್ ಇಲ್ಲ ಎಂದು ಸ್ಪಷ್ಟಪಡಿಸಿದರು.

ಸಿದ್ದರಾಮಯ್ಯಗೆ ನಾನಂದ್ರೆ ಭಯ: ಸಿದ್ದರಾಮಯ್ಯ ಅವರಿಗೆ ನನ್ನ ಭಯ ಕಾಡುತ್ತಿದೆಯೇ ಹೊರತು ಬಿಜೆಪಿ ಭಯ ಅಲ್ಲ. ಸಿದ್ದರಾಮಯ್ಯ ನನ್ನನ್ನೇ ಗುರಿ ಇಟ್ಟಿದ್ದಾರೆ. ಅವರಿಗೆ ನಾನೆಲ್ಲಿ ಅಧಿಕಾರಕ್ಕೆ ಬಂದು ಬಿಡುತ್ತೇನೆ ಎಂಬ ಭಯ ಕಾಡುತ್ತಿದೆಯೇ ಹೊರತು ಬಿಜೆಪಿ ಭಯ ಅವರಿಗಿಲ್ಲ ಎಂದು ತಿಳಿಸಿದರು.



ಮೈಸೂರಿನ ಅಕ್ರಮ ಕಟ್ಟಡಗಳ ಮಾಹಿತಿ ನೀಡಿದರೆ ತೆರವುಗೊಳಿಸಲು ಸಿದ್ಧರಿದ್ದೀರಾ?: ಎಚ್‌ಡಿಕೆ ಪ್ರಶ್ನೆ

ಮೈಸೂರು, ಏ.21– ದೆಹಲಿಯಲ್ಲಿ ಅಕ್ರಮವಾಗಿ ನಿರ್ಮಾಣ ಮಾಡಿದ್ದ ಮನೆಗಳನ್ನು ಬುಲ್ಡೋಜರ್‌ನಿಂದ ಧ್ವಂಸ ಮಾಡಿದ ರೀತಿಯಲ್ಲಿಯೇ ಕರ್ನಾಟಕದಲ್ಲೂ ಮಾಡಲು ಆಗ್ರಹ ಕೇಳಿ ಬಂದಿದೆ. ಇದಕ್ಕೆ ಸಂಬಂಧಿಸಿದಂತೆ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಪ್ರತಿಕ್ರಿಯಿಸಿದ್ದು, ಸರ್ಕಾರ ಅಕ್ರಮ ಕಟ್ಟಡಗಳನ್ನು ತೆರವುಗೊಳಿಸಲು ಸಿದ್ಧವಿದ್ದರೆ ಮಾಹಿತಿ ನೀಡಲು ತಾವು ಸಿದ್ಧ ಎಂದರು. ಮೈಸೂರಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಮೈಸೂರಿನಲ್ಲಿರುವ ಅಕ್ರಮ ಕಟ್ಟಡಗಳ ಬಗ್ಗೆ ಮಾಹಿತಿ ನೀಡಿದರೆ ಪ್ರಧಾನಿ ಮೋದಿಯಾಗಲೀ, ಬಿಜೆಪಿ ನಾಯಕರಾಗಲೀ ತೆರವುಗೊಳಿಸಲು ಸಿದ್ದರಿದ್ದಾರೆಯೇ ಎಂದು ಪ್ರಶ್ನಿಸಿದರು. ನೈಸ್ ಸಂಸ್ಥೆಗೆ ರೆಡ್ ಕಾರ್ಪೆಟ್ ಹಾಕಿ ಭೂಮಿ ನೀಡಿರುವ ಸರ್ಕಾರ, ಸರ್ಕಾರದ ಭೂಮಿಯನ್ನು ನೈಸ್ ಕಂಪನಿಗೆ 100 ಕೋಟಿ ಕೊಟ್ಟು ಖರೀದಿ ಮಾಡಿದ್ದಾರೆ ಎಂದು ಆರೋಪಿಸಿದರು.

ಒಬ್ಬರು ಬೆಂಕಿ ಹಚ್ಚಿದರೆ... ಮತ್ತೊಬ್ಬರು ಪೆಟ್ರೋಲ್ ಸುರೀತಾರೆ...

ಬಿಜೆಪಿ, ಕಾಂಗ್ರೆಸ್ ವಿರುದ್ಧ ಎಚ್‌ಡಿಕೆ ವಾಗ್ದಾಳಿ

ಮೈಸೂರು, ಏ.21– ರಾಜ್ಯದಲ್ಲಿ ನಡೆಯುತ್ತಿರುವ ಪ್ರಚೋದನಾತ್ಮಕ ಕೃತ್ಯಗಳಿಗೆ ಎರಡು ಪಕ್ಷಗಳೇ ಕಾರಣ. ಒಬ್ಬರು ಬೆಂಕಿ ಹಚ್ಚುತ್ತಾರೆ, ಮತ್ತೊಬ್ಬರು ಪೆಟ್ರೋಲ್ ಸುರಿಯುತ್ತಾರೆ. ಈ ಬಗ್ಗೆ ಜನರು ಎಚ್ಚೆತ್ತುಕೊಳ್ಳಬೇಕು ಎಂದು ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ರಾಜ್ಯದ ಜನರಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುವುದಾಗಿ ತಿಳಿಸಿದರು.

ರಾಜ್ಯದಲ್ಲಿನ ಆಜಾನ್ ವಿಚಾರದಲ್ಲಿ ಸರ್ಕಾರ ವಿಧಾನಸೌಧದಲ್ಲಿ ಎಲ್ಲಾ ಧಾರ್ಮಿಕ ಮುಖಂಡರ ಸಭೆ ಕರೆದು ಚರ್ಚಿಸಿ, ರಾಜ್ಯದ ಜನರಿಗೆ ಸ್ಪಷ್ಟ ಸಂದೇಶ ನೀಡಬೇಕು. ಇದನ್ನು ಹೀಗೆ ಬೆಳೆಯಲು ಬಿಡಬಾರದು ಎಂದು ಕುಮಾರಸ್ವಾಮಿ ಸರ್ಕಾರಕ್ಕೆ ಸಲಹೆ ನೀಡಿದರು.

ಬಿಜೆಪಿ ಮತ್ತು ಕಾಂಗ್ರೆಸ್ ಈ ಎರಡೂ ಪಕ್ಷಗಳು ಎಲ್ಲಾ ವಿಚಾರವನ್ನು ರಾಜಕೀಯಕ್ಕೆ ಬಳಸಿಕೊಳ್ಳುತ್ತಿವೆ. ಐದು ನಿಮಿಷದಲ್ಲಿ ಬಗೆಹರಿಸಬಹುದಾದ ಸಮಸ್ಯೆಯನ್ನು ಬಗೆಹರಿಸುವ ಪ್ರಯತ್ನ ಮಾಡುತ್ತಿಲ್ಲ. ಈಶ್ವರಪ್ಪ ಅವರನ್ನು ಬಂಧನಕ್ಕೆ ತಕ್ಕ ಸಾಕ್ಷ್ಯಗಳಿದ್ದರೆ ಬಂಧಿಸಲಿ. ನಾನೇನು ಈಶ್ವರಪ್ಪ ಪರ ಮಾತನಾಡಲು ಅವರ ವಕೀಲನಲ್ಲ ಎಂದು ಹೇಳಿದರು.

ಮೈಸೂರಲ್ಲಿ ನಾಳೆ ಹನುಮನ ಭವ್ಯ ಉತ್ಸವ

ಮಹಾರಾಜ ಕಾಲೇಜು ಮೈದಾನದಿಂದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದವರೆಗೆ ಐದು ಹನುಮ ಮೂರ್ತಿಗಳ ಮೆರವಣಿಗೆ


ಮೈಸೂರು, ಏ.21(ಆರ್‌ಕೆಬಿ)– ಬೆಂಗಳೂರಿನ ಕರುನಾಡ ವಿಜಯಸೇನೆಯ ರಾಜ್ಯ ಯುವ ಘಟಕದ ವತಿಯಿಂದ ಏ.23 ರಂದು ಮೈಸೂರಿನಲ್ಲಿ ಹನುಮ ಜಯಂತಿ ಉತ್ಸವ ಆಚರಿಸಲಾಗುತ್ತಿದ್ದು, ಉತ್ಸವವು ಮೈಸೂರಿನ ಮಹಾರಾಜ ಕಾಲೇಜು ಮೈದಾನದಿಂದ ರಾಮಸ್ವಾಮಿ ವೃತ್ತ, ಚಾಮರಾಜ ಜೋಡಿ ರಸ್ತೆ, ಚಾಮರಾಜ ಒಡೆಯರ್ ವೃತ್ತ (ಆರು ಗೇಟು ವೃತ್ತ)ಗಳಲ್ಲಿ ಸಾಗಿ ಅರಮನೆ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಆವರಣ ತಲುಪಲಿದೆ ಎಂದು ವಿಜಯಸೇನೆಯ ರಾಜ್ಯ ಯುವ ಘಟಕದ ಅಧ್ಯಕ್ಷ ಆರ್.ಎಸ್.ಮಹೇಶ್ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹನುಮ ಉತ್ಸವದಲ್ಲಿ ಐದು ರೀತಿಯ ಹನುಮ ಪುತ್ಥಳಿಗಳ ಮೆರವಣಿಗೆ ನಡೆಯಲಿದೆ. ವಿವಿಧ ಜಾನಪದ ಕಲಾ ತಂಡಗಳು ಭಾಗವಹಿಸಲಿದ್ದು, ಸುಮಾರು 5 ಸಾವಿರಕ್ಕೂ ಹೆಚ್ಚು ಹನುಮ ಭಕ್ತರು ಪಾಲ್ಗೊಳ್ಳುವ ನಿರೀಕ್ಷೆಯಿದೆ ಎಂದು ಹೇಳಿದರು.

ಉತ್ಸವ ಕೋಟೆ ಆಂಜನೇಯಸ್ವಾಮಿ ದೇವಾಲಯದ ಆವರಣ ತಲುಪಿದಾಗ ಅಲ್ಲಿ ನಿರ್ಮಿಸಿರುವ ಮಂಟಪದಲ್ಲಿ ಹನುಮನ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಿ, ಪೂಜೆ ಸಲ್ಲಿಸಿ, ಪ್ರಸಾದ ವಿನಿಯೋಗ ಏರ್ಪಡಿಸಲಾಗಿದೆ. ಈ ಕಾರ್ಯಕ್ರಮಕ್ಕೆ ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರನ್ನು ಆಹ್ವಾನಿಸಿದ್ದು, ಅವರ ಭಾಗವಹಿಸುವುದಾಗಿ ತಿಳಿಸಿದ್ದಾರೆ ಎಂದರು.

ತಮ್ಮ ಸಂಘದ ವತಿಯಿಂದ ಇದೇ ಮೊದಲ ಬಾರಿಗೆ ಹನುಮ ಉತ್ಸವ ನಡೆಸಲಾಗುತ್ತಿದ್ದು, ಮೊದಲ ಉತ್ಸವವನ್ನು ಚಾಮುಂಡೇಶ್ವರಿ ಸನ್ನಿಧಿಯಾದ ಮೈಸೂರಿನಿಂದಲೇ ಆರಂಭಿಸಲು ನಿರ್ಧರಿಸಲಾಗಿದೆ. ಮುಂದಿನ ವರ್ಷಗಳಲ್ಲಿ ಪ್ರತೀ ವರ್ಷ ಒಂದೊಂದು ಜಿಲ್ಲೆಯಲ್ಲಿ ಈ ಉತ್ಸವ ಆಚರಿಸುವ ಉದ್ದೇಶ ಹೊಂದಿದ್ದೇವೆ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಗೀತಾ, ಜೀವನ್, ವಿಜಯಕುಮಾರ್, ಸಂಜಯ್ ಇನ್ನಿತರರು ಉಪಸ್ಥಿತರಿದ್ದರು.





ಮೈಸೂರು ನಗರದ ಗಾಂಧಿಚೌಕದಲ್ಲಿರುವ ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕಿನ 117ನೇ ವರ್ಷದ ಸಂಸ್ಥಾಪನಾ ದಿನವನ್ನು ಕಚೇರಿಯ ಆವರಣದಲ್ಲಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಭಾವಚಿತ್ರಕ್ಕೆ ಮಾಜಿ ಅಧ್ಯಕ್ಷ ಕೆ.ಉಮಾಶಂಕರ್ ಪುಷ್ಪನಮನ ಸಲ್ಲಿಸುವ ಮೂಲಕ ಆಚರಿಸಲಾಯಿತು. ನಿರ್ದೇಶಕರಾದ ಎಸ್.ಬಿ.ಎಂ. ಮಂಜು, ಉಪಾಧ್ಯಕ್ಷ ಜೆ.ಯೋಗೇಶ್, ನಿರ್ದೇಶಕರಾದ ಹೆಚ್.ಹರೀಶ್ ಕುಮಾರ್, ಎಸ್.ಸೋಮಣ್ಣ, ಎಸ್.ಅರವಿಂದ, ಎ.ಮಂಚಪ್ಪ, ಪಡುವಾರಹಳ್ಳಿ ಎಂ.ರಾಮಕೃಷ್ಣ, ಸಿ.ರೇವಣ್ಣ, ಆರ್.ರವಿಕುಮಾರ್, ಪಿ.ರಾಜೇಶ್ವರಿ, ಪಿ.ಸವಿತಾ, ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಕೆ.ಹರ್ಷಿತ್‌ಗೌಡ ಸೇರಿದಂತೆ ಬ್ಯಾಂಕಿನ ಸದಸ್ಯರು, ಸಿಬ್ಬಂದಿಯವರಿದ್ದರು.

ಇಂದಿನಿಂದ ಮೂರು ದಿನ ಡಾ.ರಾಜ್ ಸ್ಮರಣೆ ರಂಗೋತ್ಸವ



ಮೈಸೂರು, ಏ.21(ಆರ್‌ಕೆಬಿ)– ಕನ್ನಡದ ಹಿರಿಯ ನಟ ಡಾ.ರಾಜ್‌ಕುಮಾರ್ ಸ್ಮರಣೆ ಅಂಗವಾಗಿ ಮೈಸೂರಿನ ಜಿಪಿಐಇಆರ್ ರಂಗ ತಂಡವು ಏ.22ರಿಂದ ಮೂರು ದಿನ ರಂಗೋತ್ಸವ ಏರ್ಪಡಿಸಿದ್ದು, ಕಲಾಮಂದಿರದ ಕಿರು ರಂಗ ಮಂದಿರದಲ್ಲಿ ಮೂರು ಪ್ರಮುಖ ನಾಟಕಗಳನ್ನು ಪ್ರದರ್ಶಿಸಲಿದೆ ಎಂದು ಜಿಪಿಐಇಆರ್ ತಂಡದ ಜೀವನ್‌ಕುಮಾರ್ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ರಂಗೋತ್ಸವ ಮಾಹಿತಿ ನೀಡಿದ ಅವರು, ಪ್ರತಿದಿನ ಸಂಜೆ 7 ಗಂಟೆಗೆ ನಾಟಕ ಪ್ರದರ್ಶನಗೊಳ್ಳಲಿದೆ. ಮೊದಲ ದಿನ (ಏ.23) ಡಾ.ರಾಜಪ್ಪ ದಳವಾಯಿ ರಚಿಸಿರುವ ಒಂದು ಬೊಗಸೆ ನೀರು' ನಾಟಕ ಪ್ರದರ್ಶನವಿದೆ. ಮೈಸೂರಿನ ರಂಗಸ್ಮೃತಿ ತಂಡ ಅಭಿನಯಿಸಲಿದೆ. ಈ ನಾಟಕದ ವಿನ್ಯಾಸ ಮತ್ತು ನಿರ್ದೇಶಕ ನವೀನ್ ನೇತಾಜಿ ಈ ನಾಟಕದ ವಿನ್ಯಾಸ ಮತ್ತು ನಿರ್ದೇಶನ ಮಾಡಿದ್ದಾರೆ.

ಏ.24ರಂದು ಖುಷ್ವಂತ್‌ಸಿಂಗ್ ಅವರ 'ಟ್ರೈನ್ ಟು ಪಾಕಿಸ್ತಾನ್' ಕಾದಂಬರಿ ಆಧಾರಿತ 'ಕರುಳ ತೆಪ್ಪದ ಮೇಲೆ' ನಾಟಕ ಪ್ರದರ್ಶನವಿದೆ. ಚಿದಾನಂದ ಸಾಲಿ ನಾಟಕಕ್ಕೆ ರೂಪ ನೀಡಿದ್ದು, ಶ್ರೀನಿವಾಸ ಭಟ್ (ಚೀನಿ) ಸಂಗೀತ, ಎಂ.ಪಿ.ಹರಿದತ್ತ ಅರಮನೆನಗರಿ ಅವರು ವಿನ್ಯಾಸ ಮತ್ತು ನಿರ್ದೇಶನ ಮಾಡಿದ್ದಾರೆ.

24ರಂದು ಎಚ್.ಎಸ್.ಶಿವಪ್ರಕಾಶ್ ರಚಿಸಿದ 'ಮಂಟೇಸ್ವಾಮಿ ಕಥಾ ಪ್ರಸಂಗ', ಸಂಗೀತ–ದೇವಾನಂದ ವರಪ್ರಸಾದ್, ಎಂ.ಸಿ.ಅರುಣ್, ನೃತ್ಯ ಸಂಯೋಜನೆ ಮತ್ತು ನಿರ್ದೇಶನ ಮೈಮ್ ರಮೇಶ್.

ಈ ಮೂರು ನಾಟಕಗಳ ರಂಗೋತ್ಸವಕ್ಕೆ ಏ.22ರಂದು ಸಂಜೆ 6 ಗಂಟೆಗೆ ಕಲಾಮಂದಿರದ ಕಿರು ರಂಗ ಮಂದಿರದಲ್ಲಿ ಚಿತ್ರ ನಿರ್ಮಾಪಕ ಎಸ್.ಎ.ಶ್ರೀನಿವಾಸ್ ಚಾಲನೆ ನೀಡಲಿದ್ದಾರೆ. ಹಿರಿಯ ರಂಗಕರ್ಮಿಗಳಾದ ಬಿ.ಎಂ.ರಾಮಚಂದ್ರ, ರಾಜಶೇಖರ ಕದಂಬ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎಚ್.ಚೆನ್ನಪ್ಪ ಅತಿಥಿಯಾಗಿ ಭಾಗವಹಿಸುವರು. ಹಿರಿಯ ರಂಗಕರ್ಮಿ ಮೈಮ್ ರಮೇಶ್ ಅಧ್ಯಕ್ಷತೆ ವಹಿಸುವರು ಎಂದರು. ಸುದ್ದಿಗೋಷ್ಠಿಯಲ್ಲಿ ಜಿಪಿಐಇಆರ್ ತಂಡದ ಹರಿದತ್ತ, ನೇಸರ, ಲಿಖಿತ್‌ರಾಜ್, ಸುಮನ್ ಉಪಸ್ಥಿತರಿದ್ದರು.

ಸರ್ಕಾರಿ ನೌಕರರಿಗೆ 'ಸರ್ವೋತ್ತಮ ಸೇವಾ ಪ್ರಶಸ್ತಿ ಪ್ರದಾನ'

ಸರ್ಕಾರದ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವ ಮೂಲಕ ಜನರ ಕಣ್ಣೀರು ಒರೆಸಬೇಕು: ಶಾಸಕ ನಾಗೇಂದ್ರ

ಮೈಸೂರು, ಏ.21(ಎಂಟಿವೈ)– ಮೈಸೂರಿನ ಕಲಾಮಂದಿರದಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಸರ್ಕಾರಿ ನೌಕರರಿಗೆ ಸರ್ವೋತ್ತಮ ಸೇವಾ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಜಿಲ್ಲಾಡಳಿತ ಹಾಗೂ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಶಾಖೆ ವತಿಯಿಂದ ರಾಜ್ಯ ಸರ್ಕಾರಿ ನೌಕರರ ದಿನಾಚರಣೆ ಕಾರ್ಯಕ್ರಮದಲ್ಲಿ 2021 ಮತ್ತು 2022ನೇ ಸಾಲಿನ ಪ್ರಶಸ್ತಿಯನ್ನು ತಲಾ 10 ನೌಕರರಿಗೆ ಪ್ರದಾನ ಮಾಡಲಾಯಿತು.



2021ನೇ ಸಾಲಿನ ಪ್ರಶಸ್ತಿಯನ್ನು ಆರೋಗ್ಯ ಇಲಾಖೆಯ ಹಿರಿಯ ಶ್ವಾಸಕೋಶ ತಜ್ಞ ಡಾ.ಎಂ. ಸದಾಶಿವಪ್ಪ, ಕಚೇರಿ ಅಧೀಕ್ಷಕ ಜಿ. ಸತೀಶ್ ಬಾಬು, ಹಿರಿಯ ಶುಶ್ರೂಷಾಧಿಕಾರಿ ಹಿಲ್ಡಾ ಡಿಸೋಜ, ನರ್ಸಿಂಗ್ ಸೂಪರಿಂಟೆಂಡೆಂಟ್ ಕೆ.ಬಿ. ಶಾಂತಲಾ, ಬಿ.ಬಿ. ಜಯರಾಮ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಹೆಚ್.ಎಲ್. ಮಂಜುನಾಥ, ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯ ಸಹಾಯಕ ನಿರ್ದೇಶಕಿ ಡಿ.ಎಂ. ರಾಣಿ, ಕಿರಿಯ ತರಬೇತಿ ಅಧಿಕಾರಿ ಜೆ. ರವಿಶಂಕರ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ನರಹರಿ, ನ್ಯಾಯಾಂಗ ಇಲಾಖೆ ಸಿಬ್ಬಂದಿ ಟಿ.ಜಿ. ಶ್ರೀಪತಿ ಬೇಲಿಫ್ ಅವರಿಗೆ ಪ್ರದಾನ ಮಾಡಲಾಯಿತು.

2022ನೇ ಸಾಲಿನ ಪ್ರಶಸ್ತಿಯನ್ನು ಆರೋಗ್ಯ ಇಲಾಖೆಯ ವೈದ್ಯಾಧಿಕಾರಿ ಡಾ.ಹೆಚ್.ಎಂ. ಚಂದ್ರಕಲಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಚನ್ನಪ್ಪ, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಅಧೀಕ್ಷಕಿ ಎ.ಬಿ. ಜಯಲಕ್ಷ್ಮೀಬಾಯಿ, ಕೃಷಿ ಇಲಾಖೆ ಅಧೀಕ್ಷಕ ಜಿ. ವರದರಾಜು, ಕಂದಾಯ ಇಲಾಖೆ ಪ್ರಥಮ ದರ್ಜೆ ಸಹಾಯಕ ಶ್ರೀನಿವಾಸರಾಜ್ ಅರಸ್, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಕಿರಿಯ ತರಬೇತುದಾರ ಜಿ.ಎನ್. ಪ್ರಸನ್ನ, ಪೊಲೀಸ್ ಇಲಾಖೆಯ ಪ್ರಥಮ ದರ್ಜೆ ಸಹಾಯಕ ಜಿ. ಕೃಷ್ಣಪ್ರಸಾದ್, ತೋಟಗಾರಿಕಾ ಇಲಾಖೆ ಸಹಾಯಕ ಎಚ್.ಪಿ. ಕರಿಗೌಡ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಅಧೀಕ್ಷಕ ಎಂ.ಎಲ್. ವಿಶ್ವನಾಥ್, ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯ ದ್ವಿತೀಯ ದರ್ಜೆ ಸಹಾಯಕ ಜುಲ್ಫಿಕರ್ ಕಳ್ಳಿಗುಡಿ ಅವರಿಗೆ ಪ್ರದಾನ ಮಾಡಲಾಯಿತು.

ಸಮಾರಂಭ ಉದ್ಘಾಟಿಸಿದ ಶಾಸಕ ಎಲ್. ನಾಗೇಂದ್ರ ಮಾತನಾಡಿ, ಸಂವಿಧಾನದ ಪ್ರಮುಖ ಮೂರು ಅಂಗಗಳಾದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಸಮರ್ಪಕವಾಗಿ ಕಾರ್ಯನಿರ್ವಹಿಸಿದರೆ ದೇಶ ಸುಭಿಕ್ಷೆಯಿಂದ ಕೂಡಿರುತ್ತದೆ. ಶಾಸಕಾಂಗ ರೂಪಿಸುವ ವಿವಿಧ ಯೋಜನೆಗಳ ಸಮರ್ಪಕ ಅನುಷ್ಠಾನದಲ್ಲಿ ಕಾರ್ಯಾಂಗ ಮಹತ್ವದ ಪಾತ್ರ ನಿರ್ವಹಿಸುತ್ತದೆ. ಸರ್ಕಾರದ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವ ಮೂಲಕ ಕಾರ್ಯಾಂಗ ಜನರ ಕಣ್ಣೀರು ಒರೆಸುವ ಕೆಲಸ ಮಾಡುವಂತೆ ಕೋರಿದರು.

ಸಾಹಿತಿ ಪ್ರೊ. ನೀಲಗಿರಿ ತಳವಾರ್ ಮಾತನಾಡಿ, ಕಡಿಮೆ ವೇತನದ ಕಾರಣಕ್ಕೆ ಹಲವು ದಶಕಗಳ ಹಿಂದೆ ಸರ್ಕಾರಿ ನೌಕರರಾಗಲು ಜನರು ಹಿಂದೇಟು ಹಾಕುತ್ತಿದ್ದರು. ಆದರೆ, ಪ್ರಸ್ತುತ ಆಕರ್ಷಕ ವೇತನ, ಭತ್ಯೆ ಹಾಗೂ ಸೇವಾ ಭದ್ರತೆಯನ್ನು ಸರ್ಕಾರ ನೀಡುತ್ತಿದೆ ಈ ಎಲ್ಲ ಸೌಲಭ್ಯಕ್ಕೆ ಅನುಗುಣವಾಗಿ ಸರ್ಕಾರಿ ನೌಕರರು ತಾವು ಕರ್ತವ್ಯ ನಿರ್ವಹಿಸುತ್ತಿದ್ದೇವೆಯೇ ಎಂದು ಆತ್ಮಾವಲೋಕನ ಮಾಡಿಕೊಳ್ಳುವುದು ಅತ್ಯಂತ ಅವಶ್ಯಕ ಎಂದರು.

ಖಾಸಗಿ ವಲಯದ ನೌಕರರಿಗೆ ಸೇವಾ ಭದ್ರತೆ ಇಲ್ಲ. ಈ ಕಾರಣಕ್ಕೆ ಮಾಲೀಕರು ನೌಕರರ ಮೇಲೆ ಶೋಷಣೆ ಮಾಡುತ್ತಾರೆ. ಸರ್ಕಾರಿ ನೌಕರರಿಗೆ ಸೇವಾ ಭದ್ರತೆ ಇದ್ದು, ಈ ಸೇವಾ ಭದ್ರತೆ ಹಿನ್ನೆಲೆಯಲ್ಲಿ ನಮ್ಮನ್ನು ಯಾರು ಏನೂ ಮಾಡಲು ಸಾಧ್ಯವಿಲ್ಲ ಎಂದು ಕೆಲವು ನೌಕರರು ವ್ಯವಸ್ಥೆಯ ಶೋಷಣೆಗೆ ಮುಂದಾಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಹೀಗಾಗಿ ಸರ್ಕಾರಿ ನೌಕರರ ಬಗ್ಗೆ ಸಾರ್ವಜನಿಕ ವಲಯದಲ್ಲಿ ಆಶಾದಾಯಕ ಅಭಿಪ್ರಾಯಗಳೇನು ಇಲ್ಲ. ಜನರ ಪ್ರೀತಿ, ವಿಶ್ವಾಸ ಗಳಿಸಲು ಸರ್ಕಾರಿ ನೌಕರರು ಶ್ರಮಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್, ಅಪರ ಜಿಲ್ಲಾಧಿಕಾರಿ ಡಾ.ಬಿ.ಎಸ್.ಮಂಜುನಾಥ್ ಸ್ವಾಮಿ, ಜಿ.ಪಂ ಸಿಇಓ ಬಿ.ಆರ್.ಪೂರ್ಣಿಮಾ, ತಹಸೀಲ್ದಾರ್ ಗಿರೀಶ್, ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಗೋವಿಂದರಾಜು, ಉಪಾಧ್ಯಕ್ಷ ಮಾಲಂಗಿ ಸುರೇಶ್, ಪ್ರಧಾನ ಕಾರ್ಯದರ್ಶಿ ಗಿರೀಶ್, ರೇವಣ್ಣ ಹಾಗೂ ಇತರರು ಇದ್ದರು.

ಮೈಸೂರು ಮಿತ್ರ

ಜಿಲ್ಲೆಯಲ್ಲಿ ರಸಗೊಬ್ಬರ ಕೊರತೆ ಇಲ್ಲ: ಬಿ.ಸಿ.ಪಾಟೀಲ್



ಹುಣಸೂರು, ಏ.21(ಕೆಕೆ)– ಜಿಲ್ಲೆಯಲ್ಲಿ 4 ಸಾವಿರ ಮೆಟ್ರಿಕ್ ಟನ್‌ಗೂ ಅಧಿಕ ರಸಗೊಬ್ಬರ ದಾಸ್ತಾನಿದ್ದು, ರಸಗೊಬ್ಬರ ಕೊರತೆ ಇಲ್ಲ ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ್ ತಿಳಿಸಿದರು.

ತಾಲೂಕಿನ ಗೋವಿಂದನಹಳ್ಳಿ ಗ್ರಾಪಂ ವ್ಯಾಪ್ತಿಯ ರಾಮು ಬಡಾವಣೆಯಲ್ಲಿ 80 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ಕೃಷಿ ಇಲಾಖೆ ಉಪನಿರ್ದೇಶಕರ ಕಚೇರಿ ಉದ್ಘಾಟಿಸಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನ ರಸಗೊಬ್ಬರ ಬೇಡಿಕೆ 109 ಲಕ್ಷ ಮೆಟ್ರಿಕ್ ಟನ್ ಇದ್ದು, ಏಪ್ರಿಲ್ ತಿಂಗಳಲ್ಲಿ 13 ಸಾವಿರ ಮೆಟ್ರಿಕ್ ಟನ್ ರಸಗೊಬ್ಬರ ಬೇಡಿಕೆ ಇದೆ. 18 ಸಾವಿರ ಮೆಟ್ರಿಕ್ ಟನ್‌ನಷ್ಟು ಪೂರೈಸಿದ್ದೇವೆ. ಈಗಾಗಲೇ 4085 ಮೆಟ್ರಿಕ್ ಟನ್ ರಸಗೊಬ್ಬರ ಇನ್ನೂ ದಾಸ್ತಾನು ಇದೆ. ವಾಡಿಕೆ ಮಳೆಗಿಂತ ಈ ಬಾರಿ ಹೆಚ್ಚಾಗಿದೆ. (80ಮಿ.ಮಿ.) ಬಿತ್ತನೆಬೀಜ, ಕೀಟನಾಶಕ ಪೂರೈಕೆಯಲ್ಲಿ ವ್ಯತ್ಯಯ ವಾಗದಂತೆ ಕ್ರಮ ವಹಿಸಲಾಗಿದೆ ಎಂದರು.

ಏ.25 ರಿಂದ ರಾಗಿ ಖರೀದಿ ಕೇಂದ್ರ ಪುನಾರಂಭವಾಗುತ್ತಿದ್ದು, ನೋಂದಣಿ ಕಾರ್ಯ ಅಂದಿನಿಂದಲೇ ಆರಂಭಗೊಳ್ಳಲಿದೆ. ಈಗಾಗಲೇ ರಾಜ್ಯ ಸರ್ಕಾರ ಬೆಂಬಲ ಬೆಲೆ ಅಡಿ 2 ಲಕ್ಷ ಮೆಟ್ರಿಕ್ ಟನ್ ರಾಗಿ ಖರೀದಿಸಿದೆ. ರೈತರ ಬೇಡಿಕೆ ಮತ್ತು ಒತ್ತಾಯದ ಮೇರೆಗೆ 1.40 ಲಕ್ಷ ಮೆಟ್ರಿಕ್ ಟನ್ ರಾಗಿ ಖರೀದಿಗೆ ನಿರ್ಧರಿಸಿದೆ ಎಂದರು.

ಮಡಿಕೇರಿ, ಬನ್ನೂರು ಮುಂತಾದ ಕಡೆ ರಸಗೊಬ್ಬರವನ್ನು ಅಕ್ರಮವಾಗಿ ಅಂತರ ರಾಜ್ಯಗಳಿಗೆ ಸಾಗಾಣೆ ಮಾಡುತ್ತಿರುವ ಕುರಿತು ವರದಿಗಳು ಬಂದಿದ್ದು, ಇಲಾಖೆ ಜಾಗೃತದಳ ಈ ಎಲ್ಲಾ ಪ್ರಕರಣಗಳನ್ನು ಪತ್ತೆಹಚ್ಚಿ ತಪ್ಪಿತಸ್ಥರ ವಿರುದ್ಧ ಕ್ರಮವಹಿಸಿದೆ. ಚೆಕ್‌ಪೋಸ್ಟ್‌ಗಳಲ್ಲಿ ಜಾಗೃತದಳ ಕ್ರಿಯಾಶೀಲವಾಗಿ ಅಕ್ರಮಗಳನ್ನು ಪತ್ತೆಹಚ್ಚಿ ಕಾನೂನಿನಡಿ ಕ್ರಮವಹಿಸುತ್ತಿದೆ. ಕೃಷಿ ಇಲಾಖೆಯಿಂದ ರೈತರ ಬೆಳೆ ಹಾಳಾಗದಂತೆ ಕ್ರಮ ವಹಿಸಲು ರಾಜ್ಯದ 13 ಕಡೆ ಕೋಲ್ಡ್ ಸ್ಟೋರೇಜ್ ಸ್ಥಾಪಿಸಲಾಗಿದೆ. ಅಲ್ಲದೇ ರೈತರ ಅನುಕೂಲಕ್ಕಾಗಿ ಎಲ್ಲಾ ರೀತಿಯ ಕ್ರಮವಹಿಸಲಾಗಿದೆ. ವಿದ್ಯಾನಿಧಿ ಯೋಜನೆಯಡಿ ಜಿಲ್ಲೆಯ 58 ಸಾವಿರ ವಿದ್ಯಾರ್ಥಿಗಳು ಪ್ರೋತ್ಸಾಹಧನ ಪಡೆದಿದ್ದಾರೆ. ಪಿಎಂ ಕಿಸಾನ್ ಸಮ್ಮಾನ್ ಯೋಜನೆಯಡಿ ಒಟ್ಟು 54.75 ಕೋಟಿ ರೂ. ರೈತರ ಖಾತೆಗೆ ನೇರವಾಗಿ ಜಮೆಯಾಗಿದೆ. ಇವೆಲ್ಲವೂ ನಮ್ಮ ಸರ್ಕಾರದ ಹೆಮ್ಮೆಯ ಯೋಜನೆಯಾಗಿದೆ ಎಂದರು.

ಶಾಸಕ ಹೆಚ್.ಪಿ.ಮಂಜುನಾಥ್ ಮಾತನಾಡಿ, ರೈತರ ಕಾಳಜಿಯಿಂದ ಕಾರ್ಯಕ್ರಮಗಳ ಅನುಷ್ಠಾನಗೊಳ್ಳಬೇಕಿದೆ. ಕೋವಿಡ್ ನಂತರದ ದಿನಗಳಲ್ಲಿ ರೈತರು ಹೆಚ್ಚು ಸಂಕಷ್ಟಕ್ಕೆ ಒಳಗಾಗಿದ್ದು, ರಾಗಿ ಖರೀದಿ ಕೇಂದ್ರದ ಮರುಸ್ಥಾಪನೆ ಸ್ವಾಗತಾರ್ಹ ಎಂದರು.

ಇದೇ ಸಂದರ್ಭ 2 ಮಹಿಳಾ ಸ್ವಸಹಾಯ ಸಂಘಗಳಿಗೆ ಟ್ರಾಕ್ಟರ್‌ಗಳನ್ನು ಸಚಿವ ಬಿ.ಸಿ.ಪಾಟೀಲ್ ವಿತರಿಸಿದರು. ತಲಾ 5 ಮಂದಿ ರೈತರಿಗೆ ರೋಟಾವೇಟರ್, ಸ್ಪ್ರಿಂಕ್ಲರ್‌ಗಳು ಮತ್ತು ಕಲ್ಟಿವೇಟರ್‌ಗಳನ್ನು ವಿತರಿಸಿದರು. 50 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣಗೊಂಡಿರುವ ಹನಗೋಡು ರೈತ ಸಂಪರ್ಕ ಕೇಂದ್ರದ ನಾಮಫಲಕ ಅನಾವರಣಗೊಳಿಸಿದರು. ಕೃಷಿ ಅಭಿಯಾನದ ರಥಕ್ಕೆ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಗೋವಿಂದನಹಳ್ಳಿ ಗ್ರಾಪಂ ಅಧ್ಯಕ್ಷ ಪ್ರಸನ್ನಕುಮಾರ್, ಉಪಾಧ್ಯಕ್ಷೆ ಸಿರೀನ್ ತಾಜ್, ಕೃಷಿ ಇಲಾಖೆ ನಿರ್ದೇಶಕಿ ನಂದಿನಿ ಕುಮಾರಿ, ಕೃಷಿ ಇಲಾಖೆ ಜೆಡಿ ಮಹಂತೇಶಪ್ಪ, ಉಪ ನಿರ್ದೇಶಕ ಧನಂಜಯ್, ಸಹಾಯಕ ನಿರ್ದೇಶಕ ಜೆ. ವೆಂಕಟೇಶ್, ಸಿಬ್ಬಂದಿ ಮತ್ತು ರೈತರು ಹಾಜರಿದ್ದರು.

ಪಿರಿಯಾಪಟ್ಟಣ ಪುರಸಭೆಗೆ ಮಹೇಶ್ ಅಧ್ಯಕ್ಷ



ಪಿರಿಯಾಪಟ್ಟಣ, ಏ.21(ವೀರೇಶ್)– ಇಲ್ಲಿನ ಪುರಸಭೆ ನೂತನ ಅಧ್ಯಕ್ಷರಾಗಿ ಕೆ.ಮಹೇಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಈ ಹಿಂದೆ ಮೊದಲ ಅವಧಿಗೆ ಅಧ್ಯಕ್ಷರಾಗಿದ್ದ ಮಂಜುನಾಥ್ ಸಿಂಗ್ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಗುರುವಾರ ನಡೆದ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿಯಾಗಿ ಕೆ.ಮಹೇಶ್ ಅವರೊಬ್ಬರೇ ನಾಮಪತ್ರ ಸಲ್ಲಿಸಿದ್ದ ಕಾರಣ ಚುನಾವಣಾಧಿಕಾರಿಯೂ ಆದ ತಹಸೀಲ್ದಾರ್ ಕೆ.ಚಂದ್ರಮೌಳಿ ಅವಿರೋಧ ಆಯ್ಕೆಯನ್ನು ಘೋಷಿಸಿದರು.

ಪುರಸಭೆಯ ಒಟ್ಟು 23 ಸದಸ್ಯರ ಪೈಕಿ ಜೆಡಿಎಸ್‌ನ 14, ಪಕ್ಷೇತರ ಅಭ್ಯರ್ಥಿ ರೇವತಿ, ಶಾಸಕ ಕೆ.ಮಹದೇವ್ ಹಾಜರಿದ್ದರು. ಕಾಂಗ್ರೆಸ್‌ನ ಎಲ್ಲಾ ಸದಸ್ಯರು ಗೈರಾಗಿದ್ದರು.

ನೂತನ ಅಧ್ಯಕ್ಷ ಮಹೇಶ್ ಮಾತನಾಡಿ, ಶಾಸಕರು ಸೇರಿದಂತೆ ಎಲ್ಲಾ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪಟ್ಟಣದ ಅಭಿವೃದ್ಧಿಗೆ ಶ್ರಮಿಸುವುದಾಗಿ ತಿಳಿಸಿದರು. ಈ ವೇಳೆ ಮೈಮುಲ್ ನಿರ್ದೇಶಕ ಪಿ.ಎಂ.ಪ್ರಸನ್ನ, ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯಶೆಟ್ಟಿ, ಪುರಸಭಾಧಿಕಾರಿ ಪ್ರಸನ್ನ, ಉಪಾಧ್ಯಕ್ಷೆ ನಾಗರತ್ನ, ಮಾಜಿ ಅಧ್ಯಕ್ಷ ಮಂಜುನಾಥ್ ಸಿಂಗ್, ಸದಸ್ಯರಾದ ಪಿ.ಎನ್.ವಿನೋದ್, ಶ್ವೇತ, ನಿರಂಜನ್, ಪಿ.ಸಿ.ಕೃಷ್ಣ, ಭಾರತಿ, ಪ್ರಕಾಶ್ ಸಿಂಗ್, ಆಶಾ, ಪುಷ್ಪಾ, ಸುವರ್ಣ ಹಾಜರಿದ್ದು.

ಕಾಡಾನೆ ದಾಳಿ: ಬಾಳೆ ಫಸಲು ನಾಶ

ಮಲ್ಕುಂಡಿ, ಏ.21(ಚನ್ನಪ್ಪ)– ಕಾಡಾನೆ ದಾಳಿಗೆ ಕಟಾವಿಗೆ ಬಂದಿದ್ದ ಬಾಳೆ ಫಸಲು ನಾಶವಾಗಿರುವ ಘಟನೆ ನಂಜನಗೂಡು ತಾಲೂಕಿನ ಈರೇಗೌಡನಹುಂಡಿ ಗ್ರಾಮದಲ್ಲಿ ನಡೆದಿದೆ.



ಗ್ರಾಮದ ಶಾಂತಮ್ಮ ಅವರಿಗೆ ಸೇರಿದ ಬಾಳೆ ಫಸಲು ನಾಶವಾಗಿರುವುದು. ಈಕೆ ತಮ್ಮ 4 ಎಕರೆ ಜಮೀನಿನಲ್ಲಿ ಬಾಳೆ ಬೆಳೆದಿದ್ದು, ಬಾಳೆ ಫಸಲು ಕಟಾವಿಗೆ ಬಂದಿತ್ತು. ಆದರೆ ಜಮೀನಿಗೆ ನುಗ್ಗಿರುವ ಕಾಡಾನೆಗಳು ಬಾಳೆಯನ್ನು ತಿಂದು, ತುಳಿದು ನಾಶಪಡಿಸಿವೆ. ಇದರಿಂದ ಲಕ್ಷಾಂತರ ರೂ. ನಷ್ಟ ಸಂಭವಿಸಿದೆ ಎನ್ನಲಾಗಿದೆ. ಚಿನ್ನಾಭರಣ ಅಡವಿಟ್ಟು ಫಸಲು ಬೆಳೆದಿದ್ದೇವು. ಆದರೆ ಕಾಡಾನೆಗಳು ಬಾಳೆ ಫಸಲನ್ನು ನಾಶಗೊಳಿಸಿವೆ. ಹೀಗಾದರೆ ನಾವು ಮಾಡಿರುವ ಸಾಲ ತೀರಿಸುವುದಾದರೂ ಹೇಗೆ? ಆನೆಗಳು ಬಂದ ವೇಳೆ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಕರೆ ಮಾಡಿದರೆ ಅವರು ಸ್ವೀಕರಿಸುವುದಿಲ್ಲ ಎಂದು ಆರೋಪಿಸಿದ ಶಾಂತಮ್ಮ, ಅರಣ್ಯ ಇಲಾಖೆ ಕಾಡಾನೆ ಹಾವಳಿ ತಪ್ಪಿಸಲು ಸೂಕ್ತ ಕ್ರಮಗೊಳ್ಳಬೇಕು. ಅಲ್ಲದೇ ಸಂಬಂಧಿಸಿದ ಅಧಿಕಾರಿಗಳು ಬೆಳೆ ನಷ್ಟ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ಆರೋಗ್ಯಕ್ಕೆ ಮೊದಲ ಆದ್ಯತೆ ನೀಡಿ



ಹೆಚ್.ಡಿ.ಕೋಟೆ, ಏ.21(ಮಂಜು)– ಸಾರ್ವಜನಿಕರು ಆರೋಗ್ಯಕ್ಕೆ ಮೊದಲ ಆದ್ಯತೆ ನೀಡುವಂತೆ ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿ 75ನೇ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಅಂಗವಾಗಿ ಆಯೋಜಿಸಿದ್ದ ತಾಲೂಕು ಮಟ್ಟದ ಆರೋಗ್ಯ ಮೇಳ ಉದ್ಘಾಟಿಸಿ ಅವರು ಮಾತನಾಡಿದರು.

ಕಾಯಿಲೆಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರ ಆಯೋಜಿಸಿರುವ ಆರೋಗ್ಯ ಮೇಳದಲ್ಲಿ ಹೆಚ್.ಡಿ.ಕೋಟೆ, ಸರಗೂರು ತಾಲೂಕಿನ ಸುಮಾರು 5 ಸಾವಿರಕ್ಕೂ ಹೆಚ್ಚು ಭಾಗವಹಿಸಿ ಎಬಿಆರ್‌ಕೆ ಕಾರ್ಡ್ ಪಡೆದು ತಜ್ಞ ವೈದ್ಯರಿಂದ ತಪಾಸಣೆಗೆ ಒಳಪಟ್ಟು, ಉಚಿತವಾಗಿ ಔಷಧಿ ಪಡೆದು ಈ ಆರೋಗ್ಯ ಮೇಳದ ಸದುಪಯೋಗ ಪಡೆದಿರುವುದು ಹೆಮ್ಮೆಯ ವಿಚಾರ ಎಂದರು.

ತಾಲೂಕಿನ ಅತೀ ಹೆಚ್ಚಾಗಿ ಬಡವರಿದ್ದು, ಇವರೆಲ್ಲಾ ಇಲ್ಲಿನ ಸರ್ಕಾರಿ ಆಸ್ಪತ್ರೆಯನ್ನೇ ಅವಲಂಬಿಸಿದ್ದಾರೆ. ಹೀಗಾಗಿ ಜಿಲ್ಲಾಸ್ಪತ್ರೆಯಲ್ಲಿ ದೊರೆಯುವ ಎಲ್ಲಾ ಸೌಲಭ್ಯಗಳು ತಾಲೂಕು ಆಸ್ಪತ್ರೆಗೂ ಒದಗಿಸಿಕೊಡುವಂತೆ ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಅವರಿಗೆ ಮನವಿ ಮಾಡಿದ್ದು, ಇದಕ್ಕೆ ಸ್ಪಂದಿಸಿರುವ ಅವರು ಲ್ಯಾಬ್, ಸ್ಕ್ಯಾನಿಂಗ್ ಸೆಂಟರ್ ಸೇರಿದಂತೆ ಎಲ್ಲಾ ರೀತಿಯ ಸೌಲಭ್ಯ ಕಲ್ಪಿಸುವುದಾಗಿ ಭರವಸೆ ನೀಡಿದ್ದಾರೆ ಎಂದರು.

ಸರ್ಕಾರಗಳು ಆರೋಗ್ಯ ಕ್ಷೇತ್ರಕ್ಕೆ ಹೆಚ್ಚಿನ ಒತ್ತು ನೀಡಿದ ಪರಿಣಾಮ ಹುಟ್ಟುವ ಮಕ್ಕಳ ಸಾವಿನ ಪ್ರಮಾಣ ಕಡಿಮೆಯಾಗಿದೆ. ಅಲ್ಲದೇ ಕೇಂದ್ರ ಸರ್ಕಾರ 2ರಿಂದ 3 ಸಾವಿರ ಕೋಟಿ ಹಣವನ್ನು ರಾಜ್ಯಕ್ಕೆ ನೀಡಿದೆ ಎಂದರು.

ಕಾರ್ಯಕ್ರಮದಲ್ಲಿ ತಹಸೀಲ್ದಾರ್ ರತ್ನಾಂಬಿಕೆ, ಗ್ರೇಡ್–2 ತಹಸೀಲ್ದಾರ್ ಸಣ್ಣರಾಮಪ್ಪ, ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಅಧಿಕಾರಿ ಡಾ.ಹೆಚ್.ಕೆ.ಪ್ರಸಾದ್, ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್, ಆಸ್ಪತ್ರೆ ಆಡಳಿತಾಧಿಕಾರಿ ಡಾ.ಸೋಮಣ್ಣ, ಪುರಸಭಾ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಹೆಚ್.ಸಿ.ನರಸಿಂಹಮೂರ್ತಿ, ಪ್ರಗತಿಪರ ರೈತ ಪುಟ್ಟಯ್ಯ, ಪ್ರಕಾಶ್, ಬಸಪ್ಪ, ಡಾ.ಪ್ರಜ್ವಲ್, ಡಾ.ದಿನಕರ್, ಡಾ.ರಾಜಶೇಖರ್, ಡಾ.ಚಂದ್ರಶೇಖರ್, ಡಾ.ಕಿರಣ್ ಕುಮಾರ್, ಡಾ.ಸಮಿಉಲ್ಲಾ, ಡಾ.ಪೂರ್ಣಿಮಾ, ಡಾ.ಸಹನ, ಡಾ.ಮಂಜುನಾಥ್, ತಾಲೂಕು ನೋಡಲ್ ಅಧಿಕಾರಿ ಜಯಂತ್, ಪ್ರಶಾಂತ್ ಆಶಾ, ಅಂಗನವಾಡಿ ಕಾರ್ಯಕರ್ತರು ಹಾಜರಿದ್ದರು.

ವಿಪಕ್ಷ ನಾಯಕ ಸಿದ್ದರಾಮಯ್ಯ ಹೇಳಿಕೆಗೆ ಬಿಜೆಪಿ ಖಂಡನೆ



ತಿ.ನರಸೀಪುರ, ಏ.21(ಎಸ್‌ಕೆ)– ಆರ್‌ಎಸ್‌ಎಸ್ ಹಾಗೂ ಬಿಜೆಪಿಯವರು ಮೀರ್ ಸಾದಕ್‌ಗಳು ಎಂದು ಆರೋಪಿಸಿರುವ ಮಾಜಿ ಸಿಎಂ ಸಿದ್ದರಾಮಯ್ಯ ಹೇಳಿಕೆಯನ್ನು ತೀವ್ರವಾಗಿ ಖಂಡಿಸಿರುವ ಬಿಜೆಪಿ ಹಿರಿಯ ಮುಖಂಡ ತೋಟದಪ್ಪ ಬಸವರಾಜು, ಮುಖ್ಯಮಂತ್ರಿಯಾಗಿ ನೀವು ಆಡಳಿತ ನಡೆಸಿದ ವೇಳೆ ಶೇ.30ರಷ್ಟು ಕಮಿಷನ್ ಪಡೆದ ನೀವೇ ಮೀರ್ ಸಾಧಕರು ಎಂದು ತಿರುಗೇಟು ನೀಡಿದ್ದಾರೆ.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಾಮುಂಡೇಶ್ವರಿ ಕ್ಷೇತ್ರದಲ್ಲಿ ನಾಲ್ಕೈದು ಬಾರಿ ಗೆದ್ದು ಉಪ ಮುಖ್ಯಮಂತ್ರಿಯಾದಿರಿ, ಮುಖ್ಯಮಂತ್ರಿಯಾಗುವ ಉದ್ದೇಶದಿಂದ ಆ ಕ್ಷೇತ್ರದ ಜನರ ಬೆನ್ನಿಗೆ ಚೂರಿ ಹಾಕಿ ವರುಣಾ ಕ್ಷೇತ್ರಕ್ಕೆ ವಲಸೆ ಬಂದ ನೀವು ತಾನೇ ಮೀರ್ ಸಾಧಕರು ಎಂದು ಪ್ರಶ್ನಿಸಿದರು.

ನಾಲ್ಕೈದು ಬಾರಿ ಗೆಲ್ಲಿಸಿದ ಜನರ ಬೆನ್ನಿಗೆ ಚೂರಿ ಹಾಕಿದ ಜನ ನಿಮಗೆ ಆಗಲೇ ಪಾಠ ಕಲಿಸಿದ್ದಾರೆ. ರಾಜ್ಯದ ಮುಖ್ಯಮಂತ್ರಿಯಾಗಿ 5 ವರ್ಷಗಳ ನಿಮ್ಮ ಸರ್ಕಾರದಲ್ಲಿ ಶೇ.30 ಕಮಿಷನ್ ಆಡಳಿತ ನಡೆಸಿ ಭ್ರಷ್ಟಾಚಾರದ ಅಧಿಕಾರ ಕೊಟ್ಟ ನರಹಂತಕ ಸರ್ಕಾರ ನಿಮ್ಮದು. ರೈತರು, ಅಧಿಕಾರಿಗಳನ್ನು ಬಲಿ ತೆಗೆದುಕೊಂಡ ಸರ್ಕಾರ ನಿಮ್ಮದಾಗಿತ್ತು ಎಂದು ಕಿಡಿಕಾರಿದರು.

ವರುಣಾ ಕ್ಷೇತ್ರದಲ್ಲಿ ಗೆದ್ದಿ ನೋಡೋಣ: ನಿಮಗೆ ನಿಜವಾಗಲೂ ಸ್ವಾಭಿಮಾನವಿದ್ದರೆ ವರುಣಾದಿಂದಲೇ ಸ್ಪರ್ಧಿಸಿ. ನಿಮಗೆ ಚಾಮುಂಡೇಶ್ವರಿ ಕ್ಷೇತ್ರದಲ್ಲೇ ಆದ ಗತಿಯೇ ಆಗಲಿದ್ದು, ವರುಣಾ ಕ್ಷೇತ್ರದ ಜನತೆ ನಿಮಗೆ ತಕ್ಕ ಪಾಠ ಕಲಿಸಲಿದ್ದಾರೆ ಎಂದರು.

ನಿಮ್ಮಪ್ಪನ ಮೇಲೆ ಆಣೆ ಮಾಡುತ್ತೀರಾ: ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಬಿಜೆಪಿ ಜತೆ ಸೇರುವುದಿಲ್ಲ ಎಂದು ಅವರ ತಂದೆ ಮೇಲೆ ಆಣೆ ಮಾಡುತ್ತಾರೆಯೇ ಎಂದು ಕೇಳಿರುವ ನೀವು ಜೆಡಿಎಸ್‌ನಿಂದ ಹೊರ ಬಂದಾಗ ಬಿಜೆಪಿ ಸೇರಲು ಹೊರಟಿದ್ದೀರಲ್ಲ ಅದು ಸತ್ಯವೋ, ಸುಳ್ಳೋ ಎಂಬುದನ್ನು ನಿಮ್ಮ ತಂದೆ ಅಥವಾ ತಾಯಿ ಚಾಮುಂಡೇಶ್ವರಿ ಮೇಲೆ ಆಣೆ ಮಾಡಲು ನೀವು ಸಿದ್ಧರಿದ್ದೀರಾ ಎಂದು ಪ್ರಶ್ನಿಸಿದ ಬಸವರಾಜು, ಬೂಟಾಟಿಕೆ ಮಾತನಾಡುವುದನ್ನು ಮೊದಲು ನಿಲ್ಲಿಸಿ ಎಂದರು. ಬಿಜೆಪಿ, ಆರ್‌ಎಸ್‌ಎಸ್‌ನವರು ಕೇಸರಿ ಶಾಲು, ಟೋಪಿ ಹಾಕಿಕೊಂಡರೆ ಕೋಮುವಾದಿಗಳು ಎನ್ನುವ ನೀವು ಮುಸಲ್ಮಾನರ ಬಳಿ ಹೋಗಿ ಟೋಪಿ ಹಾಕಿಸಿಕೊಂಡು ಅದನ್ನು ಜಾತ್ಯಾತೀತತೆ ಎನ್ನುತ್ತೀರಾ, ನೀವು ಗುಲಾಮಗಿರಿ ಸಂಸ್ಕೃತಿ ಮರೆಯುತ್ತಿರುವ ಕಾಂಗ್ರೆಸ್ ಪಕ್ಷಕ್ಕೆ ಲಾಯಕ್ಕೇ ಹೊರತು ರಾಜ್ಯದ ರಾಜಕಾರಣ ಮಾಡಲು ಲಾಯಕ್ಕಲ್ಲ ಎಂದರು.

ಜಿಲ್ಲಾ ಎಸ್‌ಸಿ ಮೋರ್ಚಾ ಉಪಾಧ್ಯಕ್ಷ ಆಲಗೂಡು ಮಂಜು, ಟಿಎಪಿಸಿಎಂಎಸ್ ನಿರ್ದೇಶಕ ಮೂಗೂರು ಜಯಣ್ಣ, ಹಿಂದುಳಿದ ವರ್ಗಗಳ ಜಿಲ್ಲಾ ಉಪಾಧ್ಯಕ್ಷ ಕುಪ್ಯ ಮಹದೇವಯ್ಯ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಹುಣಸೂರಲ್ಲಿ ಗೆದ್ದಾಗ ರಾಜ್ಯದಲ್ಲಿ ನಮ್ಮದೇ ಆಡಳಿತ

ದೇವರಾಜ ಅರಸರ ಕರ್ಮಭೂಮಿಯನ್ನು ಹಾಡಿ ಹೊಗಳಿದ ಸಂಸದ ಪ್ರಜ್ವಲ್ ರೇವಣ್ಣ



ಹುಣಸೂರು, ಏ.21(ಕೆಕೆ)– ದಿವಂಗತ ಡಿ.ದೇವರಾಜ ಅರಸರ ಕರ್ಮಭೂಮಿ ಹುಣಸೂರಿನ ಮಣ್ಣಿಗೆ ವಿಶೇಷ ಗುಣ, ಶಕ್ತಿ ಇದ್ದು, ಈ ಕ್ಷೇತ್ರದಲ್ಲಿ ನಮ್ಮ ಪಕ್ಷ ಗೆದ್ದಾಗ ರಾಜ್ಯದಲ್ಲಿ ನಾವೇ ಆಡಳಿತ ನಡೆಸಿದ್ದೇವೆ ಎಂದು ಸಂಸದ ಪ್ರಜ್ವಲ್ ರೇವಣ್ಣ ತಿಳಿಸಿದರು.

ನಗರದ ಮಹಾರಾಜ ಹೋಟೆಲ್‌ನಲ್ಲಿ ನಡೆದ ಖಾಸಗಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಾನು ಸಂಸದನಾಗುವ ಮೊದಲೇ ಹುಣಸೂರು ಕ್ಷೇತ್ರವನ್ನು ಒಂದೆರಡು ಬಾರಿ ಸುತ್ತಿ ತಾಲೂಕಿನ ಜನತೆಯ ವಿಶ್ವಾಸ ಗಳಿಸಿ, ಆಶೀರ್ವಾದ ಪಡೆದು ರಾಜಕೀಯ ಪ್ರವೇಶಿಸಿದೆ. ಹಾಸನ ನನಗೆ ಒಂದು ಕಣ್ಣಾದರೆ, ಹುಣಸೂರು ನನಗೆ ಮತ್ತೊಂದು ಕಣ್ಣು ಎಂದರು.

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಆಶೀರ್ವಾದದೊಂದಿಗೆ ರಾಜ್ಯಾದ್ಯಂತ ಜೆಡಿಎಸ್ ಪಕ್ಷ ಸಂಘಟಿಸುವ ಮೂಲಕ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಹುಣಸೂರಿನಲ್ಲಿ ಪಕ್ಷದ ಅಭ್ಯರ್ಥಿಯನ್ನು ಗೆಲ್ಲಿಸುವ ಮೂಲಕ ರಾಜ್ಯದಲ್ಲಿ ಹೆಚ್ಚು ಸ್ಥಾನ ಗೆದ್ದು, ಸ್ಪಷ್ಟ ಬಹುಮತದೊಂದಿಗೆ ಕುಮಾರಣ್ಣನವರನ್ನು ಮತ್ತೊಮ್ಮೆ ಮುಖ್ಯಮಂತ್ರಿಗಳನ್ನಾಗಿ ಮಾಡಿ ಸುಭದ್ರ ಆಡಳಿತ ನೀಡೋಣ ಎಂದರು.

ರಾಜ್ಯದ ಪ್ರತಿಷ್ಠಿತ ಕ್ಷೇತ್ರಗಳಾದ ಹುಣಸೂರು, ಬಾದಾಮಿ, ಚಾಮುಂಡೇಶ್ವರಿ ಸೇರಿದಂತೆ ಬಹುತೇಕ ಕ್ಷೇತ್ರಗಳಲ್ಲಿ ಪಕ್ಷ ಗೆಲ್ಲುವ ಮೂಲಕ ಸ್ವತಂತ್ರವಾಗಿ ಅಧಿಕಾರ ಹಿಡಿಯುತ್ತೇವೆ. ಹೀಗಾಗಿ ಕಾರ್ಯಕರ್ತರು ತಳ ಮಟ್ಟದಿಂದ ಪಕ್ಷ ಸಂಘಟನೆಗೆ ಮುಂದಾಗಬೇಕು ಎಂದರು. ಸಾಮರಸ್ಯಕ್ಕೆ ಹೆಸರಾಗಿರುವ ಹುಣಸೂರಲ್ಲಿ ಮುಂದಿನ ದಿನಗಳಲ್ಲಿ ಎಲ್ಲಾ ಜಾತಿ, ಧರ್ಮದ ಮುಖಂಡರನ್ನು ಸೇರಿಸಿ ಸಮಾವೇಶ ಮಾಡಿ ರಾಜ್ಯಕ್ಕೆ ಸಂದೇಶ ನೀಡುತ್ತೇವೆ ಎಂದರು. ತಾಲೂಕು ಜೆಡಿಎಸ್ ಉಪಾಧ್ಯಕ್ಷ ದೇವರಾಜ ಒಡೆಯರ್ ಮಾತನಾಡಿ, ಯುವ ನಾಯಕ ಪ್ರಜ್ವಲ್ ರೇವಣ್ಣನವರ ಆಶಯದಂತೆ ಏ.25ರಂದು ಹಿಂದೂ, ಮುಸ್ಲಿಂ ಸಾಮರಸ್ಯ ಸಾರುವ ಸೌಹಾರ್ದತೆಯ ಔತಣ ಕೂಟ ಏರ್ಪಡಿಸಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಜಿಪಂ ಮಾಜಿ ಸದಸ್ಯ ಹೆಚ್.ಎಂ.ಫಜಲುಲ್ಲಾ, ನಗರಸಭಾ ಸದಸ್ಯರಾದ ಕೃಷ್ಣರಾಜಗುಪ್ತ ಶರವಣ, ದೇವರಾಜ್.ಸಿ, ಪೆರುಮಾಳ್, ಶ್ರೀನಾಥ್, ಬಿ.ಕೆ.ಪಿ ಬಳಗದ ಅಧ್ಯಕ್ಷ ಸಂದೇಶ್, ಅಣ್ಣಯ್ಯ, ಜಯರಾಮ್, ರಾಜೇಗೌಡ, ಸಿರಾಜ್, ಅಲೀಮ್, ಧನಂಜಯ, ರುದ್ರೇಗೌಡ, ಸೇರಿದಂತೆ ನೂರಾರು ಕಾರ್ಯಕರ್ತರು ಇದ್ದರು.

ಮೈಸೂರು–ನಂಜನಗೂಡು ರಸ್ತೆಯಲ್ಲಿ ಕಗ್ಗತ್ತಲು

ಸುತ್ತಮುತ್ತಲಿನ ಗ್ರಾಮಸ್ಥರ ಪರದಾಟ

ಕಡಕೊಳ, ಏ.21– ಮೈಸೂರು–ನಂಜನಗೂಡು ಮುಖ್ಯರಸ್ತೆ ನಡುವೆ ಅಳವಡಿಸಿರುವ ಲೈಟ್‌ಗಳು ಬೆಳಗದೆ ಕಗ್ಗತ್ತಲಿನಿಂದ ಕೂಡಿದ್ದು, ಸುತ್ತಮುತ್ತಲಿನ ಗ್ರಾಮಸ್ಥರು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ.

ಅದರಲ್ಲೂ ಕಡಕೊಳದಿಂದ ನಂಜನಗೂಡಿಗೆ ಹೋಗುವ ಮುಖ್ಯರಸ್ತೆ ಸಂಪೂರ್ಣ ಕತ್ತಲೆಯಿಂದ ಕೂಡಿರುವುದರಿಂದ ಗ್ರಾಮಸ್ಥರು ರಸ್ತೆ ದಾಟಲು, ಓಡಾಡಲು ತುಂಬಾ ತೊಂದರೆಯಾಗಿದೆ ಎಂದು ಗ್ರಾಪಂ ಮಾಜಿ ಸದಸ್ಯ ರವೀಗೌಡ ತಿಳಿಸಿದ್ದಾರೆ. ಇತ್ತೀಚೆಗೆ ರಸ್ತೆ ಅಭಿವೃದ್ಧಿಪಡಿಸಿ ರಸ್ತೆ ಮಧ್ಯೆ ಎರಡೂ ಬದಿಗೂ ಬೆಳಕು ಬರುವಂತೆ ವಿದ್ಯುದ್ದೀಪಗಳನ್ನು ಹಾಕಲಾಗಿತ್ತು. ಒಂದೆರಡು ದಿನ ಬೆಳಗಿದ ದೀಪಗಳು ಇದುವರೆಗೂ ಬೆಳಗುತ್ತಿಲ್ಲ. ಜೊತೆಗೆ ಕೈಗಾರಿಕಾ ಪ್ರದೇಶದ ಸುತ್ತಮುತ್ತ ಅಳವಡಿಸಿರುವ ಲೈಟುಗಳು ಬೆಳಗುತ್ತಿಲ್ಲ. ಇದರಿಂದ ಕಡಕೊಳ, ಬಂಡಿಪಾಳ್ಯ, ಕೆ.ಎನ್.ಹುಂಡಿ, ತಾಂಡವಪುರ, ಚಿಕ್ಕಯ್ಯನಛತ್ರ ಸೇರಿದಂತೆ ಇನ್ನಿತರ ಗ್ರಾಮಗಳ ಜನರು ಫ್ಯಾಕ್ಟರಿ ಕೆಲಸ ಮುಗಿಸಿ ಅಥವಾ ಹೊರಗಡೆ ಹೋಗಿ ಮತ್ತೆ ಮನೆಗೆ ಮರಳಲು ಹರಸಾಹಸ ಪಡಬೇಕಾಗಿದೆ ಎಂದರು. ಸಂಬಂಧಪಟ್ಟವರು ಮುಂದೆ ದೊಡ್ಡ ಅನಾಹುತವಾಗುವ ಮುಂಚೆ ಕ್ರಮ ಜರುಗಿಸಿ ಗ್ರಾಮಸ್ಥರಿಗೆ ಆಗುತ್ತಿರುವ ತೊಂದರೆ ತಪ್ಪಿಸುವಂತೆ ಮನವಿ ಮಾಡಿದ್ದಾರೆ.

ಮತಮಾನ್ಯ ಎಲ್ಲಾ ಧರ್ಮಗಳನ್ನು ಪ್ರೀತಿಯಿಂದ ಕಾಣುವಂತಾಗಲಿ

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಪ್ರೊ.ಮಲೆಯೂರು ಗುರುಸ್ವಾಮಿ ಅಭಿಮತ



ತಿ.ನರಸೀಪುರ, ಏ.21(ಎಸ್‌ಕೆ)– ಮಠಮಾನ್ಯಗಳ ಪರಿಸರದಲ್ಲಿ ಬದುಕು ಕಟ್ಟಿಕೊಂಡಿರುವ ನಾವು ಸದಾ ಅವುಗಳ ಸೇವೆಗೆ ಸಿದ್ಧರಾಗಿರಬೇಕು ಎಂದು ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ ತಿಳಿಸಿದರು.

ತಾಲೂಕಿನ ಹೊಸೂರುಹುಂಡಿ ಶ್ರೀ ಗುರುಮಲ್ಲೇಶ್ವರ ದಾಸೋಹ ಮಠದ ಕಟ್ಟಡದ ಪ್ರಥಮ ವರ್ಷದ ವಾರ್ಷಿಕೋತ್ಸವದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನಾವು ನಿತ್ಯ ಕಾಣದ ದೇವರಿಗೆ ಕೈಮುಗಿದು ಪ್ರಾರ್ಥಿಸುವುದು ವಾಡಿಕೆ. ಆದರೆ ನಿತ್ಯ ದಾಸೋಹ ಮಾಡಿ ಹಸಿವು ನೀಗಿಸುವ ಜೊತೆಗೆ ಆರೋಗ್ಯ, ಅಕ್ಷರ ದಾಸೋಹ ನೀಡುತ್ತಿರುವ ಗುರುಗಳೇ ನಿಜವಾದ ದೇವರು ಎಂಬುದನ್ನು ಮರೆಯಬಾರದು. ಜೀವನದಲ್ಲಿ ಗುರುಸೇವೆ ಮಾಡಿ ಮುಕ್ತಿ ಸಂಪಾದನೆ ಮಾಡುವುದೇ ಪ್ರತಿಯೊಬ್ಬರ ಪರಮ ಗುರಿಯಾಗಬೇಕು ಎಂದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಪ್ರೊ.ಮಲೆಯೂರು ಗುರುಸ್ವಾಮಿ ಮಾತನಾಡಿ, ದೇಶದಲ್ಲಿ ಮಠಗಳಿಗೆ ವಿಶೇಷ ಸ್ಥಾನವಿದೆ. ಗುರುಗಳು ಹಾಗೂ ಮಠಕ್ಕೆ ಅವಿನಾಭಾವ ಸಂಬಂಧವಿದ್ದು, ಮಠಗಳು ಮನಸ್ಸಿಗೆ ಶಾಂತಿ ಕೊಡುವ, ಸಾಂತ್ವನ ನೀಡುವ, ಸಮಾಜದ ಸಂಘಟನೆಯಲ್ಲಿ ತೊಡಗಿಕೊಳ್ಳುವಂತಹ, ಎಲ್ಲಾ ಜನಾಂಗ, ಜಾತಿ, ಧರ್ಮಗಳನ್ನು ಪ್ರೀತಿಯಿಂದ ಕಾಣುವಂತಹ ಕೇಂದ್ರಗಳಾಗಬೇಕು ಎಂದರು.

ಇದೇ ವೇಳೆ ಶತಾಯುಷಿಗಳಾದ ಪರಿಣಾಮಿಪುರ ಬಿದರಿ ಚೌಕಿ ಮಠದ ಗುರು ಸಿದ್ದಶಿವಾಚಾರ್ಯ ಸ್ವಾಮಿ ಹಾಗೂ ಆಲಹಳ್ಳಿ ಪಟ್ಟದ ಮಠದ ಶಿವಕುಮಾರ ಸ್ವಾಮಿಗಳಿಗೆ ಗುರುವಂದನೆ ಸಲ್ಲಿಸಲಾಯಿತು. ವಾಟಾಳು ಮಠದ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಮೈಸೂರು ವಿವಿ ಸಂದರ್ಶಕ ಪ್ರಾಧ್ಯಾಪಕ ಡಾ.ಚಂದ್ರಶೇಖರಯ್ಯ ಪ್ರವಚನ ನೀಡಿದರು.

ಗುರುಮಲ್ಲೇಶ್ವರ ದಾಸೋಹ ಮಠದ ಶ್ರೀರಾಜಶೇಖರ ಸ್ವಾಮಿ, ತಾಲೂಕು ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷ ಮಹದೇವಸ್ವಾಮಿ, ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ವಿ.ಶಿವಮಲ್ಲಪ್ಪ, ವೀರಪ್ಪ ಒಡೆಯರ ಹುಂಡಿ ಮಠದ ಶ್ರೀರೇಣುಕಾಚಾರ್ಯಸ್ವಾಮಿ, ಕಳ್ಳಿಪುರ ಮಠದ ಶ್ರೀ ಗುರುಪಾದ ಶಿವಾಚಾರ್ಯ ಸ್ವಾಮಿ, ಶಸ್ತ್ರ ಚಿಕಿತ್ಸಕ ಡಾ.ರೇವಣ್ಣ, ಪಿಎಸಿಪಿಎಸ್ ಅಧ್ಯಕ್ಷ ಮಲ್ಲಣ್ಣ, ಮಾಜಿ ಅಧ್ಯಕ್ಷ ತೊಂಟೇಶ್, ಪರಶಿವಮೂರ್ತಿ, ಸಿದ್ದಲಿಂಗಸ್ವಾಮಿ, ಉಮೇಶ್, ಮಹದೇವಪ್ಪ, ಕೊತ್ತೇಗಾಲ ಪುರಸಭಾ ಸದಸ್ಯ ಎಸ್.ಕೆ.ಕಿರಣ್ ಮತ್ತಿತರರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕೆಜಿಎಫ್ 2 (ತ): ಬೆ.8ಕ್ಕೆ, ಬೆ.11.30ಕ್ಕೆ, ಮ.3.15ಕ್ಕೆ, ಸಂ.6.30ಕ್ಕೆ, ರಾ.9.55ಕ್ಕೆ.
ಸ್ಕ್ರೀನ್ 2	ಕೆಜಿಎಫ್ 2 (ಕ): ಬೆ.8ಕ್ಕೆ, ಬೆ.11.15ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಆರ್‌ಆರ್‌ಆರ್ (ತೆ): ಮ.2.45ಕ್ಕೆ.
ಸ್ಕ್ರೀನ್ 3	ಕೆಜಿಎಫ್ 2 (ಕ): ಬೆ.8ಕ್ಕೆ, ಬೆ.11.25ಕ್ಕೆ, ಬೀಸ್ಟ್ (ತ): ಮ.3.30ಕ್ಕೆ, ಸಂ.6.35ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 4	ಕೆಜಿಎಫ್ 2 (ಕ): ಬೆ.8ಕ್ಕೆ, ಬೆ.11.45ಕ್ಕೆ, ಮ.3.30ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬೀಸ್ಟ್ (ತ): ಬೆ.8.40ಕ್ಕೆ, ಮ.12ಕ್ಕೆ, ಮ.3.20ಕ್ಕೆ, ಸಂ.6.40ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಬೀಸ್ಟ್ (ತ): ಬೆ.8ಕ್ಕೆ, ಬೆ.11.10ಕ್ಕೆ, ಮ.2.30ಕ್ಕೆ, ಸಂ.5.50ಕ್ಕೆ, ರಾ.9.10ಕ್ಕೆ.
ಸ್ಕ್ರೀನ್ 3	ಬೀಸ್ಟ್ (ತ): ಬೆ.8.20ಕ್ಕೆ, ಬೆ.11.45ಕ್ಕೆ, ಫೆಂಟಾಸ್ಟಿಕ್ ಬೀಸ್ಟ್ಸ್ (ಇಂ): ಮ.3.05ಕ್ಕೆ, ಜೇಮ್ಸ್ (ಕ): ಸಂ.6.10ಕ್ಕೆ, ಆರ್‌ಆರ್‌ಆರ್ (ಹಿಂ): ರಾ.9.20ಕ್ಕೆ.
ಸ್ಕ್ರೀನ್ 4	ಬೀಸ್ಟ್ (ತ): ಬೆ.8.10ಕ್ಕೆ, ಜೇಮ್ಸ್ (ಕ): ಬೆ.11.35ಕ್ಕೆ, ಆರ್‌ಆರ್‌ಆರ್ (ತೆ): ಮ.2.45ಕ್ಕೆ, ರಾ.9.50ಕ್ಕೆ, ಕೆಜಿಎಫ್ (ಕ): ಸಂ.6.25ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಆರ್‌ಆರ್‌ಆರ್ (2ಡಿ)(ಕ): ಬೆ.11ಕ್ಕೆ, ತ್ರಿಕೋನ (ಕ): ಸಂ.4ಕ್ಕೆ, ಗಣಿ (ತೆ): ಸಂ.6.45ಕ್ಕೆ.
ಸ್ಕ್ರೀನ್ 2	ಆರ್‌ಆರ್‌ಆರ್ (2ಡಿ)(ತೆ): ಮ.1.30ಕ್ಕೆ.
ಸ್ಕ್ರೀನ್ 3	ಆರ್‌ಆರ್‌ಆರ್ (2ಡಿ)(ಕ): ಸಂ.4ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ವರ್ಣಪಟಲ (ಕ): ಬೆ.11ಕ್ಕೆ, ಜೇಮ್ಸ್ (ಕ): ಮ.1.30ಕ್ಕೆ, ರಾ.7.30ಕ್ಕೆ, ಗಣಿ (ತೆ): ಸಂ.4.30ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ಫೋರಂ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕೆಜಿಎಫ್ 2 (ಕ): ಬೆ.8ಕ್ಕೆ, ಬೆ.9ಕ್ಕೆ, ಬೆ.10.30ಕ್ಕೆ, ಬೆ.11.15ಕ್ಕೆ, ಬೆ.11.30ಕ್ಕೆ, ಮ.12.30ಕ್ಕೆ, ಮ.2ಕ್ಕೆ, ಮ.2.45ಕ್ಕೆ, ಮ.3ಕ್ಕೆ, ಸಂ.4ಕ್ಕೆ, ಸಂ.5.30ಕ್ಕೆ, ಸಂ.6.15ಕ್ಕೆ, ಸಂ.6.30ಕ್ಕೆ, ರಾ.7.30ಕ್ಕೆ, ರಾ.9ಕ್ಕೆ, ರಾ.9.45ಕ್ಕೆ, ರಾ.10ಕ್ಕೆ, ಆರ್‌ಆರ್‌ಆರ್ (ಕ): ರಾ.9.30ಕ್ಕೆ, ಕೆಜಿಎಫ್ 2 (ಹಿಂ): ಬೆ.10.45ಕ್ಕೆ, ಸಂ.6ಕ್ಕೆ, ಆರ್‌ಆರ್‌ಆರ್ (ತೆ): ಮ.2.15ಕ್ಕೆ, ಬೀಸ್ಟ್ (ತ): ಬೆ.11.30ಕ್ಕೆ, ಮ.2.50ಕ್ಕೆ, ಸಂ.6.10ಕ್ಕೆ, ರಾ.9.30ಕ್ಕೆ.

ಗರುಡ ಮಾಲ್, 1ನೇ ಮಹಡಿ, ಮೊ.ನಂ: 9901373210

ಹರೀಶ ವಯಸ್ಸು 36 (ಕ): ಮ.3.30ಕ್ಕೆ, ಲವ್ ಮಾಕ್ಟೇಲ್ 2 (ಕ): ಮ.12.25ಕ್ಕೆ, ಮ.3.05ಕ್ಕೆ, ರಾಧೇಶ್ಯಾಮ್ (ತೆ): ಬೆ.9.15ಕ್ಕೆ, ಬೆ.10.20ಕ್ಕೆ, ಮ.12.10ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ಸಂ.6.05ಕ್ಕೆ, ರಾ.7.05ಕ್ಕೆ, ರಾ.9ಕ್ಕೆ, ರಾ.10ಕ್ಕೆ, ದಿ ಬ್ಯಾಟ್‌ಮ್ಯಾನ್ (ಇಂ): ಬೆ.11.55ಕ್ಕೆ, ಸಂ.5.55ಕ್ಕೆ, ಗಂಗೂಬಾಯ್ ಕಾಠಿಯಾವಾಡಿ (ಹಿಂ): ರಾ.9.30ಕ್ಕೆ, ಎದರ್ಕುಂ ತುನಿಂದವನ್ (ತ): ಬೆ.9.15ಕ್ಕೆ, ಮ.3.25ಕ್ಕೆ, ಸಂ.6.30ಕ್ಕೆ, ರಾ.9.45ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಆರ್‌ಆರ್‌ಆರ್ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಆರ್‌ಆರ್‌ಆರ್ (ಕ)	1 ಪ್ರದರ್ಶನಗಳು
ಆರ್‌ಆರ್‌ಆರ್ (ತೆ)	3 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಇಲ್ಲಿಂದ ಆರಂಭವಾಗಿದೆ (ಕ)	1 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಖತ್ರಾ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕೆಜಿಎಫ್–2 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಜೇಮ್ಸ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಕೆಜಿಎಫ್–2 (ಕ)	4 ಪ್ರದರ್ಶನಗಳು
ಸಂಗಂ	
ಕೆಜಿಎಫ್ 2 (ಕ)	4 ಪ್ರದರ್ಶನಗಳು
ಲಿಡೋ	
ಬೀಸ್ಟ್ (ತ)	4 ಪ್ರದರ್ಶನಗಳು
ತಿಬ್ಬಾದೇವಿ	
ಬೀಸ್ಟ್ (ಕ)	4 ಪ್ರದರ್ಶನಗಳು

ಸಿಎಸ್‌ಕೆಗೆ 2ನೇ ಜಯ: ಮುಂಬೈಗೆ ಸತತ 7ನೇ ಸೋಲು


ಮುಂಬೈ, ಏ.21– ಎಂ.ಎಸ್.ಧೋನಿ ಅವರ ಸಮಯೋಚಿತ ಬ್ಯಾಟಿಂಗ್ ನೆರವಿನಿಂದ ಚೆನ್ನೈ ಸೂಪರ್ ಕಿಂಗ್ಸ್ ಮುಂಬೈ ಇಂಡಿಯನ್ಸ್ ವಿರುದ್ಧ 3 ವಿಕೆಟ್‌ಗಳ ಜಯ ಸಾಧಿಸಿದೆ.



ಇದರೊಂದಿಗೆ ಸಿಎಸ್‌ಕೆ ಟೂರ್ನಿಯಲ್ಲಿ 2ನೇ ಗೆಲುವು ಸಾಧಿಸಿದರೇ, ಅತ್ತ ಮುಂಬೈ 7ನೇ ಸೋಲು ಅನುಭವಿಸಿ ಟೂರ್ನಿಯಿಂದ ಬಹುತೇಕ ನಿರ್ಗಮಿಸಿದೆ. ಇಲ್ಲಿನ ಡಿ.ವೈ.ಪಾಟೀಲ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಮುಂಬೈ ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 155 ರನ್‌ಗಳ ಸಾಧಾರಣ ಗುರಿ ಪೇರಿಸಿತು. ತಂಡದ ಪರ ತಿಲಕ್ ವರ್ಮಾ 3 ಬೌಂಡರಿ, 2 ಸಿಕ್ಸರ್ ಒಳಗೊಂಡ 51 ರನ್, ಸೂರ್ಯ ಕುಮಾರ್ ಯಾದವ್ 32, ಹೃತಿಕ್ ಶೋಕಿನ್ 25, ಜೈದೇವ್ ಉನಾದ್ಕಟ್ 19, ಪೊಲ್ಲಾರ್ಡ್ 14ರನ್ ಗಳಿಸಿದರು. ಸಿಎಸ್‌ಕೆ ಪರ ಮುಕೇಶ್ ಚೌಧರಿ 3, ಡ್ವೇನ್ ಬ್ರಾವೊ 2, ಸ್ಯಾಂಟ್ನರ್, ತೀಕ್ಷ್ಣ ತಲಾ 1 ವಿಕೆಟ್ ಪಡೆದರು.

ಬಳಿಕ 156 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಚೆನ್ನೈ ಒಂದು ಹಂತದಲ್ಲಿ ಸೋಲಿನ ಭೀತಿಗೆ ಒಳಗಾಗಿತ್ತು. ಅಲ್ಲದೆ ಅಂತಿಮ ಓವರ್‌ನಲ್ಲಿ ಗೆಲುವಿಗೆ 17 ರನ್ ಬೇಕಿತ್ತು. ಈ ವೇಳೆ ಅಬ್ಬರಿಸಿದ ಧೋನಿ, 2 ಬೌಂಡರಿ ಹಾಗೂ ಸಿಕ್ಸರ್ ಬಾರಿಸುವ ಮೂಲಕ ಚೆನ್ನೈಗೆ ರೋಚಕ ಗೆಲುವು ಒದಗಿಸಿಕೊಟ್ಟರು. ಕೇವಲ 13 ಎಸೆತಗಳನ್ನು ಎದುರಿಸಿದ ಧೋನಿ ಮೂರು ಬೌಂಡರಿ ಹಾಗೂ ಒಂದು ಸಿಕ್ಸರ್ ನೆರವಿನಿಂದ 28 ರನ್ ಗಳಿಸಿ ಔಟಾಗದೆ ಉಳಿದರು. ಉಳಿದಂತೆ ಮಿಚೆಲ್ ಸ್ಯಾಂಟ್ನರ್ 11, ರಾಬಿನ್ ಉತ್ತಪ್ಪ 30, ಅಂಬಟಿ ರಾಯುಡು 40, ಶಿವಂ ದುಬೆ 13, ಡ್ವೇನ್ ಪ್ರೆಟೋರಿಯಸ್ 22 ರನ್ ಗಳಿಸಿದರು. ಅಂತಿಮವಾಗಿ ಚೆನ್ನೈ ಸೂಪರ್ ಕಿಂಗ್ಸ್ ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 156 ರನ್ ಗಳಿಸಿ ಗೆಲುವಿನ ನಗೆ ಬೀರಿತು. ಮುಂಬೈ ಪರ ಡ್ಯಾನಿಯಲ್ ಸ್ಯಾಮ್ಸ್ 4, ಜೈದೇವ್ ಉನಾದ್ಕಟ್ 2, ರಿಲೇ ಮೆರೆಡಿತ್ 1 ವಿಕೆಟ್ ಪಡೆದರು. ಚೆನ್ನೈ ಪರ ಮುಕೇಶ್ ಚೌಧರಿ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ವರದರಾಜು ನಿಧನ



ಸರಗೂರು, ಏ.21(ನಾಗೇಶ್)– ಪಟ್ಟಣದ 6ನೇ ವಾರ್ಡ್ ನಿವಾಸಿ ವರದರಾಜು (55) ಗುರುವಾರ ನಿಧನರಾದರು. ಪಪಂನಲ್ಲಿ ಡಿ ಗ್ರೂಪ್ ನೌಕರರಾಗಿ ಸೇವೆ ಸಲ್ಲಿಸುತ್ತಿದ್ದ ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಪಟ್ಟಣದ ಆರ್ಯ ಈಡಿಗರ ರುದ್ರಭೂಮಿಯಲ್ಲಿ ನೆರವೇರಿತು.

ನಾಳೆ ಹಿಂದುಳಿದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪರಿಕರ ವಿತರಣೆ

ಮೈಸೂರು, ಏ.21(ಆರ್‌ಕೆಬಿ)– ಡಾ. ಬಿ.ಆರ್.ಅಂಬೇಡ್ಕರ್ ಜಯಂತಿ ಅಂಗವಾಗಿ ಮೈಸೂರಿನ ಜನಚೈತನ್ಯ ಫೌಂಡೇಷನ್ ವತಿಯಿಂದ ಏ.23ರಂದು ಸಂಜೆ 4.30 ಗಂಟೆಗೆ ಮೈಸೂರಿನ ಪುರಭವನದಲ್ಲಿ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪರಿಕರ ವಿತರಣೆ ಹಾಗೂ ಭೀಮಗೀತೆ ಜಾಗೃತಿ ಗೀತ ಗಾಯನ ಆಯೋಜಿಸಲಾಗಿದೆ ಎಂದು ಫೌಂಡೇಷನ್ ಅಧ್ಯಕ್ಷ ಆರ್.ಲಕ್ಷ್ಮಣ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಕಾರ್ಯಕ್ರಮಕ್ಕೆ ಮಡ್ಡೀಕೆರೆ ಗೋಪಾಲ್ ಚಾಲನೆ ನೀಡುವರು. ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅಧ್ಯಕ್ಷತೆ ವಹಿಸುವರು. ಮುಡಾ ಅಧ್ಯಕ್ಷ ಎಚ್.ವಿ.ರಾಜೀವ್ ಇನ್ನಿತರರು ಭಾಗವಹಿಸುವರು ಎಂದರು. ಗೋಷ್ಠಿಯಲ್ಲಿ ಸಂಸ್ಥೆಯ ಜಿ.ಎಸ್.ಶಿವಸ್ವಾಮಿ, ಎಂ.ಪುಟ್ಟಸ್ವಾಮಿ, ಮೋಹನ್ ಕುಮಾರ್, ತಿರುಪಾರ್ ಉಪಸ್ಥಿತರಿದ್ದರು.

ಸಾರ್ವಜನಿಕ ತಿಳುವಳಿಕೆ ಪತ್ರ

ನನ್ನ ಕಕ್ಷಿದಾರರು, ಈ ಕೆಳಗೆ ಅನುಸೂಚಿಯಲ್ಲಿ ನಮೂದಿಸಿರುವ ವಸತಿ ಉದ್ದೇಶಕ್ಕಾಗಿ ಅನ್ಯಕ್ರಾಂತವಾಗಿರುವ ಹಾಗೂ ಅಭಿವೃದ್ಧಿ ಹೊಂದದಿರುವ ಜಮೀನುಗಳನ್ನು ಅವರ ಮಾಲೀಕರಾದ ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ವರುಣ ಹೋಬಳಿ, ಸಿದ್ದರಾಮನಹುಂಡಿ ಗ್ರಾಮದ, ಮನೆ ನಂ.31 ರಲ್ಲಿ ವಾಸವಾಗಿರುವ ಶ್ರೀ ಸಿ.ಕೆಂಪೀರಯ್ಯರವರ ಮಗನಾದ ಶ್ರೀ ಕೆ.ಆನಂದ ರವರಿಂದ ಖರೀದಿಸುವ ಈರಾದೆಯನ್ನು ಹೊಂದಿರುವುದು ಸರಿಯಷ್ಟೆ. ಅನುಸೂಚಿ ಸ್ವತ್ತಿನ / ಜಮೀನುಗಳ ಸಂಬಂಧ ಯಾರಿಗಾದರು ಯಾವುದೇ ರೀತಿಯ ಹಕ್ಕು, ಆಸಕ್ತಿ, ಸ್ವಾಮ್ಯ, ಕ್ಲೈಮ್, ಆಧಾರ, ಸಾಲ ಬಾಕಿ, ಅಧಿಕಾರ ಪತ್ರ, ಇತರೆ ತಂಟೆ ತಕರಾರು ಇದ್ದಲ್ಲಿ, ಅವರು ಖುದ್ದಾಗಿ ದಾಖಲೆಗಳ ಸಹಿತ ಈ ಪತ್ರಿಕಾ ಪ್ರಕಟಣೆಯಾದ 15 (ಹದಿನೈದು) ದಿನಗಳ ಒಳಗೆ ಕೆಳಕಂಡ ನನ್ನ ಕಛೇರಿಯಲ್ಲಿ ಸಂಪರ್ಕಿಸತಕ್ಕದ್ದು ಅಥವಾ ಲಿಖಿತವಾಗಿ ತಿಳಿಸತಕ್ಕದ್ದು ಎಂದು ಈ ಮೂಲಕ ತಿಳಿಸಲಾಗಿದೆ. ತಪ್ಪಿದಲ್ಲಿ ಅನುಸೂಚಿ ಸ್ವತ್ತಿನ ಸಂಬಂಧ ಯಾರು ಅಧಿಕಾರ ಪತ್ರ ಹೊಂದಿಲ್ಲವೆಂದು ಮತ್ತು ಯಾರಿಗೂ ಯಾವುದೇ ರೀತಿಯ ಹಕ್ಕು, ಆಸಕ್ತಿ, ಸ್ವಾಮ್ಯ, ಕ್ಲೈಮ್, ಆಧಾರ, ಸಾಲ ಬಾಕಿ, ಇರುವುದಿಲ್ಲಾ ಎಂದು ಪರಿಗಣಿಸಿ ನನ್ನ ಕಕ್ಷಿದಾರರು ಅನುಸೂಚಿ ಸ್ವತ್ತು / ಜಮೀನುಗಳ ಸಂಬಂಧ ಕ್ರಯಪತ್ರವನ್ನು ಬರೆಯಿಸಿ ನೋಂದಾಯಿಸಿಕೊಳ್ಳುವ ಪ್ರಕ್ರಿಯೆಗೆ ಮುಂದಾಗುತ್ತಾರೆ ಎಂದು ತಿಳಿಯುವುದು. ಆನಂತರದಲ್ಲಿ ಉಂಟಾಗತಕ್ಕ ಯಾವುದೇ ತಂಟೆ ತಕರಾರುಗಳು ನಮ್ಮ ಕಕ್ಷಿದಾರರನ್ನು ಬಧ್ಧಪಡಿಸುವುದಿಲ್ಲವೆಂದು ತಿಳಿಯತಕ್ಕದ್ದು.

ಅನುಸೂಚಿ

ಐಟಂ ನಂ.1:– ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಬೆಳಗೊಳ ಹೋಬಳಿ, ಹೊಸಹಳ್ಳಿ ಗ್ರಾಮದ ಸರ್ವೆ ನಂ.87/1, ವಿಸ್ತೀರ್ಣ 0 ಎಕರೆ 19.12 ಗುಂಟೆ ವಸತಿ ಉದ್ದೇಶಕ್ಕಾಗಿ ಅನ್ಯಕ್ರಾಂತವಾಗಿ ಅಭಿವೃದ್ಧಿ ಹೊಂದದಿರುವ ಜಮೀನಿಗೆ ಚೆಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂ. 60, ಪಶ್ಚಿಮಕ್ಕೆ: ಸರ್ವೆ ನಂ.87/3, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಸರ್ವೆ ನಂ.87/4.

ಐಟಂ ನಂ.2:– ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಬೆಳಗೊಳ ಹೋಬಳಿ, ಹೊಸಹಳ್ಳಿ ಗ್ರಾಮದ ಸರ್ವೆ ನಂ. 87/4, ವಿಸ್ತೀರ್ಣ 0 ಎಕರೆ 19.12 ಗುಂಟೆ ವಸತಿ ಉದ್ದೇಶಕ್ಕಾಗಿ ಅನ್ಯಕ್ರಾಂತವಾಗಿ ಅಭಿವೃದ್ಧಿ ಹೊಂದದಿರುವ ಜಮೀನಿಗೆ ಚೆಕ್ಕುಬಂದಿ: ಪೂರ್ವಕ್ಕೆ : ಸರ್ವೆ ನಂ.60, ಪಶ್ಚಿಮಕ್ಕೆ: ಸರ್ವೆ ನಂ.87/2, ಉತ್ತರಕ್ಕೆ: ಸರ್ವೆ ನಂ.87/1, ದಕ್ಷಿಣಕ್ಕೆ : ಸರ್ವೆ ನಂ.87/5.

ಸಹಿ/– **ವಿ.ವಿ.ಮನುಕುಮಾರ್**, ವಕೀಲರು,
ನಂ.66/1–ಬಿ1, 1ನೇ ಮಹಡಿ, 3ನೇ ಮುಖ್ಯ ರಸ್ತೆ, 5ನೇ ಕ್ರಾಸ್ ರಸ್ತೆ, ಆರ್.ಕೆ.ಮೆಡಿಕಲ್ ಎದುರು, ಸರಸ್ವತಿಪುರಂ, ಮೈಸೂರು–570009.
ಮೊಬೈಲ್ ನಂ.9448222306
ದಿನಾಂಕ: 19/04/2022 ಸ್ಥಳ: ಮೈಸೂರು

ಮೈಸೂರು ಮಿತ್ರ 43
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

2ನೇ ವರ್ಷದ ಪುಣ್ಯಸ್ಮರಣೆ



ನಮ್ಮೆಲ್ಲರನ್ನು ನೀವು ಪ್ರೀತಿಯಿಂದ ತಿದ್ದಿ ತೀಡಿ ಬೆಳೆಸಿ ನೀವು ನಮ್ಮನ್ನಗಲಿ ಇಂದಿಗೆ 2 ವರ್ಷವಾಯಿತು ಸದಾಕಾಲ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು: ಹೆಂಡತಿ, ಮಕ್ಕಳು, ಸೊಸೆಯಂದಿರು ಹಾಗೂ ಮೊಮ್ಮಕ್ಕಳು

ಪಿ.ಮಹದೇವಯ್ಯ


4ನೇ ವರ್ಷದ ಸವಿನೆನೆಪು



ನೀನು ನಮ್ಮನ್ನಗಲಿ ಇಂದಿಗೆ 4 ವರ್ಷ ಕಳೆದರೂ ನಿನ್ನ ನೆನಪಿನಲ್ಲೇ ಇರುವ
ದುಃಖತಪ್ತರು:
ತಂದೆ: ಪಾಳ್ಯ ಕೃಷ್ಣ, ಜಿಲ್ಲಾ ಕಾಂಗ್ರೆಸ್ ಎಸ್ಟಿ ವಿಭಾಗದ ಅಧ್ಯಕ್ಷರು.
ತಾಯಿ: ಶಿವಮ್ಮ, ಮಾಜಿ ಅಧ್ಯಕ್ಷರು, ಚಾ.ನಗರ ಜಿಲ್ಲಾ ಪಂಚಾಯ್ತಿ

ಪ್ರೇಮ್ ಚಂದ್ರನಾಯಕ
ಪಾಳ್ಯ ಗ್ರಾಮ, ಕೊಳ್ಳೇಗಾಲ ತಾಲ್ಲೂಕು,
ಜನನ: 10.08.1992, ಮರಣ: 22.04.2018

ವೈಕುಂಠ ಸಮಾರಾಧನೆ ಆಹ್ವಾನ



ಇವರು ದಿನಾಂಕ-10-04-2022ರ ಭಾನುವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ ತತ್ಸಂಬಂಧವಾಗಿ ವೈಕುಂಠ ಸಮಾರಾಧನೆ ಕಾರ್ಯವನ್ನು ದಿನಾಂಕ: 22-04-2022 ಶುಕ್ರವಾರ ಮಧ್ಯಾಹ್ನ 12-00 ಗಂಟೆಗೆ ಸ್ವಗೃಹದಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ

ದುಃಖತಪ್ತರು:
ಶ್ರೀಮತಿ ಪುಟ್ಟನಂಜಮ್ಮ, ಎಂ.ಎಸ್.ಸುದರ್ಶನ್, ಎಸ್.ಮಹೇಶ್, ಶ್ರೀಮತಿ ಮಂಜುಳಾ, ಶ್ರೀಮತಿ ಹೇಮಾವತಿ, ಶ್ರೀಮತಿ ಸುಮಾ ಹಾಗೂ ಕುಟುಂಬವರ್ಗದವರು.

ಸ್ಥಳ
ಮನೆ ನಂ.31, ಟ್ರ್ಯಾಂಗಲ್ ಫಾರ್ಚುನ್ ಲೇಔಟ್, ಬಸವೇಶ್ವರ ಸಮುದಾಯ ಭವನದ ಹತ್ತಿರ, ಬೋಗಾದಿ, ಮೈಸೂರು.

ಎಸ್.ಸಿದ್ದಯ್ಯ